ತಪ್ಪು ಕಲ್ಪನೆಗಳು

ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಇಸ್ಲಾಮಿನ ಬಗ್ಗೆ ಇಂದು ನಮ್ಮ ದೇಶ ಬಾಂಧವರಲ್ಲಿ ವ್ಯಾಪಕವಾಗಿರುವ ಕೆಲವು ಪ್ರಮುಖ ತಪ್ಪು ಕಲ್ಪನೆಗಳನ್ನು ನೀಗಿಸುವುದೇ ಈ ಗ್ರಂಥದ ಉದ್ದೇಶ. ಇಸ್ಲಾಮಿನ ಅಧ್ಯಯನಕ್ಕೆ ತಡೆಯಾಗಿರುವ ಈ ತಪ್ಪು ಕಲ್ಪನೆಗಳ ನಿವಾರಣೆಯಿಂದ ಹೆಚ್ಚಿನ ಅಧ್ಯಯನಕ್ಕೆ ಆಸಕ್ತಿ ಉಂಟಾಗ ಬಹುದು ಎಂದು ನಿರೀಕ್ಷಿಸಲಾಗಿದೆ. ಇಂದಿನ ವೈಷಮ್ಯಪೂರ್ಣ, ಕೋಮು ಕಲುಷಿತ ವಾತಾವರಣವನ್ನು ತಿಳಿಗೊಳಿಸಲೂ ಈ ಪುಸ್ತಕ ಸಹಕಾರಿಯಾದೀತೆಂಬ ನಂಬಿಕೆ ನಮಗಿದೆ.

ಪವಿತ್ರ ಕುರ್‌ಆನ್, ಪ್ರವಾದಿವರ್ಯರಾದ ಹ. ಮುಹಮ್ಮದ್‌ರವರ(ಸ) ವಚನಗಳು, ಅವರ ಹಾಗೂ ಅವರ ಸಂಗಾತಿಗಳಾದ ಸಹಾಬಿಗಳ (ರದಿಯಲ್ಲಾಹು ಅನ್‌ಹುಮ್) ಜೀವನ ಚರಿತ್ರೆ ಹಾಗೂ ಇಸ್ಲಾಮಿನ ಶಿಕ್ಷಣಗಳನ್ನೊಳಗೊಂಡ ಪುಸ್ತಕಗಳನ್ನು ಕನ್ನಡದಲ್ಲಿ ತರುವ ಹೊಣೆ ಹೊತ್ತ 'ಶಾಂತಿ ಪ್ರಕಾಶನ'ವು ಈ ಗ್ರಂಥವನ್ನು ತನ್ನ ಪ್ರಕಾಶನ ಮಾಲೆಯ 29ನೆಯ ಕುಸುಮವಾಗಿ ಕನ್ನಡ ಕುಲಕೋಟಿಗೆ ಅರ್ಪಿಸಿದೆ.

ಮುಸ್ಲಿಮೇತರ ಬಂಧುಗಳಿಗಾಗಿಯೇ ರಚಿಸಲಾಗಿರುವ ಈ ಗ್ರಂಥವು ಇಸ್ಲಾಮೀ ಸಂದೇಶ ಪ್ರಚಾರದ ಹೊಣೆ ಹೊತ್ತ ಮುಸ್ಲಿಮ್ ಬಂಧುಗಳಿಗೂ ಅಷ್ಟೇ ಉಪಯುಕ್ತವೆನಿಸುವುದರಲ್ಲಿ ಸಂದೇಹವಿಲ್ಲ.

ಶಾಂತಿ ಪ್ರಕಾಶನ

'ತಪ್ಪುಕಲ್ಪನೆಗಳು' ಎಂಬ ಗ್ರಂಥವನ್ನೋದಿದಾಗ ಇಸ್ಲಾಮ್ ಧರ್ಮದ ಬಗ್ಗೆ ನನ್ನ ಕಣ್ಣು ತೆರೆಯಿಸಿತು. ಅಲ್ಲಿ ವಿವರಣೆಗೊಂಡಿರುವ ಹಲವು ಧಾರ್ಮಿಕಾಚರಣೆಗಳು ತಿರಸ್ಕರಣೀಯವಲ್ಲವೆಂದೇ ತೋರುತ್ತದೆ. ನಿಜಕ್ಕೂ ಇದು ಎಲ್ಲ ಭಾರತೀಯರು ಓದಬೇಕಾದ ಗ್ರಂಥ.

☞ ಪ್ರೊ ದೇ. ಜವರೇಗೌಡ (ದೇಜಗೌ)

['ಪ್ರವಾದಿ ಮುಹಮ್ಮದ್(ಸ) ಜೀವನ ಮತ್ತು ಸಂದೇಶ' ಎಂಬ ಗ್ರಂಥದ ಮುನ್ನುಡಿಯಲ್ಲಿ]

ಅನುಕ್ರಮಣಿಕೆ

ಸೂಚನೆ

1. ಪ್ರವಾದಿ ಮುಹಮ್ಮದ್ ಅವರ ಪ್ರಸ್ತಾಪ ಬಂದಾಗಲೆಲ್ಲ ಹೆಸರಿನ ಜೊತೆಗೆ '(ಸ ಎಂದು ಆವರಣಗಳಲ್ಲಿ ಕೊಡಲಾಗಿದೆ. ಇದು 'ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂಬುದರ ಸಂಕ್ಷಿಪ್ತ ಸಂಕೇತ. ಇದರರ್ಥ ಅಲ್ಲಾಹನ ಅನುಗ್ರಹಗಳೂ ಶಾಂತಿಯೂ ಅವ ಮೇಲಿರಲಿ ಎಂದಾಗಿದೆ. ಪವಿತ್ರ ಕುರ್‌ಆನಿನ ಒಂದು ವಾಕ್ಯದಲ್ಲಿ ಪ್ರವಾ ಮುಹಮ್ಮದ್‌ರವರ(ಸ) ಮೇಲೆ ಸ್ವಸ್ತಿ ವಚನ ಹೇಳಲು ಮುಸ್ಲಿಮರಿಗೆ ಆದೇಶಿಸಲಾಗಿದ ಪ್ರವಾದಿವರ್ಯರೂ(ಸ) ತಮ್ಮ ಹೆಸರೆತ್ತಲಾದಾಗಲೆಲ್ಲಾ ತಮಗಾಗಿ ಅಲ್ಲಾಹನ ಅನುಗ್ರಹ ಪ್ರಾರ್ಥಿಸಬೇಕೆಂದು ಮುಸ್ಲಿಮರಿಗೆ ಆದೇಶಿಸಿದ್ದಾರೆ. 'ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂಬುದು ಅತ್ಯಂತ ಸಂಕ್ಷಿಪ್ತವಾದ ಸ್ವಸ್ತಿ ವಚನ. ಅದನ್ನು ವಾಚಕರಿಗೆ ಜ್ಞಾಪಿಸು ಸಲುವಾಗಿಯೇ '(ಸ)' ಎಂಬ ಸಂಕೇತಾಕ್ಷರವನ್ನು ಅವರ ಹೆಸರು ಬಂದಾಗಲೆಲ್ ಬಳಸಲಾಗಿದೆ. ಈ ರೀತಿಯ ಪ್ರಾರ್ಥನೆಯು ಕೇವಲ ಪ್ರವಾದಿ ಮುಹಮ್ಮದ್‌ರವರಿಗೆ(ಸ ಸೀಮಿತವಲ್ಲ. ಆದಿಮಾನವರೂ ಪ್ರಥಮ ಪ್ರವಾದಿಯೂ ಆದ ಆದಮ್‌ರಿಂದ(ಅ)ತೊಡ ಅವರಿಂದ ಈಸಾ (ಏಸುಕ್ರಿಸ್ತ)ರವರ(ಅ) ತನಕ ಬಂದ ಎಲ್ಲ ಪ್ರವಾದಿಗಳ ಪ್ರಸ್ತಾಪ ವೇಳೆಯೂ ಮುಸ್ಲಿಮರು 'ಅಲೈಹಿಸ್ಸಲಾಮ್' ಅರ್ಥಾತ್ 'ಅವರ ಮೇಲೆ ಶಾಂತಿ ಇರಲಿ ಎಂದು ಪ್ರಾರ್ಥಿಸುತ್ತಾರೆ. ಇದರ ಸಂಕೇತವಾಗಿ ಆ ಎಲ್ಲ ಪ್ರವಾದಿಗಳ ಹೆಸರಿನ ಜೊತೆ ಆವರಣದಲ್ಲಿ '(ಅ)' ಎಂಬ ಅಕ್ಷರವನ್ನು ಬರೆಯಲಾಗುತ್ತದೆ.

2. ಪ್ರವಾದಿ ಸಂಗಾತಿಗಳ ಹೆಸರಿನ ಪ್ರಸ್ತಾಪ ಬಂದಲ್ಲೆಲ್ಲಾ '(ರ)' ಎಂ ಸಂಕೇತಾಕ್ಷರವನ್ನು ಬಳಸಲಾಗಿದೆ. ಇದು 'ರದಿಯಲ್ಲಾಹು ಅನ್‌ಹು' ಎಂಬ ಅರ ನುಡಿಯ ಸಂಕೇತ. ಇದರರ್ಥ 'ಅಲ್ಲಾಹನು ಅವರಿಂದ ಸಂಪ್ರೀತನಾಗಲಿ' ಎಂದಾಗಿದ ಪ್ರವಾದಿವರ್ಯರ(ಸ) ಸಂಗಾತಿಗಳ ಕುರಿತು ಈ ನುಡಿಯು ಪವಿತ್ರ ಕುರ್‌ಆನಿನಲ್ಲಿ ಬಂದಿದ ಸತ್ಯಧರ್ಮಕ್ಕಾಗಿ ಅವರು ಮಾಡಿದ ತ್ಯಾಗಗಳಿಗಾಗಿ ಇದು ಅಲ್ಲಾಹನು ಅವರಿಗೆ ಕೊಟ ಮೆಚ್ಚುಗೆಯ ಬಿರುದು. ಮುಸ್ಲಿಮರು ಅವರ ಹೆಸರೆತ್ತಿದಾಗಲೆಲ್ಲ ಈ ನುಡಿಯನ ಪಠಿಸುತ್ತಾರೆ. ಇಸ್ಲಾಮಿಗೆ ಅವರು ಮಾಡಿದ ಸೇವೆಗಳಿಗಾಗಿ ಇದು ಅವರಿಗೆ ತೋರು ಗೌರವವಾಗಿದೆ. ಇದು ಪ್ರವಾದಿವರ್ಯರ(ಸ) ಸಂಗಾತಿಗಳಿಗೇ ಸೀಮಿತವಾದ ಒಂದ ಪ್ರಾರ್ಥನೆಯೂ ಹೌದು.

3. ಪ್ರವಾದಿವರ್ಯರ(ಸ) ಮತ್ತು ಅವರ ಸಂಗಾತಿಗಳ ಹೆಸರಿನ ಆರಂಭದಲ್ಲಿ 'ಹ ಎಂಬ ಅಕ್ಷರವನ್ನು ಕೊಡಲಾಗಿದೆ. ಇದು ಅವರಿಗೆ ಗೌರವ ಸೂಚಕವಾಗಿ ಬಳಸಲ್ಪಡು 'ಹಝ್ರತ್' ಎಂಬ ಪದದ ಸಂಕೇತ. 'ಸನ್ಮಾನ್ಯರು' ಎಂಬರ್ಥದಲ್ಲಿ ಈ ಪದವನ್ನು ಎ ಮಹಾನ್ ವ್ಯಕ್ತಿಗಳ ಹೆಸರಿನ ಆರಂಭದಲ್ಲಿ ಬಳಸುವುದು ರೂಢಿ.

– ಪ್ರಕಾಶಕರು

ಧ್ಯಾಯ: ಒಂದು

ಏಕದೇವ ವಿಶ್ವಾಸ

ಏಕದೇವ ವಿಶ್ವಾಸವು ಇಸ್ಲಾಮ್ ಧರ್ಮದ ಮೂಲಭೂತ ವಿಶ್ವಾಸವಾಗಿದೆ. ಏಕದೇವ ಶ್ವಾಸವೆಂಬ ತಳಹದಿಯ ಮೇಲೆಯೇ ಇಸ್ಲಾಮ್ ಧರ್ಮದ ಸೌಧವು ನಿಂತಿದೆ. ದುದರಿಂದ ಇಸ್ಲಾಮ್ ಧರ್ಮದ ಬಗ್ಗೆ ತಿಳಿಯ ಬಯಸುವವರು ಮೊದಲು ಏಕದೇವ ಶ್ವಾಸದ ಕುರಿತು ಸರಿಯಾಗಿ ಅರಿತಿರುವುದು ಅತ್ಯಗತ್ಯ.

ಈ ಜಗತ್ತಿನ ಸೃಷ್ಟಿಕರ್ತ ಒಬ್ಬನೇ. ಅವನೇ ಸಮಸ್ತ ವಿಶ್ವವನ್ನೂ ಅದೊಳಗೊಂಡಿರುವ ಕಲ ಚರಾಚರಗಳನ್ನೂ ಸೃಷ್ಟಿಸಿದವನು. ಮನುಷ್ಯರನ್ನೂ ಇತರ ಎಲ್ಲ ಜೀವಜಾಲಗಳನ್ನೂ ವನೇ ಪೋಷಿಸಿ ಬೆಳೆಸುತ್ತಿದ್ದಾನೆ. ಸರ್ವಲೋಕದ ಒಡೆತನ ಮತ್ತು ಆಧಿಪತ್ಯವು ಅವನಿಗೇ ೞರಿದೆ. ಆ ಏಕದೇವನನ್ನೇ ಪವಿತ್ರ ಕುರ್‌ಆನಿನಲ್ಲಿ 'ಅಲ್ಲಾಹ್' ಎಂದು ಕರೆಯಲಾಗಿದೆ. ಗತ್ತಿನ ಏಕೈಕ ಸೃಷ್ಟಿಕರ್ತನೂ ಪರಿಪಾಲಕನೂ ಒಡೆಯನೂ ಅಧಿಪತಿಯೂ ಅಲ್ಲಾಹನೇ ಗಿರುವಾಗ ಮನುಷ್ಯನ ಆರಾಧನೆ, ದಾಸ್ಯ ಮತ್ತು ಅನುಸರಣೆಗಳೂ ಆತನಿಗೇ ಸಲ್ಲಬೇಕೆಂಬುದು ುದ್ಧಿಯ ಬೇಡಿಕೆಯಾಗಿದೆ.

ಅಲ್ಲಾಹ್: ಕೇವಲ ಮುಸ್ಲಿಮರ ದೇವರಲ್ಲ!

ನಿಜವಾಗಿ 'ಅಲ್ಲಾಹ್' ಕೇವಲ ಮುಸ್ಲಿಮರ ದೇವರಲ್ಲ. ಶ್ರೀರಾಮ, ಶ್ರೀಕೃಷ್ಣರು ಂದೂಗಳ ದೇವರಾಗಿರುವಂತೆ, ಏಸುಕ್ರಿಸ್ತರು ಕ್ರೈಸ್ತರ ದೇವರಾಗಿರುವಂತೆ, ಮಹಾವೀರರು ಜೈನರ ದೇವರಾಗಿರುವಂತೆ 'ಅಲ್ಲಾಹ್' ಮುಸ್ಲಿಮರ ದೇವರು ಎಂದು ಕೆಲವರು ಭಾವಿಸುತ್ತಾರೆ. ಆದರೆ ಪವಿತ್ರ ಕುರ್‌ಆನ್ ಈ ವಾದವನ್ನು ಸ್ಪಷ್ಟವಾಗಿ ಖಂಡಿಸುತ್ತದೆ. ಅದರ ಪ್ರಥಮ ವಾಕ್ಯವೇ ಅಲ್ಲಾಹನನ್ನು ಈ ರೀತಿ ಪರಿಚಯಿಸುತ್ತದೆ: "ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು." (ಪವಿತ್ರ ಕುರ್‌ಆನ್: 1: 1)

ಪವಿತ್ರ ಕುರ್‌ಆನಿನ ಕೊನೆಯ ಅಧ್ಯಾಯದಲ್ಲಿ ಅಲ್ಲಾಹನ ಕುರಿತು ಹೀಗೆ ಪ್ರಸ್ತಾಪಿಸಲಾಗಿದೆ: "ಹೇಳಿರಿ- ನಾನು ಅಭಯ ಯಾಚಿಸುತ್ತೇನೆ- ಮಾನವರ ಪ್ರಭುವಿನ, ಮಾನವರ ಸಾಮ್ರಾಟನ, ಮಾನವರ ನೈಜ ಆರಾಧ್ಯನ." (ಪವಿತ್ರ ಕುರ್‌ಆನ್: 114: 1-3)

ಪವಿತ್ರ ಕುರ್‌ಆನಿನ ಒಂದೇ ಒಂದು ಸೂಕ್ತದಲ್ಲಾಗಲೀ ಪ್ರವಾದಿ ಮುಹಮ್ಮದ್‌ರ(ಒಂದೇ ಒಂದು ವಚನದಲ್ಲಾಗಲೀ ಅಲ್ಲಾಹನನ್ನು ಮುಸ್ಲಿಮರ ದೇವರು ಎಂದು ಎಲ ಪ್ರಸ್ತಾಪಿಸಿಲ್ಲ. ಪವಿತ್ರ ಕುರ್‌ಆನಿನಲ್ಲಿ ಆ ಏಕದೇವನ ತೊಂಬತ್ತೊಂಬತ್ತು ಗುಣನಾ ಗಳನ್ನು ಪ್ರಸ್ತಾಪಿಸಲಾಗಿದೆ. ಆ ಪೈಕಿ ಯಾವ ಗುಣವೂ ಅಲ್ಲಾಹನು ಯಾವುದೇ ಒಂ ಕೋಮಿನ, ಜನಾಂಗದ ಅಥವಾ ವರ್ಗದ ದೇವನೆಂದು ಸೂಚಿಸುವುದಿಲ್ಲ. ಬದಲ ಆತನನ್ನು ಭೂಮಿ-ಆಕಾಶಗಳ ಮತ್ತು ಅವುಗಳ ಮಧ್ಯೆ ಇರುವ ಎಲ್ಲ ವಸ್ತುಗಳ ಸೃಷ್ಟಿಕರ್ತ ಪ್ರಭು ಮತ್ತು ಪರಿಪಾಲಕನೆಂದು ಅದು ಘಂಟಾಘೋಷವಾಗಿ ಸಾರುತ್ತದೆ.

ಇಸ್ಲಾಮಿನ ಮೂಲವಚನ

'ಲಾ ಇಲಾಹ ಇಲ್ಲಲ್ಲಾಹು, ಮುಹಮ್ಮದರ್ರಸೂಲುಲ್ಲಾಹ್' ಅರ್ಥಾತ್ 'ಅಲ್ಲಾಹ ಹೊರತು ದಾಸ್ಯ ಮತ್ತು ಆರಾಧನೆಗೆ ಅರ್ಹನಾದವನು ಯಾರೂ ಇಲ್ಲ. ಮುಹಮ್ಮದರು(ಅಲ್ಲಾಹನ ಸಂದೇಶವಾಹಕರಾಗಿದ್ದಾರೆ' ಎಂಬುದು ಇಸ್ಲಾಮಿನ ಮೂಲ ವಚನ. ಈ ಪವಿ ವಚನವೇ ಪವಿತ್ರ ಕುರ್‌ಆನಿನ ಶಿಕ್ಷಣಗಳ ತಿರುಳು. ಮನುಷ್ಯನ ಎಲ್ಲ ರೀತಿಯ ಆರಾಧ ದಾಸ್ಯ ಮತ್ತು ಅನುಸರಣೆಗೆ ಅರ್ಹನಾದವನು ಅಲ್ಲಾಹನು ಮಾತ್ರ. ಆತನ ದೇವತ್ವದ ಯಾರೂ ಭಾಗೀದಾರರಿಲ್ಲ. ಅವನು ಏಕೈಕನು, ಚಿರಂತನನು, ನಿರಾಕಾರನು, ಸ್ವಯ ಜೀವಂತನು, ಅನಾದಿ, ಅನಂತನು, ಎಲ್ಲ ಅತ್ಯುತ್ತಮ ಗುಣಗಳೂ ಅತ್ಯುನ್ನತ ಮಟ್ಟದ ಆತನಲ್ಲಿ ಸಮ್ಮಿಳಿತವಾಗಿವೆ. ಆತನು ಸರ್ವ ಸದ್ಗುಣ ಸಂಪನ್ನನು. ಎಲ್ಲ ನ್ಯೂನ ಕೊರತೆಗಳಿಂದ ಮತ್ತು ಮನುಷ್ಯನಿಗೆ ಊಹಿಸಲು ಸಾಧ್ಯವಾಗುವ ಯಾವುದೇ ರೀತಿ ದೌರ್ಬಲ್ಯಗಳಿಂದ ಅವನು ಸಂಪೂರ್ಣ ಮುಕ್ತನಾಗಿರುವನು.

ಪವಿತ್ರ ಕುರ್‌ಆನಿನ ಪ್ರತಿಯೊಂದು ಪುಟದಲ್ಲೂ ಮೇಲೆ ಪ್ರಸ್ತಾಪಿಸಿದ ಏಕದೇ ಕಲ್ಪನೆಯ ವಿವರಣೆಗಳು ಬೇರೆ ಬೇರೆ ರೀತಿಯಲ್ಲಿ ಬಂದಿವೆ. ಆ ಪೈಕಿ ಕೆಲವನ್ನು ಮಾ ಇಲ್ಲಿ ಉಲ್ಲೇಖಿಸುತ್ತಿದ್ದೇವೆ: "ಹೇಳಿರಿ- ಅವನು ಅಲ್ಲಾಹನು ಏಕೈಕನು. ಅಲ್ಲಾಹ ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿ ಯಾವುದೇ ಸಂತಾನವಿಲ್ಲ, ಅವನು ಯಾರ ಸಂತಾನವೂ ಅಲ್ಲ ಮತ್ತು ಅವನಿ ಸರಿಸಮಾನರು ಯಾರೂ ಇಲ್ಲ." (ಪವಿತ್ರ ಕುರ್‌ಆನ್: 112: 1-4)

ಈ ಅಧ್ಯಾಯದಲ್ಲಿ ದೇವನಿಗೆ ಸಹಭಾಗಿಗಳಿರುವರು, ಪುತ್ರ-ಪುತ್ರಿಯರಿರುವ ಹಾಗೂ ಅವನಿಗೆ ಮಡದಿ ಮಕ್ಕಳಿರುವರು ಎಂಬ ಕಲ್ಪನೆಗಳನ್ನು ಸ್ಪಷ್ಟವಾಗಿ ಖಂಡಿ ಲಾಗಿದೆ. ಇನ್ನೊಂದು ಕಡೆ ಪವಿತ್ರ ಕುರ್‌ಆನಿನಲ್ಲಿ ಏಕದೇವ ಕಲ್ಪನೆಯನ್ನು ಈ ರೀ ಸ್ಪಷ್ಟಪಡಿಸಲಾಗಿದೆ: "ಅಲ್ಲಾಹನು ಚಿರಂತನನು, ಸ್ವಯಂಜೀವಂತನು. ಅಖಿಲ ಪ್ರಪಂಚ

ಖಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ್ರಯಾಗಲೀ ಬಾಧಿಸುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ನದೇ. ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆಯಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ಸರ ಮುಂದಿರು ವುದನ್ನೂ ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಲ್ಲನು. ಆತನು ಸ್ವತಃ ತಿಳಿಯಗೊಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ಷಯವನ್ನೂ ಅವರು ತಿಳಿಯಲಾರರು. ಅವನ ಅಧಿಕಾರವು ಆಕಾಶಗಳನ್ನೂ ಭೂಮಿಯನ್ನೂ ್ಯಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂಥ ಕಾರ್ಯವಲ್ಲ. ಅವನು ಏಕೈಕ ಹೋನ್ನತನೂ ಸರ್ವ ಶ್ರೇಷ್ಠನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್: 2: 255)

ಕ್ಷಮ್ಯ ಅಪರಾಧ

ಜನರು ತಾವಾಗಿ ಎಷ್ಟು ಮಂದಿ ದೇವರುಗಳನ್ನು ಸೃಷ್ಟಿಸಿಕೊಂಡಿದ್ದರೂ ವಾಸ್ತವದಲ್ಲಿ ವತ್ವವು ಸರ್ವ ಸಂಪೂರ್ಣವಾಗಿ ಆ ಏಕೈಕನೂ ಅಮರನೂ ಆದ ಅಲ್ಲಾಹನಿಗೆ ಮಾತ್ರ ರಿದೆ. ಈ ಅಗಾಧ ವಿಶ್ವದ ಸೃಷ್ಟಿ, ನಿಯಂತ್ರಣ, ಪರಿಪಾಲನೆಯ ಕಾರ್ಯಗಳನ್ನು ಯಾರ ರವೂ ಸಹಭಾಗಿತ್ವವೂ ಇಲ್ಲದೆ ಆತನೇ ಮಾಡುತ್ತಿರುವನು. ವಿಶ್ವದ ನೈಜ ಒಡೆತನ ಮತ್ತು ಧಿಪತ್ಯವು ಅವನಿಗೇ ಸೇರಿದೆ. ಅವನ ವ್ಯಕ್ತಿತ್ವದಲ್ಲಾಗಲೀ ಗುಣ ವಿಶೇಷಗಳಲ್ಲಾಗಲೀ ಧಿಕಾರಗಳಲ್ಲಾಗಲೀ ಹಕ್ಕುಗಳಲ್ಲಾಗಲೀ ಯಾರೂ ಪಾಲುದಾರರಿಲ್ಲ. ಈ ವಿಶ್ವಾಸವು ಸ್ಲಾಮಿನ ಜೀವಾಳವಾಗಿದೆ. ಆದುದರಿಂದಲೇ ಪವಿತ್ರ ಕುರ್‌ಆನ್ ಬಹುದೇವಾರಾಧನೆ ಖಂತಾದ ಏಕದೇವ ವಿಶ್ವಾಸಕ್ಕೆ ವಿರುದ್ಧವಾದ ಎಲ್ಲ ರೀತಿಯ ಆಚಾರ-ವಿಚಾರಗಳನ್ನು ಕ್ಷಮ್ಯ ಅಪರಾಧವೆಂದು ಪರಿಗಣಿಸುತ್ತದೆ: "ಅಲ್ಲಾಹನು ತನ್ನೊಂದಿಗೆ ಇತರರನ್ನು ಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ೂರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ತರ ಯಾರನ್ನಾದರೂ ಸಹಭಾಗಿಯನ್ನಾಗಿ ಮಾಡಿದವನು ಅತಿ ದೊಡ್ಡ ಸುಳ್ಳನ್ನು ್ಟಿಸಿದನು ಮತ್ತು ಅತ್ಯಂತ ಘೋರ ಪಾಪವೆಸಗಿದನು." (ಪವಿತ್ರ ಕುರ್‌ಆನ್: 4: 48)

ಇನ್ನೊಂದೆಡೆ ಪವಿತ್ರ ಕುರ್‌ಆನ್ ಬಹುದೇವತ್ವವನ್ನು ಅತಿದೊಡ್ಡ ಅನ್ಯಾಯವೆಂದು ಎರಿದೆ: "ಖಂಡಿತವಾಗಿಯೂ ದೇವಸಹಭಾಗಿತ್ವವು (ಬಹುದೇವಾರಾಧನೆಯು) ಅತಿದೊಡ್ಡ ಕ್ರಮವಾಗಿದೆ." (ಪವಿತ್ರ ಕುರ್‌ಆನ್: 31: 13)

ಮತ್ತೊಂದೆಡೆ ಪವಿತ್ರ ಕುರ್‌ಆನ್ ಬಹುದೇವ ವಿಶ್ವಾಸವು ಮನುಷ್ಯನನ್ನು ಪರಲೋಕ ದಲ್ಲಿ ಸ್ವರ್ಗಕ್ಕೆ ಅನರ್ಹಗೊಳಿಸಿ ಶಾಶ್ವತ ನರಕ ಯಾತನೆಗೆ ಗುರಿಪಡಿಸುವುದೆಂದು ಾರಿದೆ: "ಅಲ್ಲಾಹನೊಂದಿಗೆ ಇನ್ನಾರನ್ನಾದರೂ ಸಹಭಾಗಿಗಳನ್ನಾಗಿ ಮಾಡಿದವನಿಗೆ ಅಲ್ಲಾಹನು

ಸ್ವರ್ಗವನ್ನು 'ನಿಷಿದ್ಧ'ಗೊಳಿಸಿರುತ್ತಾನೆ ಮತ್ತು ಅವನ ವಾಸಸ್ಥಾನವು 'ನರಕ' ಆಗಿರುತ್ತ
ಇಂತಹ ಅಕ್ರಮಿಗಳಿಗೆ ಯಾರೂ ಸಹಾಯಕರಿಲ್ಲ" (ಪವಿತ್ರ ಕುರ್‌ಆನ್: 5: 72)

ಈ ವಿವರಣೆಗಳಿಂದ ಒಬ್ಬ ಸಾಮಾನ್ಯ ವಾಚಕನಿಗೂ ಏಕದೇವ ವಿಶ್ವಾಸದ ಮಹ ಮತ್ತು ಬಹುದೇವವಿಶ್ವಾಸದ ದುಷ್ಪರಿಣಾಮ ತಿಳಿಯದಿರಲಾರದು. ಮಾತ್ರವಲ್ಲ ಮುಸ್ಲಿಮ ತಮ್ಮ ಈ ಏಕದೇವ ವಿಶ್ವಾಸದ ಬಗ್ಗೆ ಏಕೆ ಇಷ್ಟು ಭಾವುಕರಾಗಿದ್ದಾರೆಂಬುದೂ ಇದರಿಂ ವ್ಯಕ್ತವಾಗುತ್ತದೆ. ಅಲ್ಲಾಹನ ಹೊರತು ಯಾರನ್ನೇ ಆಗಲಿ ಪೂಜಿಸುವುದು, ಪೂಜ್ಯನೆಂ ಪರಿಗಣಿಸುವುದು, ಪ್ರಾರ್ಥನೆಗಳನ್ನು ಸಲ್ಲಿಸುವುದು, ಇತರ ವ್ಯಕ್ತಿಗಳ, ಶಕ್ತಿಗಳ ಅಥ ವಸ್ತುಗಳ ಮುಂದೆ ಕೈ ಕಟ್ಟಿ ನಿಲ್ಲುವುದು, ಶಿರಬಾಗುವುದು, ಸಾಷ್ಟಾಂಗವೆರಗುವುದ ಅವರಿಗೆ ಹರಕೆ ಹೊರುವುದು, ಅವರನ್ನು ಆಪತ್ಕಾಲದಲ್ಲಿ ಕರೆದು ಪ್ರಾರ್ಥಿಸುವುದು ಇತ್ಯಾ ಗಳೆಲ್ಲವೂ ಮುಸ್ಲಿಮರ ಮಟ್ಟಿಗೆ ಅಕ್ಷಮ್ಯ ಅಪರಾಧಗಳು. ಈ ದೇವೇತರರು ದೇವಚರರ ದೇವದೂತರೋ ಅಥವಾ ಮಹಾತ್ಮರೋ ಎಂಬುದು ನಗಣ್ಯ.

ಹೆತ್ತ ತಾಯಿಯಾಗಲೀ ಹುಟ್ಟಿಗೆ ಕಾರಣನಾದ ತಂದೆಯಾಗಲೀ ವಿದ್ಯೆ ಕಲಿಸಿ ಗುರುಗಳಾಗಲೀ ಮಾರ್ಗದರ್ಶನ ಮಾಡುವ ನಾಯಕರಾಗಲೀ ಇವರೆಲ್ಲಾ ಗೌರವಾರ್ಹರ ಆದರೆ ಅವರಾರೂ ಮನುಷ್ಯನ ಪಾಲಿಗೆ ದೇವರೋ ದೇವಸಮಾನರೋ ಖಂಡಿತ ಅ ಅಂತೆಯೇ ಮಾತೃಭೂಮಿ ಪ್ರೀತ್ಯರ್ಹವೇ ಹೊರತು ಪೂಜನೀಯವಲ್ಲ. ಈ ವಿಷಯದ ಮುಸ್ಲಿಮರು ಯಾರ ಒತ್ತಡಕ್ಕೂ ಮಣಿಯಬಾರದು ಮತ್ತು ಯಾರಿಗಾಗಿಯೂ ದೇವೇತ ಶಕ್ತಿ, ವ್ಯಕ್ತಿ ಅಥವಾ ವಸ್ತುಗಳನ್ನು ಪೂಜಿಸಬಾರದೆಂದು ಪವಿತ್ರ ಕುರ್‌ಆನ್ ಆಜ್ಞಾಪಿಸಿ ಆದುದರಿಂದಲೇ ಮುಸ್ಲಿಮರು ಇಂತಹ ವಿಷಯಗಳಲ್ಲಿ ಯಾವುದೇ ಹೊಂದಾಣಿಕ ಸಿದ್ಧರಾಗುವುದಿಲ್ಲ.

❖ ❖ ❖ ❖

ಧ್ಯಾಯ: ಎರಡು

ಇಸ್ಲಾಮೇತರ ಆಚಾರ-ಸಂಪ್ರದಾಯಗಳು

ಏಕದೇವ ವಿಶ್ವಾಸದ ಬಗ್ಗೆ ಮುಸ್ಲಿಮರು ಇಷ್ಟು ದೃಢ ನಿಲುಮೆಯವರಾಗಿರುವಾಗ ಂದು ನಮ್ಮ ಪರಿಸರದಲ್ಲಿ ಮುಸ್ಲಿಮ್ ಜನಸಾಮಾನ್ಯರಲ್ಲಿ ಕಂಡು ಬರುವಂತಹ ಕದೇವ ವಿಶ್ವಾಸಕ್ಕೆ ಹೊಂದಿಕೊಳ್ಳದ ಅನೇಕ ಆಚಾರ-ಸಂಪ್ರದಾಯಗಳು ಜನರನ್ನು ಂದಲಕ್ಕೀಡು ಮಾಡುವುದು ಸಹಜ. ಆದ್ದರಿಂದ ಆ ಬಗ್ಗೆ ಒಂದೆರಡು ವಿಷಯಗಳನ್ನು ಲ್ಲಿ ಪ್ರಸ್ತಾಪಿಸುವುದು ಅಗತ್ಯವೆನಿಸುತ್ತದೆ.

'ಕಬರ್ ಝಿಯಾರತ್' ಅಥವಾ 'ಸಮಾಧಿ ಸಂದರ್ಶನ' ಒಳ್ಳೆಯದೆಂದು ಪ್ರವಾದಿ ುಹಮ್ಮದ್(ಸ) ತಮ್ಮ ಅನುಯಾಯಿಗಳಿಗೆ ಬೋಧಿಸಿದ್ದಾರೆ. ತನ್ನ ಮರಣವನ್ನು ಸ್ಮರಿಸು ದು, ಪರಲೋಕ ಜೀವನದ ಬಗ್ಗೆ ಪ್ರಜ್ಞಾವಂತನಾಗುವುದು ಮತ್ತು ತನ್ನ ಮೃತ ಬಂಧುಗಳ ೋಕ್ಷಕ್ಕಾಗಿ ಪ್ರಾರ್ಥಿಸುವುದು ಸಮಾಧಿ ಸಂದರ್ಶನದ ಉದ್ದೇಶ. ಇದು ಪ್ರವಾದಿ ರ್ಯೆಯಾಗಿದ್ದು ಪುಣ್ಯ ಕಾರ್ಯವಾಗಿದೆ.

ಆದರೆ ಗೋರಿಗಳನ್ನು ಎತ್ತರಿಸಿ ಕಟ್ಟುವ, ಅವು ಗಳನ್ನು ಅಲಂಕರಿಸುವ, ಅವುಗಳ ೇಲೆ ಬಟ್ಟೆ ಹೊದಿಸುವ, ದೀಪ ಬೆಳಗಿಸುವ ಹಾಗೂ ಅಗರಬತ್ತಿಗಳನ್ನು ಹೊತ್ತಿಸುವ ಂಪ್ರದಾಯಗಳು ಪ್ರವಾದಿಚರ್ಯೆಗೆ ವಿರುದ್ಧವಾಗಿವೆ. ಗೋರಿ ಸಂದರ್ಶನವನ್ನು 'ಗೋರಿ ೂಜೆ'ಯಾಗಿ ಮಾರ್ಪಡಿಸಬಹುದಾದ ಇಂತಹ ಸಂಪ್ರದಾಯಗಳಿಗೆ ಇಸ್ಲಾಮಿನ ೂಲಗ್ರಂಥಗಳಾದ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಯಾವ ಆಧಾರವೂ ಇಲ್ಲ. ಾಗೆಯೇ ಸಂತರ ಸಮಾಧಿಗಳಲ್ಲಿ ನಡೆಸಲ್ಪಡುವ 'ಉರೂಸ್' ಎಂಬ ಉತ್ಸವಗಳಿಗೆ ಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲ. ಇದು ಇಸ್ಲಾಮಿ ನೊಳಗೆ ುಸುಳಿ ಕೊಂಡಿರುವ ಅನ್ಯಧರ್ಮೀಯ ಸಂಪ್ರದಾಯಗಳಾಗಿವೆ. ಇನ್ನು ಸಮಾಧಿಸ್ಥರಾದ ುಹಾತ್ಮರನ್ನು ಕರೆದು ಪ್ರಾರ್ಥಿಸುವುದಾಗಲೀ ಗೋರಿಗಳಿಗೆ ಸಾಷ್ಟಾಂಗವೆರಗುವುದಾಗಲೀ ಸ್ಲಾಮ್ ಧರ್ಮದ ಏಕದೇವ ವಿಶ್ವಾಸಕ್ಕೆ ತೀರಾ ವಿರುದ್ಧವಾಗಿರುವ ನಿಷಿದ್ಧ ಕಾರ್ಯವೆಂಬು ನ್ನು ಸ್ವಯಂ ಉರೂಸ್ ಸಂಪ್ರದಾಯದ ಬೆಂಬಲಿಗರೂ ಒಪ್ಪುತ್ತಾರೆ.

786 ಮತ್ತು ಬಾಲಚಂದ್ರ

ಕೆಲವರು '786' ಎಂಬ ಸಂಖ್ಯೆಯನ್ನು ಅಥವಾ ಬಾಲಚಂದ್ರ ಮತ್ತು ನಕ್ಷತ್ರವನ್ನೊಳಗೊಂಡ ಆಕೃತಿಯನ್ನು ಅಲ್ಲಾಹನ ಸಂಕೇತ ಎಂದು ಭಾವಿಸುವುದಿದೆ. ಆದರೆ ಅಲ್ಲಾಹನಿಗೆ ಅಥವಾ ಇಸ್ಲಾಮ್ ಧರ್ಮಕ್ಕೆ ಅಂತಹ ಯಾವ ಸಂಕೇತವೂ ಇಲ್ಲ. ಪವಿತ್ರ ಕುರ್‌ಆನಿನ ಪ್ರತಿಯೊಂದು ಅಧ್ಯಾಯದ ಆರಂಭದಲ್ಲಿ ಬರುವ "ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ" ಎಂಬರ್ಥದ ವಾಕ್ಯವನ್ನು ಸಂಕೇತಿಸಲು ಕೆಲವು ಮುಸ್ಲಿಮರು 786 ಎಂಬ ಸಂಖ್ಯೆಯನ್ನು ಬಳಸುತ್ತಾರೆ. 'ಅಬ್‌ಜದ್' ಎಂಬ ಅರಬಿ ಸಂಖ್ಯಾಶಾಸ್ತ್ರದ ಗಣನೆಯ ಪ್ರಕಾರ ಪ್ರಸ್ತುತ ವಾಕ್ಯದ ಮೊತ್ತವೇ 786 ಆಗುತ್ತದೆ. ಕೆಲವರು ಪವಿತ್ರ ಕುರ್‌ಆನಿನ ವಾಕ್ಯಕ್ಕೆ ಅಗೌರವ ಆಗದಿರಲಿ ಎಂಬ ಉದ್ದೇಶದಿಂದ ತಮ್ಮ ಪತ್ರಗಳಲ್ಲಿ '786' ಸಂಖ್ಯೆಯನ್ನು ಬರೆಯುತ್ತಾರೆ. ಮುಸ್ಲಿಮರು ತಮ್ಮ ಎಲ್ಲಾ ಕೆಲಸಗಳನ್ನೂ ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮ ದಿಂದಲೇ ಆರಂಭಿಸಬೇಕು ಎಂಬ ಪ್ರವಾದಿ ಮುಹಮ್ಮದ್‌ರವರ(ಸ) ಆದೇಶವನ್ನು ಪಾಲಿಸುವುದೇ ಹೀಗೆ ಮಾಡುವುದರ ಉದ್ದೇಶ. ಆದರೆ ಈ ರೀತಿ '786' ಎಂಬ ಸಂಖ್ಯೆಯನ್ನು ಬಳಸುವುದಕ್ಕೆ ಕುರ್‌ಆನ್-ಹದೀಸ್‌ಗಳಲ್ಲಿ ಯಾವುದೇ ಪುರಾವೆಯಿಲ್ಲ. ಅಂತೆಯೇ ಆ ಸಂಖ್ಯೆಗೆ ಯಾವುದೇ ಧಾರ್ಮಿಕ ಮಹತ್ವವೂ ಇಲ್ಲ.

ಇಸ್ಲಾಮೀ ಪಂಚಾಂಗವು ಚಾಂದ್ರಮಾನ ಕಾಲಗಣನೆಯನ್ನು ಅವಲಂಬಿಸಿದೆ. ಹಿಜರಿ ಶಕೆಯೂ ಚಾಂದ್ರಮಾನ ವರ್ಷವನ್ನಾಧರಿಸಿದೆ. ಹಜ್ಜ್ ಯಾತ್ರೆ ಮತ್ತು ಉಪವಾಸ ವ್ರತದಂತಹ ಪ್ರಮುಖ ಆರಾಧನಾ ಕರ್ಮಗಳು ಮತ್ತು ಇಸ್ಲಾಮಿನ ಎರಡು ಪ್ರಮುಖ ಹಬ್ಬಗಳಾದ 'ಈದುಲ್ ಫಿತ್ರ್' (ರಮಝಾನ್ ಹಬ್ಬ) ಮತ್ತು 'ಈದುಲ್ ಅಝ್‌ಹಾ' (ಬಕ್ರೀದ್) ಆಚರಣೆಯೂ ಚಂದ್ರದರ್ಶನವನ್ನಾಧರಿಸಿದೆ. ಆದುದರಿಂದ ಟರ್ಕಿಯ ಖಿಲಾಫತ್‌ನ ಕಾಲದಲ್ಲಿ ಬಾಲಚಂದ್ರ ಮತ್ತು ನಕ್ಷತ್ರವನ್ನು ಅಲ್ಲಿಯ ರಾಷ್ಟ್ರ ಧ್ವಜದಲ್ಲಿ ಅಳವಡಿಸಲಾಯಿತು. ಅಂದಿನಿಂದ ಅನೇಕ ಮುಸ್ಲಿಮರು ಅದನ್ನು ಒಂದು ಉತ್ತಮ ಸಂಕೇತದ ರೂಪದಲ್ಲಿ ಬಳಸುತ್ತಾರೆ. ಆದರೆ ಅದಕ್ಕೂ ಯಾವುದೇ ಧಾರ್ಮಿಕ ಮಹತ್ವವಿಲ್ಲ.

❖ ❖ ❖ ❖

ಧ್ಯಾಯ: ಮೂರು

ಪ್ರವಾದಿ ಮುಹಮ್ಮದ್(ಸ)

ಈಗಾಗಲೇ ತಿಳಿಸಿರುವಂತೆ ಇಸ್ಲಾಮಿನ ಮೂಲ ವಚನವು "ಅಲ್ಲಾಹನ ಹೊರತು ರಾಧ್ಯನಿಲ್ಲ. ಮುಹಮ್ಮದ್(ಸ) ಅಲ್ಲಾಹನ ಸಂದೇಶ ವಾಹಕರಾಗಿದ್ದಾರೆ" ಎಂಬರ್ಥದ ವಿತ್ರ ವಚನವಾಗಿದೆ. ಈ ಪೈಕಿ "ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದವರು ಯಾರೂ ಇಲ್ಲ"ವೆಂಬ ವಿಶ್ವಾಸವನ್ನು ಪ್ರಥಮ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸ ಾಗಿದೆ. ಈಗ ಅದರ ದ್ವಿತೀಯಾರ್ಧವನ್ನು ತೆಗೆದುಕೊಳ್ಳೋಣ.

"ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ" ಎಂಬುದೇ ಆ ವಾಕ್ಯ.

ಪ್ರವಾದಿತ್ವ

ಈ ಲೋಕದಲ್ಲಿ ಮಾನವನ ಮಾರ್ಗದರ್ಶನಕ್ಕಾಗಿ ಅಲ್ಲಾಹನು ಮಾಡಿರುವ ವ್ಯವಸ್ಥೆಯೇ ಪ್ರವಾದಿತ್ವ. ಭೂಮುಖದ ಮೇಲೆ ಮಾನವ ಜನಾಂಗದ ಆರಂಭವೇ ಓರ್ವ ಪ್ರವಾದಿಯ ಮೂಲಕ ಆಯಿತೆಂದು ಪವಿತ್ರ ಕುರ್‌ಆನ್ ಕಲಿಸುತ್ತದೆ. ಅವರಿಗೆ ಅಲ್ಲಾಹನು ತನ್ನ ದೂತರ ಮೂಲಕ ತನ್ನ ಸಂದೇಶವನ್ನು ಮುಟ್ಟಿಸಿದನು. ಅವರು ಅದನ್ನು ತಮ್ಮ ಸಂತತಿಗೆ ಮುಟ್ಟಿಸಿದರು. ಆ ಬಳಿಕ ಆ ಸಂತತಿಗಳು ಶೈತಾನನ ದುಷ್ಪ್ರೇರಣೆಯಿಂದ ಅಥವಾ ತಮ್ಮ ಭ್ರಷ್ಟ ಚಿತ್ತದ ಪ್ರೇರಣೆಯಿಂದ ಪ್ರವಾದಿ ಆದಮ್‌ರವರು(ಅ) ಬೋಧಿಸಿದ ಲಕ್ಷಣಗಳನ್ನು ಮರೆತಾಗ ಪುನಃ ದೇವನ ವತಿಯಿಂದ ಅವರ ಮಧ್ಯೆಯೇ ಪ್ರವಾದಿಗಳು ಜನಿಸಿ ಬಂದರು. ಈ ರೀತಿ ದೇವನು ಮಾನವರಿಗೆ ತನ್ನ ಸಂದೇಶವನ್ನು ಮುಟ್ಟಿಸಲು ಆರಿಸುವ ಪ್ರವಾದಿಗಳು ಮನುಷ್ಯರ ಪೈಕಿ ಅತ್ಯುತ್ತಮ ಗುಣನಡತೆ ಮತ್ತು ಚಾರಿತ್ರ್ಯವುಳ್ಳವರಾಗಿರುತ್ತಿದ್ದರು. ಆ ಪ್ರವಾದಿಗಳು ಮಾನವ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಜನಾಂಗಗಳಲ್ಲಿ ಬಂದರು. ಅವರ ಪೈಕಿ ಪ್ರತಿಯೊಬ್ಬರೂ ಜನರಿಗೆ ತಂತಮ್ಮ ಜನಾಂಗದ ಭಾಷೆಯಲ್ಲೇ ದೇವಸಂದೇಶವನ್ನು ಮುಟ್ಟಿಸಿದರು.

ಹೀಗೆ ಮಾನವ ಜನಾಂಗದ ಸನ್ಮಾರ್ಗದರ್ಶನಕ್ಕಾಗಿ ಬಂದ ಪ್ರವಾದಿಗಳ ಸಂಖ್ಯೆ ಸುಮಾರು ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಇದೆಯೆಂದು ಪ್ರವಾದಿ ಮುಹಮ್ಮದ್(ಸ)

ತಿಳಿಸಿರುವರು. ಎಲ್ಲ ಪ್ರವಾದಿಗಳೂ ಮಾನವರೇ ಆಗಿದ್ದರು. ಅವರಿಗೆ ಮಾನವ ಸಹಜವಾ ಎಲ್ಲ ಬಯಕೆ-ಬೇಡಿಕೆಗಳೂ ಇದ್ದವು. ಅವರು ಆಹಾರ ಸೇವಿಸುತ್ತಿದ್ದರು, ಹೆಂಡತಿ ಮಕ್ಕಳ ಹೊಂದಿದ್ದರು, ಜೀವನೋಪಾಯಕ್ಕಾಗಿ ದುಡಿಯುತ್ತಿದ್ದರು. ಅವರ ಪೈಕಿ ಯಾರೂ ದೇವರಾ ದೇವಪುತ್ರರಾಗಲಿ, ದೇವಾಂಶ ಸಂಭೂತರಾಗಲಿ ಆಗಿರಲಿಲ್ಲ. ಅವರ ಪೈಕಿ ಯಾರೂ ಮಾನವರೋ ದೇವನಿಗೆ ಸಮಾನರೋ ಅವನ ಭಾಗೀದಾರರೋ ಆಗಿರಲಿಲ್ಲ.

ಅಂತಿಮ ಪ್ರವಾದಿ

ಪ್ರವಾದಿ ಮುಹಮ್ಮದ್(ಸ) ಈ ಪ್ರವಾದಿಗಳ ಪೈಕಿ ಕೊನೆಯವರೂ ಪ್ರವ ಶೃಂಖಲೆಯ ಕೊನೆಯ ಕೊಂಡಿಯೂ ಪ್ರವಾದಿತ್ವ ವ್ಯವಸ್ಥೆಯ ಪರಿಪೂರ್ಣತೆಯೂ ದೆ ಸಂದೇಶವಾಹಕತ್ವದ ಪರಿಸಮಾಪ್ತಿಯೂ ಆಗಿದ್ದಾರೆ. ಅವರು ಇತಿಹಾಸದ ಪೂ ಬೆಳಕಿನಲ್ಲಿ ಜನಿಸಿದರು, ಬಾಳಿದರು ಮತ್ತು ಬೆಳೆದರು. ಆಮಿನಾ ಮತ್ತು ಅಬ್ದು ದಂಪತಿಗಳ ಮಗನಾಗಿ ಮುಹಮ್ಮದ್(ಸ) ಅರೇಬಿಯಾದ ಮಕ್ಕಾ ಪಟ್ಟಣದಲ್ಲಿ ಕ್ರಿ 571ರಲ್ಲಿ ಜನಿಸಿದರು. ಮುಹಮ್ಮದ್‌ರವರು(ಸ) ತಮ್ಮ ಜನನಕ್ಕೆ ಮುಂಚೆಯೇ ತಂದೆಯ ಕಳಕೊಂಡಿದ್ದರು. ಕೇವಲ 6 ವರ್ಷ ಪ್ರಾಯದವರಾಗಿದ್ದಾಗ ತಾಯಿಯ ಆಶ್ರಯ ಇಲ್ಲದಂತಾಯಿತು. ತಾತ ಅಬ್ದುಲ್ ಮುತ್ತಲಿಬ್ ಅವರ ಪೋಷಣೆಯಲ್ಲಿ ಎರಡು ವ ಕಳೆದರು. 8ನೆಯ ವರ್ಷ ಪ್ರಾಯದಲ್ಲಿ ತಾತನ ನೆರಳೂ ಇಲ್ಲದಾಯಿತು. ಆ ಬ ಮುಹಮ್ಮದ್(ಸ) ತಮ್ಮ ಚಿಕ್ಕಪ್ಪ ಅಬೂ ತಾಲಿಬರ ಆಸರೆಯಲ್ಲಿ ಬೆಳೆದರು. ಮುಹಮ್ಮ ರವರಿಗೆ(ಸ) ಅಕ್ಷರಾಭ್ಯಾಸ ಮಾಡುವ ಮತ್ತು ವಿದ್ಯೆ ಕಲಿಯುವ ಸಂದರ್ಭವೇ ಒ ಬಂದಿರಲಿಲ್ಲ. ಅವರು ಓರ್ವ ನಿರಕ್ಷರಿಯಾಗಿಯೇ ಬೆಳೆದರು. ಕುಡಿತ, ದರೋ ಜೂಜಾಟ, ವ್ಯಭಿಚಾರಗಳ ಆಗರವಾಗಿದ್ದ ಅರಬ್ ದೇಶದಲ್ಲಿ ಅವರು ಕೆಡುಕಿನ ಗಂಧಗಾಳಿಯ ಸೋಂಕದೆ ಯೌವನಾವಸ್ಥೆಯನ್ನು ಕಳೆದರು. ಅರಬರು ಅವರ ಪ್ರಾಮಾಣಿಕತೆಯನ ಸತ್ಯನಿಷ್ಠೆಯನ್ನೂ ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದರು. 'ಅಮೀನ್' (ಪ್ರಾಮಾಣಿಕ) ಮ 'ಸಾದಿಕ್' (ಸತ್ಯಸಂಧ) ಎಂಬ ಬಿರುದನ್ನು ಮಕ್ಕಾ ನಿವಾಸಿಗಳು ಅವರಿಗೆ ನೀಡಿದ್ದ ಸುತ್ತಮುತ್ತಲ ಜನರು ಸೃಷ್ಟಿ ಪೂಜೆ, ಸ್ವಾರ್ಥ, ಅನೀತಿ, ಅತ್ಯಾಚಾರಗಳಲ್ಲಿ ನಿರತರಾಗಿರುವುದ ಕಂಡು ಹೃದಯ ಬೇಗುದಿಯಿಂದ ಮುಹಮ್ಮದ್(ಸ) 'ಹಿರಾ' ಎಂಬ ಗುಹೆಯ ಧ್ಯಾನಾಸಕ್ತರಾಗಿ ಕಾಲ ಕಳೆಯ ತೊಡಗಿದರು. ಈ ರೀತಿ ಸೃಷ್ಟಿಕರ್ತನಾದ ಅಲ್ಲಾಹ ಧ್ಯಾನದಲ್ಲಿ ನಿರತರಾಗಿರುವಾಗ ಒಂದು ದಿನ ದೇವಚರ ಜಿಬ್ರೀಲರ ಮೂಲಕ ದೇವವಾ ಅವರಿಗೆ ಅವತೀರ್ಣಗೊಳ್ಳಲು ಆರಂಭವಾಯಿತು. ಮಕ್ಕಾದ ಪರಿಸರದಲ್ಲಿರುವ 'ಹಿ ಗುಹೆಯಲ್ಲಿ ಪ್ರವಾದಿ ಮುಹಮ್ಮದ್‌ರವರ(ಸ) 40ನೆಯ ವಯಸ್ಸಿನಲ್ಲಿ ಆರಂಭಗೊಂ ಈ ದಿವ್ಯ ಬೋಧನೆಯು ಅವರ ಜೀವನಾಂತ್ಯದ ವರೆಗೆ ಮುಂದುವರಿಯಿತು.

ಜಗತ್ತಿಗೆ ಬಂದ ಇತರ ಎಲ್ಲ ಪ್ರವಾದಿಗಳಂತೆ ತಾನೂ ಒಬ್ಬ ಪ್ರವಾದಿಯೆಂದು ವರು ಘೋಷಿಸಿದರು. ತಾನೂ ಇತರ ಮನುಷ್ಯರಂತೆ ಓರ್ವ ಮನುಷ್ಯನಾಗಿರುವೆನೆಂಬುದನ್ನೂ ವರು ಬಹಳ ಒತ್ತುಕೊಟ್ಟು ಹೇಳಿದರು. ಹಾಗೆ ಸಾರಿ ಹೇಳಬೇಕೆಂದು ಅಲ್ಲಾಹನು ಅವರಿಗೆ ಜ್ಞಾಪಿಸಿದ್ದನ್ನು ಪವಿತ್ರ ಕುರ್‌ಆನ್ ಈ ರೀತಿ ಉಲ್ಲೇಖಿಸಿದೆ: "ಓ ಪೈಗಂಬರರೇ, ಹೇಳಿರಿ- ಃನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ. ನಿಮ್ಮ ದೇವನು ಏಕ ಮಾತ್ರ ದೇವನೆಂದು ನ್ನ ಕಡೆಗೆ 'ದಿವ್ಯವಾಣಿ' ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ." (ಪವಿತ್ರ ಕುರ್‌ಆನ್: 18: 110)

ಸತ್ಯವಿಶ್ವಾಸಿಗಳು ಪ್ರವಾದಿ ಮುಹಮ್ಮದ್‌ರವರನ್ನು(ಸ) ಕರೆದು ಪ್ರಾರ್ಥಿಸುವುದಿಲ್ಲ. ಅಲ್ಲಾಹನ ವ್ಯಕ್ತಿತ್ವದಲ್ಲಾಗಲೀ ಗುಣಗಳಲ್ಲಾಗಲೀ ಹಕ್ಕು ಮತ್ತು ಅಧಿಕಾರಗಳಲ್ಲಾಗಲೀ ಅವರನ್ನು ಪಾಲುದಾರರೆಂದು ಬಗೆಯುವುದಿಲ್ಲ.

ಪ್ರವಾದಿ ಮುಹಮ್ಮದ್(ಸ) ಇತರ ಎಲ್ಲ ಪ್ರವಾದಿಗಳಂತೆಯೇ ಓರ್ವ ಪ್ರವಾದಿ ಯಾಗಿದ್ದರೂ ಎರಡು ವಿಷಯಗಳಲ್ಲಿ ಅವರಿಗೆ ಇತರ ಪ್ರವಾದಿಗಳಿಗಿಂತ ಶ್ರೇಷ್ಠತೆ ಪ್ರಾಪ್ತವಿದೆ. ಹಿಂದಿನ ಎಲ್ಲ ಪ್ರವಾದಿಗಳೂ ಒಂದು ನಿರ್ದಿಷ್ಟ ಪ್ರದೇಶ ಮತ್ತು ಒಂದು ನಿರ್ದಿಷ್ಟ ಕಾಲಕ್ಕಾಗಿ ಕಳುಹಿಸಲ್ಪಡುತ್ತಿದ್ದರು. ಕೆಲವೊಮ್ಮೆ ಒಂದೇ ಸಮಯದಲ್ಲಿ ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ಪ್ರವಾದಿಗಳನ್ನು ಕಳುಹಿಸಲಾಗುತ್ತಿತ್ತು. ಒಂದೇ ಪ್ರದೇಶಕ್ಕೆ ಒಬ್ಬರಿಗಿಂತ ಹೆಚ್ಚು ಪ್ರವಾದಿಗಳನ್ನು ರವಾನಿಸಿದ್ದೂ ಇದೆ. ಪ್ರತಿಯೊಬ್ಬ ಪ್ರವಾದಿಯ ಪ್ರವಾದಿತ್ವವು ಮುಂದಿನ ಪ್ರವಾದಿಯ ಆಗಮನದೊಂದಿಗೆ ಕೊನೆಗೊಳ್ಳುತ್ತಿತ್ತು. ಆದರೆ ಪ್ರವಾದಿ ಮುಹಮ್ಮದ್(ಸ) ಸಮಸ್ತ ವಿಶ್ವದ ಸಂಪೂರ್ಣ ಮಾನವ ಜನಾಂಗಕ್ಕೆ ಲೋಕಾಂತ್ಯ ಕಾಲದ ವರೆಗೆ ಮಾರ್ಗದರ್ಶನ ಮಾಡಲು ಕಳುಹಿಸಲ್ಪಟ್ಟ ಅಂತಿಮ ಪ್ರವಾದಿಯಾಗಿರುವರು: 'ಹೇಳಿರಿ: ಓ ಮಾನವರೇ, ನಾನು ನಿಮ್ಮೆಲ್ಲರ ಕಡೆಗೆ ಭೂಮಿ ಆಕಾಶಗಳ ಸಾರ್ವಭೌಮ ನಾಗಿರುವ ಅಲ್ಲಾಹನ ಸಂದೇಶವಾಹಕನಾಗಿರುತ್ತೇನೆ." (ಪವಿತ್ರ ಕುರ್‌ಆನ್: 7: 158)

"(ಪೈಗಂಬರರೇ,) ನಾವು ನಿಮ್ಮನ್ನು ಸಕಲ ಮಾನವರಿಗೆ ಸುವಾರ್ತೆ ಕೊಡುವವ ರಾಗಿಯೂ ಎಚ್ಚರಿಕೆ ನೀಡುವವರಾಗಿಯೂ ಮಾಡಿ ಕಳುಹಿಸಿರುತ್ತೇವೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ." (ಪವಿತ್ರ ಕುರ್‌ಆನ್: 34: 28)

"ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ." (ಪವಿತ್ರ ಕುರ್‌ಆನ್: 21: 107)

"(ಜನರೇ) ಮುಹಮ್ಮದ್‌ರು ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ. ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವ ರಾಗಿರುತ್ತಾರೆ." (ಪವಿತ್ರ ಕುರ್‌ಆನ್: 33: 40)

ಕೇವಲ ಸಮಾಜ ಸುಧಾರಕರೇ?

ಪ್ರವಾದಿ ಮುಹಮ್ಮದ್‌ರನ್ನು(ಸ) ಓರ್ವ ಕ್ರಾಂತಿಕಾರಿ ಸಮಾಜ ಸುಧಾರಕರೆಂ ತತ್ವಜ್ಞಾನಿಯೆಂದೂ ಸಾಮಾನ್ಯವಾಗಿ ಜಗತ್ತಿನ ಎಲ್ಲ ಪ್ರಜ್ಞಾವಂತ ಮಾನವರೂ ಒಪ್ಪುತ್ತಾ ಕೇವಲ ತತ್ವಜ್ಞಾನಿ ಮತ್ತು ಸಮಾಜ ಸುಧಾರಕರೆಂದ ಮಾತ್ರಕ್ಕೆ ಪ್ರವಾದಿ ಮುಹಮ್ಮದ್‌ರನ್ನು ಒಪ್ಪಿದಂತಾಗುವುದಿಲ್ಲ. ಪ್ರವಾದಿ ಮುಹಮ್ಮದ್(ಸ) ತಮ್ಮ ಜೀವಮಾನದ ಮೊ ನಲ್ವತ್ತು ವರ್ಷಗಳ ಕಾಲ ಯಾವ ತತ್ವವನ್ನೂ ಪ್ರತಿಪಾದಿಸಿರಲಿಲ್ಲ. ಸಮಾಜದ ಸುಧಾರ ಯಾವುದೇ ರೂಪರೇಷೆಯನ್ನು ಜನತೆಯ ಮುಂದೆ ಇಟ್ಟಿರಲಿಲ್ಲ. 40ನೆಯ ವ ಪ್ರಾಯದಲ್ಲಿ ದಿವ್ಯ ಬೋಧನೆ ಲಭಿಸಿದ ಬಳಿಕವೇ ಅವರು ಏಕದೇವತ್ವ, ಪ್ರವಾದಿತ್ವ ಮ ಪರಲೋಕ ವಿಶ್ವಾಸದ ಮೂಲಭೂತ ತತ್ವಗಳನ್ನು ಜನತೆಯ ಮುಂದಿಟ್ಟರು. ವ್ಯಕ್ತಿ ವಿಕಾಸ, ಸಮಾಜದ ಸುಧಾರಣೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಒಂದು ಸಮಗ್ರ ಕಾರ್ಯಕ್ರಮವ ಜನತೆಯ ಮುಂದಿಟ್ಟರು. ಮಾತ್ರವಲ್ಲ 23 ವರ್ಷಗಳ ಪ್ರವಾದಿತ್ವ ಜೀವನ ಕಾಲದ ತಾವು ಪ್ರತಿಪಾದಿಸಿದ ತತ್ವಗಳ ಬುನಾದಿಯಲ್ಲಿ ಮತ್ತು ತಾವು ಮುಂದಿಟ್ಟ ಕಾರ್ಯಕ್ರಮ ಆಧಾರದಲ್ಲಿ ಒಂದು ಸಮಾಜವನ್ನು ಕಟ್ಟಿ ಬೆಳೆಸಿದರು ಮತ್ತು ಒಂದು ರಾಷ್ಟ್ರವನ್ನು ನಿರ್ಮಿ ದರು. 14 ಶತಮಾನಗಳ ಬಳಿಕ ಇಂದಿಗೂ ಆ ತತ್ವಗಳು ಮತ್ತು ಕಾರ್ಯಕ್ರಮಗ ಜಗತ್ತಿನ ಜನರ ಗಮನ ಕೇಂದ್ರವಾಗಿದೆ. ಇದು ಕೇವಲ ಒಬ್ಬ ಸುಧಾರಕನಿಂದ ಸಾಧ್ಯ ಗುವ ಕಾರ್ಯವಲ್ಲ. ತಾನು ಯಾವ ಮಾತನ್ನೂ ತನ್ನ ಚಿತ್ತದಿಂದ ಹೇಳುವುದಿಲ್ಲ. ಎಲ್ಲ ದೇವನ ವತಿಯಿಂದ ಬಂದ ದಿವ್ಯ ಬೋಧನೆಯನ್ನು ಆಧರಿಸಿದೆ ಎಂದು ಅವರೇ ಘೋಷಿ ತ್ತಾರೆ. ಅವರು ಸ್ವಯಂ ಪ್ರತಿಪಾದಿಸಿದಂತೆ ಅವರನ್ನು ಓರ್ವ ದೇವಪ್ರವಾದಿಯೆಂ ನಂಬದೆ ಕೇವಲ ಒಬ್ಬ ತತ್ವಜ್ಞಾನಿ ಮತ್ತು ಸಮಾಜ ಸುಧಾರಕ ಎನ್ನುವುದು ಅ ನಿರಾಕರಣೆಯಲ್ಲದೆ ಇನ್ನೇನು?

"ಅವರು ತಮ್ಮ ಸ್ವಚಿತ್ತದಿಂದ ನುಡಿಯುವುದಿಲ್ಲ. ಇದು ಅವರಿಗೆ ಅವತೀರ್ಣಗೊ ವಂತಹ ಒಂದು 'ದಿವ್ಯವಾಣಿ' ಆಗಿದೆ." **(ಪವಿತ್ರ ಕುರ್‌ಆನ್: 53: 3-4)**

ತಾನು ದೇವಪ್ರವಾದಿಯೆಂದು ಸಾರಿ 23 ವರ್ಷಗಳ ತನಕ ತಮ್ಮ ಘೋಷಣೆಯ ಸ್ಥಿರವಾಗಿದ್ದು ಜಗತ್ತು ಕಂಡರಿಯದಂತಹ ಒಂದು ಮಹಾನ್ ಕ್ರಾಂತಿಯನ್ನು ಸಾಧಿಸಿ ವ್ಯಕ್ತಿಯನ್ನು ಕೇವಲ ಒಬ್ಬ ಒಳ್ಳೆಯ ಮನುಷ್ಯನೆಂದು ಸಾರುವುದು ಮತ್ತು ಅ ಪ್ರವಾದಿತ್ವವನ್ನು ಅಲ್ಲಗಳೆಯುವುದು ಅವರಿಗೆ ಎಸಗುವ ಅತಿದೊಡ್ಡ ಅಪಚಾರವಾಗಿ ತನ್ನನ್ನು ದೇವಪ್ರವಾದಿಯೆಂದು ಘೋಷಿಸಿಕೊಂಡ ಒಬ್ಬ ವ್ಯಕ್ತಿ ನಿಜವಾಗಿ ದೇ ಪ್ರವಾದಿಯಾಗಿರದೆ ಕೇವಲ ಒಬ್ಬ ಸುಧಾರಕನಾಗಿದ್ದು ಸಮಾಜ ಸುಧಾರಣೆಯ ಕಳಕಳಿಯಿಂ ಪ್ರವಾದಿಯೆಂಬ ಸೋಗು ಹಾಕಿದ್ದರೆ ಆ ವ್ಯಕ್ತಿ ಒಬ್ಬ ಮಹಾ ಸುಳ್ಳುಗಾರ ಮತ್ತು ಮಹ ವಂಚಕ ಆಗುವನೇ ಹೊರತು ಒಬ್ಬ ಸಜ್ಜನ ವ್ಯಕ್ತಿ ಅದರಲ್ಲೂ ವಿಶೇಷವಾಗಿ ಮಾನವಕುಲ ಮಾದರಿಯಾಗಬಲ್ಲ ಆದರ್ಶ ವ್ಯಕ್ತಿಯಾಗುವುದು ಸಾಧ್ಯವೇ ಇಲ್ಲ.

"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ದರಿ ಇತ್ತು." (ಪವಿತ್ರ ಕುರ್‌ಆನ್: 33: 21)

ಆದ್ದರಿಂದ ಅವರ ಇತರ ಗುಣಗಳ ಶ್ಲಾಘನೆ ಅರ್ಥಪೂರ್ಣವಾಗಬೇಕಿದ್ದರೆ ಅವರು ವಸಂದೇಶವಾಹಕರೆಂಬುದನ್ನು ಅಂಗೀಕರಿಸಬೇಕಾದುದು ಅತ್ಯವಶ್ಯಕವಾಗಿದೆ.

ುಹಮ್ಮದ್(ಸ) ಇಸ್ಲಾಮಿನ ಸ್ಥಾಪಕರಲ್ಲ

ಪ್ರವಾದಿ ಮುಹಮ್ಮದ್(ಸ) ಇಸ್ಲಾಮ್ ಧರ್ಮದ ಸ್ಥಾಪಕರೆಂಬುದು ನಮ್ಮ ದೇಶ ುಧವರಲ್ಲಿ ವ್ಯಾಪಕವಾಗಿರುವ ಒಂದು ತಪ್ಪುಕಲ್ಪನೆ. ಕ್ರೈಸ್ತ ಧರ್ಮದ ಸ್ಥಾಪಕ ಏಸುಕ್ರಿಸ್ತ ್ರಾಗುವಂತೆ, ಬೌದ್ಧ ಧರ್ಮದ ಸ್ಥಾಪಕ ಬುದ್ಧರಾಗಿರುವಂತೆ, ಝುರತುಷ್ಟ್ರ ಧರ್ಮದ ಪಕ ಝುರತುಷ್ಟ್ರರಾಗಿರುವಂತೆ, ಇಸ್ಲಾಮ್ ಧರ್ಮವು ಮುಹಮ್ಮದರಿಂದ(ಸ) ಸ್ಥಾಪಿಸಲ್ಪಟ್ಟಿತು ದು ಜನರು ತಿಳಿಯುವುದು ಸಹಜ.

ಆದರೆ ಇಸ್ಲಾಮ್ ಧರ್ಮದ ಹೆಸರೇ ಸೂಚಿಸುವಂತೆ ಅದು ಮುಹಮ್ಮದ್‌ರವರು(ಸ) ಪಿಸಿದ ಧರ್ಮವಾಗಲೀ ಅವರು ಸ್ಥಾಪಿಸಿದ ಒಂದು ಹೊಸ ಪಂಥವಾಗಲೀ ಅಲ್ಲ. ತೆಯೇ ಯಹೂದಿ ಜನಾಂಗದ ಧರ್ಮಕ್ಕೆ ಯಹೂದಿ ಪಂಥವೆಂದು ಪೆಸರಿರುವಂತೆ, ಧೂ ನದಿಯ ದೇಶದ ವಾಸಿಗಳು ಹಿಂದೂಗಳೆನಿಸಿಕೊಂಡಿರುವಂತೆ, ಇಸ್ಲಾಮ್ ಒಂದು ರ್ಗ ಅಥವಾ ಪ್ರದೇಶದೊಂದಿಗೆ ಸಂಬಂಧವಿರಿಸಿಕೊಂಡ ಧರ್ಮವೂ ಅಲ್ಲ. ಅದು ುಹಮ್ಮದ್(ಸ) ಆವಿಷ್ಕರಿಸಿದ ಮುಹಮ್ಮದೀಯ ಧರ್ಮವಾಗಿರದೆ ಮಾನವಕುಲದ ಆದಿಪಿತ ದಮರಿಂದ(ಅ) ಹಿಡಿದು ಅಂತಿಮ ಪ್ರವಾದಿ ಮುಹಮ್ಮದ್‌ರವರ(ಸ) ವರೆಗೆ ವಿಶ್ವದ ತೆಯನಿಂದ ನೇಮಿಸಲ್ಪಟ್ಟ ಎಲ್ಲ ಪ್ರವಾದಿಗಳೂ ಪ್ರತಿಪಾದಿಸಿದ ಸನಾತನವೂ ಚಿರನೂತನವೂ ದ ಧರ್ಮವಾಗಿದೆ. ಇಸ್ಲಾಮ್ ಎಂಬ ಪದದ ಅರ್ಥವು ಅನುಸರಣೆ, ವಿಧೇಯತೆ ಮತ್ತು ಂತಿ ಎಂದಾಗಿದೆ. ಮನುಷ್ಯನು ತನ್ನ ಸೃಷ್ಟಿಕರ್ತ, ಪಾಲಕ, ಪ್ರಭು ಮತ್ತು ಅಧಿಪತಿಯಾದ ್ಲಾಹನಿಗೆ ಸಂಪೂರ್ಣ ವಿಧೇಯನಾಗಿ ಅವನ ಆಜ್ಞೆಗಳನ್ನು ಅನುಸರಿಸಿ ಜೀವಿಸುವ ಜೀವನ ್ಧತಿ ಎಂಬುದೇ ಆ ಪದದ ತಾತ್ಪರ್ಯ. ಹಾಗೆ ಜೀವಿಸಿದಾಗ ಅವನು ಇಹ-ಪರ ೋಕಗಳಲ್ಲಿ ಶಾಂತಿ ಮತ್ತು ನೆಮ್ಮದಿ ಹಾಗೂ ಮೋಕ್ಷ ಮತ್ತು ವಿಜಯವನ್ನು ಪಡೆಯುವನು.

ಅಲ್ಲಾಹನ ಬಳಿ ಸ್ವೀಕಾರ ಯೋಗ್ಯವಾದ ಧರ್ಮವು ಇದೊಂದೇ ಆಗಿದೆ ಎಂಬುದನ್ನು ವಿತ್ರ ಕುರ್‌ಆನ್ ಸ್ಪಷ್ಟಪಡಿಸಿದೆ. ಮಾತ್ರವಲ್ಲ, ಪ್ರಥಮ ಮಾನವರೂ ಪ್ರಥಮ ಪ್ರವಾದಿಯೂ ದ ಆದಮ್‌ರಿಂದ(ಅ) ಅಂತಿಮ ಪ್ರವಾದಿ ಹ. ಮುಹಮ್ಮದ್‌ರ(ಸ) ತನಕ ಎಲ್ಲ ಪ್ರವಾದಿ ು ತಂತಮ್ಮ ಜನತೆಯ ಮುಂದೆ ಇದೇ ಧರ್ಮವನ್ನು ಪ್ರತಿಪಾದಿಸಿದರು ಮತ್ತು ಅದರಂತೆ ುಕಿ ತೋರಿಸಿದರು. ಈ ಧರ್ಮವು ಮನುಷ್ಯನ ಪರಲೋಕ ಮೋಕ್ಷಕ್ಕೆ ಹೇತುವಾಗುವುದು ಾತ್ರವಲ್ಲ ಅವನ ಇಹಲೋಕ ಜೀವನದ ಅತ್ಯುತ್ತಮ ನಿರ್ಮಾಣವೂ ಈ ಧರ್ಮದಿಂದಲೇ ಗುವುದು. ಅವನ ಎಲ್ಲಾ ಸಮಸ್ಯೆಗಳಿಗೂ ಇದರಲ್ಲಿ ಸೂಕ್ತ ಪರಿಹಾರವಿದ್ದು ಈ ಧರ್ಮ ಾತ್ರ ನೈಜ ಅರ್ಥದಲ್ಲಿ ಅವನನ್ನು ವಿಜಯದ ಕಡೆಗೆ ಒಯ್ಯಬಲ್ಲುದು. ಅವನಿಗೆ ಶಾಂತಿ, ಭಿಕ್ಷೆ ಮತ್ತು ಕಲ್ಯಾಣವನ್ನು ನೀಡಬಲ್ಲುದು. ❖

ಅಧ್ಯಾಯ: ನಾಲ್ಕು

ಪ್ರವಾದಿ ಮುಹಮ್ಮದ್‌ರ(ಸ) ವಿವಾಹಗಳ

ಪ್ರವಾದಿ ಮುಹಮ್ಮದ್‌ರವರ(ಸ) ವಿವಾಹಗಳು ಸಾಮಾನ್ಯವಾಗಿ ಮುಸ್ಲಿಮೇತ ಬಂಧುಗಳಲ್ಲಿ ಗೊಂದಲಕ್ಕೆ ಕಾರಣವಾಗುವುದಿದೆ. ಇದಕ್ಕೆ ಮೂರು ಮುಖ್ಯ ಕಾರಣಗಳಿವ ಒಂದನೆಯದಾಗಿ ಬಹುಪತ್ನಿತ್ವ ಸಂಪ್ರದಾಯವನ್ನು ಸಾಮಾನ್ಯವಾಗಿ ಕೆಟ್ಟ ದೃಷ್ಟಿಯಿಂ ನೋಡಲಾಗುತ್ತದೆ. ಎರಡನೆಯದಾಗಿ ಪಾಶ್ಚಾತ್ಯ ಇಸ್ಲಾಮ್ ವಿರೋಧಿಗಳು ಮತ್ತು ಅವ ಪೌರ್ವಾತ್ಯ ಅಂಧಾನುಯಾಯಿಗಳು ಇಸ್ಲಾಮಿನ ವಿರುದ್ಧ ನಡೆಸುವ ಯೋಜಿತ ಕುಪ್ರಚಾ ಗಳಲ್ಲಿ ಬಹುಪತ್ನಿತ್ವ, ಅದರಲ್ಲೂ ವಿಶೇಷವಾಗಿ ಪ್ರವಾದಿ ಮುಹಮ್ಮದ್‌ರವರ(ಸ) ವಿವಾಹಗಳ ಪ್ರಮುಖ ವಿಷಯವಾಗಿವೆ. ಮೂರನೆಯದಾಗಿ ಪ್ರವಾದಿ ಮುಹಮ್ಮದ್‌ರವರ(ಸ) ವಿವಾಹಗ ಹಿನ್ನೆಲೆ ಮತ್ತು ಉದ್ದೇಶದ ಬಗ್ಗೆ ಜನಸಾಮಾನ್ಯರಿಗೆ ಸರಿಯಾದ ತಿಳುವಳಿಕೆ ಇಲ್ಲ. ಈ ಪೈಕಿ ಬಹುಪತ್ನಿತ್ವ ಸಂಪ್ರದಾಯದ ಕುರಿತು ನಾವು ಮುಂದೆ ವಿವರವಾಗಿ ಪ್ರಸ್ತಾಪಿಸಲಿದ್ದೇವೆ ಇಲ್ಲಿ ನಾವು ಪ್ರವಾದಿವರ್ಯರ(ಸ) ವಿವಾಹಗಳ ಕುರಿತು ಸಂಕ್ಷಿಪ್ತವಾಗಿ ವಿವೇಚಿಸೋಣ.

ಪ್ರಥಮ ವಿವಾಹ

ಪ್ರವಾದಿ ಮುಹಮ್ಮದ್‌ರ(ಸ) ಪ್ರಥಮ ವಿವಾಹ ನಡೆದಾಗ ಅವರಿಗೆ 25 ವರ್ಷ ವಯಸ್ಸು, ಈ ಪ್ರಥಮ ವಿವಾಹವು 40ರ ಹರೆಯದ ಖದೀಜಾ(ರ) ಎಂಬ ವಿಧವೆಯೊಂದಿಗ ನಡೆದಿತ್ತು. ಖದೀಜಾ ಮಕ್ಕಾದ ಓರ್ವ ಗೌರವಾನ್ವಿತ ಮಹಿಳೆಯಾಗಿದ್ದರು. ಪ್ರವಾದಿಯವರು(ಸ) ಖದೀಜಾರ ಜೊತೆ ಸುಮಾರು 25 ವರ್ಷಗಳ ವೈವಾಹಿಕ ಬಾಳ್ವೆ ನಡೆಸಿದರು. ಪ್ರಥಮ ಪತ್ನಿ ಖದೀಜಾ ನಿಧನರಾದಾಗ ಪ್ರವಾದಿವರ್ಯರಿಗೆ(ಸ) 50 ವರ್ಷ ವಯಸ್ಸಾಗಿತ್ತು. ಆಗ ಖದೀಜಾರ ವಯಸ್ಸು 65 ವರ್ಷ. ಖದೀಜಾ ಜೀವಂತವಿದ್ದಷ್ಟು ಕಾಲ ಪ್ರವಾದಿಯವರು(ಸ) ಬೇರೆ ವಿವಾಹ ವಾಗಿರಲಿಲ್ಲ. ಅವರ ವೈವಾಹಿಕ ಜೀವನ ಎಲ್ಲ ವಿಧದಲ್ಲೂ ಸುಖಮಯ ಹಾಗೂ ಆದರ್ಶ ಪ್ರಾಯವಾಗಿತ್ತು. ಮುಹಮ್ಮದ್‌ರವರು(ಸ) ಖದೀಜಾರಿಂದಲೇ ಸಂತಾನವನ್ನೂ ಪಡೆದರು.

ಪ್ರವಾದಿವರ್ಯರ(ಸ) ಇತರ ಎಲ್ಲ ವಿವಾಹಗಳೂ ಖದೀಜಾರವರ(ರ) ನಿಧನಾನಂತರ ಅಂದರೆ 50 ವರ್ಷ ವಯಸ್ಸು ಕಳೆದ ಬಳಿಕವೇ ಜರುಗಿದುವು. ಇದಕ್ಕೆ ಅಮಿತ ಲೈಂಗಿಕ ಆಸಕ್ತಿ ಅಥವಾ ಅತಿಕಾಮ ಖಂಡಿತ ಕಾರಣವಾಗಿರಲಿಲ್ಲ. ಅರಬರು ಯುವಕರಾಗಿರುವಾಗಲೇ

ತ್ರರು ಮಂದಿಯನ್ನು ವರಿಸಿಕೊಳ್ಳುತ್ತಿದ್ದ ಕಾಲವಾಗಿತ್ತದು. ವಿವಾಹದಂತೆಯೇ ವಿವಾಹ ಛೇದನವೂ ಸರ್ವಸಾಮಾನ್ಯವಾಗಿತ್ತು. ಒಬ್ಬ ಪುರುಷನು ತನಗಿಷ್ಟ ಬಂದಷ್ಟು ಸಲ ತನ್ನ ಯನ್ನು ವಿಚ್ಛೇದಿಸಿ ಪುನಃ ಆಕೆಯೊಂದಿಗೇ ದಾಂಪತ್ಯ ಜೀವನವನ್ನು ಮುಂದುವರಿಸುವುದು ಮಾನ್ಯವಾಗಿತ್ತು. ಇದಕ್ಕೆ ಯಾವುದೇ ಮಿತಿಯಾಗಲೀ ನಿಯಂತ್ರಣವಾಗಲೀ ಇರಲಿಲ್ಲ. ತಹ ಸನ್ನಿವೇಶದಲ್ಲಿ ಪ್ರವಾದಿ ಮುಹಮ್ಮದ್(ಸ) ಏಕಪತ್ನೀಕರಾಗಿ ತಮ್ಮ ಯುವತ್ವವನ್ನೂ ಧ್ಯ ವಯಸ್ಸನ್ನೂ ಕಳೆದರು. ಅದೂ ಈ ಹಿಂದೆ ಎರಡು ಸಲ ವಿವಾಹವಾಗಿದ್ದ ಓರ್ವ ಧ್ಯ ವಯಸ್ಕ ವಿಧವೆಯ ಜೊತೆ. ಇದು ಲೈಂಗಿಕ ಆಸಕ್ತಿ ಹೆಚ್ಚಿರುವಂತಹ ಓರ್ವ ಪುರುಷನ ಕ್ಷಣವೆಂದು ಬುದ್ಧಿಯುಳ್ಳವರಾರೂ ಹೇಳಲಾರರು.

ವಾಹದ ಕಾರಣಗಳು

ಪ್ರವಾದಿವರ್ಯರು(ಸ) ತಮ್ಮ ಇಳಿವಯಸ್ಸಿನಲ್ಲಿ ಮಾಡಿಕೊಂಡ ವಿವಾಹಗಳ ಹಿಂದೆ ಮಾಜಿಕ, ಧಾರ್ಮಿಕ ಮತ್ತು ನೈತಿಕವಾದ ಅನೇಕ ಪ್ರಬಲ ಕಾರಣಗಳಿದ್ದುವು. ಪ್ರವಾದಿ ಹಮ್ಮದ್‌ರವರು(ಸ) ಪುರುಷರಂತೆ ಸ್ತ್ರೀಯರ ಮಟ್ಟಿಗೂ ಅಲ್ಲಾಹನ ಅಂತಿಮ ವಾದಿಯಾಗಿದ್ದರು. ಅವರ ಜೀವನವು ಸ್ತ್ರೀ-ಪುರುಷರೆಲ್ಲರಿಗೂ ಸದಾಕಾಲಕ್ಕೆ ಆದರ್ಶ ವನವಾಗಿದೆ. ಹಾಗಿರುವಾಗ ದೈವಿಕ ಶಿಕ್ಷಣ-ಬೋಧನೆಗಳನ್ನು ಸ್ತ್ರೀಯರಿಗೆ ತಲುಪಿಸುವ ವಸ್ಥೆ ಮಾಡುವುದು ಪ್ರವಾದಿವರ್ಯರ(ಸ) ದೇವದತ್ತ ಕರ್ತವ್ಯವಾಗಿತ್ತು. ಸ್ತ್ರೀಯರಿಗೆ ಬಂಧಿಸಿದ ಅನೇಕ ವಿಷಯಗಳನ್ನು ಕಲಿಸುವಂತಹ ಹೊಣೆಗಾರಿಕೆಯನ್ನು ಪ್ರವಾದಿ ರ್ಯರು(ಸ) ತಮ್ಮ ಪತ್ನಿಯರಿಗೆ ವಹಿಸಿಕೊಟ್ಟಿದ್ದರು. ಪ್ರವಾದಿಯವರಿಂದ(ಸ) ಸಹಸ್ರಾರು ಚನಗಳನ್ನು ವರದಿ ಮಾಡಿರುವ ಹ. ಆಯಿಶಾರವರ(ರ) ಹೆಸರು ಆ ಪೈಕಿ ಉಲ್ಲೇಖನೀಯ. ಮೂಢನಂಬಿಕೆಗಳು, ಕಂದಾಚಾರಗಳು ಮತ್ತು ಅಜ್ಞಾನಜನ್ಯ ರೂಢಿ-ಸಂಪ್ರದಾಯಗಳಿಂದ ಂಬಿಹೋಗಿದ್ದ ಒಂದು ಸಮುದಾಯಕ್ಕೆ ಅಲ್ಲಾಹನ ಧರ್ಮವನ್ನು ತಲುಪಿಸುವ ಹೊಣೆಗಾರಿಕೆ ವಾದಿ ಮುಹಮ್ಮದ್ ರವರ(ಸ) ಮೇಲಿತ್ತು. ಪುರುಷರಂತೆ ಸ್ತ್ರೀಯರನ್ನು ಸುಶಿಕ್ಷಿತಗೊಳಿಸದೆ ಗುರುತರ ಜವಾಬ್ದಾರಿ ಯನ್ನು ಈಡೇರಿಸಲು ಸಾಧ್ಯವಿರಲಿಲ್ಲ. ಪ್ರವಾದಿವರ್ಯರಿಗೆ(ಸ) ಹೊಣೆಯನ್ನು ನಿರ್ವಹಿಸಲಿಕ್ಕೆ ವಿಭಿನ್ನ ಯೋಗ್ಯತಾರ್ಹತೆಗಳ, ವಿಭಿನ್ನ ಪ್ರಕೃತಿಯ, ವಿಭಿನ್ನ ದ್ಯಾರ್ಹತೆ ಯಿರುವ, ವಿಭಿನ್ನ ಪ್ರಾಯದ ಮತ್ತು ವಿಭಿನ್ನ ಸಾಮಾಜಿಕ, ಆರ್ಥಿಕ ಮತ್ತು ಂಸ್ಕೃತಿಕ ಹಿನ್ನೆಲೆಯಿರುವ ಮಹಿಳೆಯರ ಅಗತ್ಯವಿತ್ತು. ಅದಕ್ಕಾಗಿ ಅಂಥವರನ್ನು ವಿವಾಹವಾಗು ದೊಂದೇ ಪ್ರಾಯೋಗಿಕ ಮಾರ್ಗವಾಗಿತ್ತು. ಪ್ರವಾದಿ(ಸ) ಮಾನವಕುಲಕ್ಕೆ ಆದರ್ಶ ಪುರುಷ ಗಿರುವುದು ಕೇವಲ ಸಾಮಾಜಿಕ ಜೀವನದಲ್ಲಿ ಮಾತ್ರ ಅಲ್ಲ, ಖಾಸಗಿ ಮತ್ತು ಗೃಹ ೀವನದಲ್ಲೂ ಅವರೇ ಅನುಕರಣೀಯ ಆದರ್ಶ ಪುರುಷರಾಗಿರುವರು. ಅವರ ಸಾಮಾಜಿಕ ೀವನದ ಎಲ್ಲ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಮಾನವಕುಲಕ್ಕೆ ತಲುಪಿಸಲು ಅವರ ಸುತ್ತ ನೇಕ ಪುರುಷ ಅನುಯಾಯಿಗಳಿದ್ದರು. ಆದರೆ ಕೌಟುಂಬಿಕ ಮತ್ತು ಗೃಹ ಜೀವನದಲ್ಲಿ ವಾದಿಯ ಆದರ್ಶವೇನೆಂಬುದನ್ನು ಸಕಲ ವಿವರಗಳೊಂದಿಗೆ ಮಾನವಕುಲಕ್ಕೆ ತಲುಪಿಸಲು

ಪ್ರವಾದಿಯ ಪತ್ನಿಯರಿಗೆ ಮಾತ್ರ ಸಾಧ್ಯವಿತ್ತು. ಅವರ ಮೂಲಕವೇ ಪ್ರವಾದಿ ಮುಹಮ್ಮದರು(ಅರೇಬಿಯಾದ ಮಹಿಳೆಯರನ್ನು ಇಸ್ಲಾಮಿನೆಡೆಗೆ ಆಹ್ವಾನಿಸಿದರು ಮತ್ತು ಅವರ ಮೂಲಕ ಸ್ತ್ರೀ ಕುಲದ ಶಿಕ್ಷಣ ತರಬೇತಿಗಳ ಏರ್ಪಾಡು ಮಾಡಿದರು.

ಪ್ರವಾದಿವರ್ಯರು(ಸ) ತಮ್ಮ ಧರ್ಮಪ್ರಚಾರ ಕಾರ್ಯದಿಂದಾಗಿ ಇಡೀ ಅರಬ ಜಗತ್ತಿನ ಎಲ್ಲ ಕುಲಗೋತ್ರಗಳ ಶತ್ರುತ್ವಕ್ಕೆ ಪಾತ್ರರಾಗಿದ್ದರು. ಈ ಶತ್ರುತ್ವವನ್ನು ಮಿತ್ರ ವಾಗಿ ಬದಲಿಸುವುದರಲ್ಲಿಯೂ ಪ್ರವಾದಿವರ್ಯರ(ಸ) ವಿವಾಹಗಳು ನಿರ್ಣಾಯಕ ಪಾ ವಹಿಸಿದ್ದುವು. ವಿಭಿನ್ನ ಗೋತ್ರಗಳಿಗೆ ಸೇರಿದ ವಿಧವೆ, ವಿವಾಹ ವಿಚ್ಛೇದಿತೆ ಮತ್ತು ಅನಾ ಯರಾದ ಮಹಿಳೆಯರನ್ನು ವಿವಾಹವಾಗುವ ಮೂಲಕ ಅವರು ಆ ಗೋತ್ರಗಳ ಸ್ನೇ ಸಂಬಂಧವನ್ನೂ ಬಂಧುತ್ವವನ್ನೂ ಗಳಿಸಿಕೊಂಡರು. ಕನಿಷ್ಠಪಕ್ಷ ತಮ್ಮ ಗೋತ್ರದೊಂದಿ ವಿವಾಹ ಸಂಬಂಧವಿರುವವರೆಂಬ ನೆಲೆಯಲ್ಲಿ ಪ್ರವಾದಿವರ್ಯರ(ಸ) ಮೇಲಿನ ಅವರ ದ್ವೇ ಮತ್ತು ವೈರವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು. ಇಸ್ಲಾಮಿನ ಬದ್ಧವೈರಿಯಾಗಿ ಅಬೂ ಸುಫ್ಯಾನ್‌ರ ಮಗಳಾದ ಉಮ್ಮು ಹಬೀಬಾರೊಂದಿಗೆ ಪ್ರವಾದಿಯ ವಿವಾಹ ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ದತ್ತು ಸಂಬಂಧದಲ್ಲಿ ವಿವಾಹ

ಸಮಾಜದ ಅಜ್ಞಾನಜನ್ಯ ರೀತಿ-ಸಂಪ್ರದಾಯಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ತಮ್ಮ ದತ್ತುಪುತ್ರರಾದ ಝೈದ್‌ರ ವಿಚ್ಛೇದಿತ ಪತ್ನಿ ಝೈನಬ್‌ರೊಂದಿಗೆ ಪ್ರವಾದಿಯವರು(ಸ ಮಾಡಿಕೊಂಡ ವಿವಾಹವು ಐತಿಹಾಸಿಕ ಮಹತ್ವಕ್ಕೆ ಪಾತ್ರವಾಗಿದೆ. ತನ್ಮೂಲಕ ಅರೇಬಿಯಾದಲ್ಲಿ ದತ್ತುಪುತ್ರನನ್ನು ಸ್ವಂತ ಪುತ್ರನಂತೆ ಪರಿಗಣಿಸಿ ಆಸ್ತಿಯಲ್ಲಿ ಹಕ್ಕು ನೀಡುತ್ತಿದ್ದ ಹಾಗೂ ತ ಪತ್ನಿ ಮತ್ತು ಪುತ್ರಿಯರನ್ನು ಅವನ ತಾಯಿ ಮತ್ತು ಸಹೋದರಿಯರೆಂದು ಪರಿಗಣಿಸುತ್ತಿದ ಸಂಪ್ರದಾಯವು ಕೊನೆಗೊಂಡಿತು (ವಿವರಗಳಿಗೆ ನೋಡಿರಿ- ಪವಿತ್ರ ಕುರ್‌ಆನ್ ಅಧ್ಯಾಯ 33ರ ಮುನ್ನುಡಿ ಮತ್ತು ಕುರ್‌ಆನ್ ವ್ಯಾಖ್ಯಾನ ಭಾಗ-2ರ ಅಧ್ಯಾಯ 33ರ ಪ್ರಸ್ತಾವನೆ.

ಹ. ಸಫಿಯಾ ಮತ್ತು ಜುವೇರಿಯಾ(ರ) ಯಹೂದಿ ಮನೆತನಕ್ಕೆ ಸೇರಿದ ಸ್ತ್ರೀಯ ರಾಗಿದ್ದರು. ಅವರನ್ನು ವಿವಾಹವಾಗುವ ಮೂಲಕ ಯಹೂದಿ ಗೋತ್ರಗಳೊಂದಿಗೂ ಪ್ರವಾ ವರ್ಯರು(ಸ) ಸಂಬಂಧ ಸ್ಥಾಪಿಸಿಕೊಂಡರು ಮತ್ತು ಆ ಮೂಲಕ ಅವರ ಶತ್ರುತ್ವಕ್ಕೆ ಕಡಿವಾಣ ಹಾಕಿದರು. ಅಂದಿನ ಅರಬ್ ಸಂಪ್ರದಾಯದಂತೆ ಒಂದು ಗೋತ್ರದ ಯಾವುದೆ ಹೆಣ್ಣನ್ನು ವರಿಸಿದವನು ಆ ಗೋತ್ರದ ಅಳಿಯನಾಗಿ ಮಾರ್ಪಡುತ್ತಿದ್ದನು. ತನ್ಮೂಲಕ ದ್ವೇ ಮತ್ತು ಪ್ರತೀಕಾರದ ಕ್ರಮಗಳಿಂದ ಸುರಕ್ಷಿತನಾಗಿ ಅವರ ಆತ್ಮೀಯ ಸಂಬಂಧಿಯಾ ಬಿಡುತ್ತಿದ್ದನು. ಈ ರೀತಿ ದೂರಗಾಮಿ ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ಪರಿಣಾಮ ಗಳನ್ನು ಹೊಂದಿರುವ ಪ್ರವಾದಿವರ್ಯರ(ಸ) ವಿವಾಹಗಳು ಯಾವ ನಿಷ್ಪಕ್ಷಮತಿಗೂ ಯಾ ದೃಷ್ಟಿಯಿಂದಲೂ ಆಕ್ಷೇಪಾರ್ಹವಾಗಿ ಕಾಣಲಾರವು.

❖ ❖ ❖ ❖

ಧ್ಯಾಯ: ಐದು

ಪರಲೋಕ ವಿಶ್ವಾಸ

ಇಸ್ಲಾಮ್ ಧರ್ಮದ ದೃಷ್ಟಿಯಲ್ಲಿ ಮನುಷ್ಯನ ಈ ಲೌಕಿಕ ಜೀವನವು ಒಂದು ಕ್ಷೆಯಾಗಲೀ ಪುರಸ್ಕಾರವಾಗಲೀ ಅಲ್ಲ. ಇದು ಹಿಂದಿನ ಜನ್ಮದ ಪಾಪಗಳಿಗೆ ಸಿಕ್ಕಿದ ಕ್ಷೆಯೂ ಅಲ್ಲ. ಹಿಂದಿನ ಜನ್ಮದ ಪುಣ್ಯಗಳಿಗೆ ಸಿಕ್ಕಿದ ಪುರಸ್ಕಾರವೂ ಅಲ್ಲ. ವಾಸ್ತವದಲ್ಲಿ ಇದು ಮನುಷ್ಯನ ಪರೀಕ್ಷಾರ್ಥವಾಗಿ ಅವನಿಗೆ ಲಭಿಸಿದ ಜೀವನವಾಗಿದೆ. ಇಲ್ಲಿ ಅವನಿಗೆ ಚಾರ-ಆಚಾರಗಳ ತಾತ್ಕಾಲಿಕ ಸ್ವಾತಂತ್ರ್ಯ ನೀಡಲಾಗಿದೆ. ಆತನು ತನ್ನ ನೈಜ ಸೃಷ್ಟಿಕರ್ತನನ್ನು ಥಾವತ್ತಾಗಿ ಗುರುತಿಸಿ ಅವನ ಆರಾಧನೆ, ದಾಸ್ಯ ಮತ್ತು ಅನುಸರಣೆ ಮಾಡಲು ದ್ಧನಾಗುತ್ತಾನೆಯೇ ಅಥವಾ ತನ್ನ ಭ್ರಷ್ಟ ಚಿತ್ತದ ಪ್ರೇರಣೆಗಳಿಗೆ ಬಲಿಯಾಗಿ ಸ್ವೇಚ್ಛಾ ಹಾರಿಯಾಗಿ ಜೀವಿಸುತ್ತಾನೆಯೇ ಎಂಬುದನ್ನು ಪರೀಕ್ಷಿಸುವ ತಾಣವಿದು. ಆತನು ದೇವ ಪ್ರವಾದಿಗಳ ಶಿಕ್ಷಣಗಳನ್ನು ಅರಿತು ಅವುಗಳನ್ನು ಮೈಗೂಡಿಸಿಕೊಂಡು ಜೀವಿಸುತ್ತಾನೋ ಅಥವಾ ಶೈತಾನನ ಜಾಲಗಳಿಗೆ ಸಿಲುಕಿ ಆತನ ಅನುಸರಣೆಯಲ್ಲಿ ಜೀವಿಸುತ್ತಾನೋ ಎಂಬುದನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ಆತನು ತನ್ನ ಸೃಷ್ಟಿಕರ್ತನ ಇಷ್ಟಾನಿಷ್ಟಗಳನ್ನರಿತು ಅವುಗಳಿಗೆ ಬದ್ಧವಾಗಿ ಜೀವನ ಸಾಗಿಸಲು ಸಿದ್ಧನಾಗುತ್ತಾನೋ ಅಥವಾ ಮಾನವ ನಿರ್ಮಿತ ಸಿದ್ಧಾಂತಗಳಿಗೆ ಮರುಳಾಗುತ್ತಾನೋ ಎಂಬುದನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ಪರಸ್ಪರ ವಿರುದ್ಧವಾದ ಈ ಎರಡು ಮಾರ್ಗಗಳನ್ನು ಅಲ್ಲಾಹನು ಮನುಷ್ಯನ ಮುಂದೆ ತೆರೆದಿಟ್ಟಿರುವನು. ಅವುಗಳ ಪೈಕಿ ಮನುಷ್ಯನು ಯಾವ ಮಾರ್ಗವನ್ನು ಆರಿಸಿಕೊಳ್ಳುವನೋ ಅದರಲ್ಲಿ ನಡೆಯಲುಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿ ಕೊಡಲಾಗುತ್ತದೆ. ಪವಿತ್ರ ಕುರ್‌ಆನ್ ಮನುಷ್ಯ ಜೀವನದ ಈ ವಾಸ್ತವಿಕತೆಯನ್ನು ಅನೇಕ ಕಡೆ ವಿವರಿಸಿದೆ. ಆ ಪೈಕಿ ಕೆಲವು ಸೂಕ್ತಗಳನ್ನು ಮಾತ್ರ ಇಲ್ಲಿ ಉಧಾಹರಣೆಗಾಗಿ ಕೊಡಲಾಗುತ್ತಿದೆ:

"ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ." (ಪವಿತ್ರ ಕುರ್‌ಆನ್: 76: 3)

"ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು." (ಪವಿತ್ರ ಕುರ್‌ಆನ್: 67: 2)

"ಅವನಿಗೆ ಎರಡು ಸುಸ್ಪಷ್ಟ ದಾರಿಗಳನ್ನು ತೋರಿಸಿ ಕೊಡಲಿಲ್ಲವೇ?"

(ಪವಿತ್ರ ಕುರ್‌ಆನ್: 90:

ಐಹಿಕ ಜೀವನದ ವಾಸ್ತವಿಕತೆ

ಪವಿತ್ರ ಕುರ್‌ಆನಿನ ಪ್ರಕಾರ ಮನುಷ್ಯನ ಇಹಲೋಕ ಜೀವನವು ಆತನ ಪ್ರ ಜೀವನವಾಗಿದ್ದು ಪರೀಕ್ಷಾರ್ಥವಾಗಿರುವ ಈ ಜೀವನವು ಮರಣದೊಂದಿಗೆ ಕೊನೆಗೊಳ್ಳುತ ಒಂದು ದಿನ ಈ ಸಂಪೂರ್ಣ ವಿಶ್ವವ್ಯವಸ್ಥೆಯು ಅಸ್ತವ್ಯಸ್ತಗೊಂಡು ಸಂಪೂರ್ಣ ನಾಶಗೊಳಿಸಲ್ಪಡುವುದು. ಮನುಷ್ಯ ಸಮೇತ ಭೂಮುಖದ ಮೇಲಿರುವ ಎಲ್ಲ ಜೀವಿ ಸಾವನ್ನಪ್ಪುವರು. ಆ ಬಳಿಕ ಅಲ್ಲಾಹನು ಒಂದು ಹೊಸ ವಿಶ್ವ ವ್ಯವಸ್ಥೆಯನ್ನು ಹ ನಿಯಮಾವಳಿಗಳೊಂದಿಗೆ ಸೃಷ್ಟಿಸುವನು. ಅದುವೇ ಪರಲೋಕ. ಭೂಮುಖದ ಮ ಪ್ರಥಮ ಮಾನವನಿಂದಾರಂಭಿಸಿ ಪ್ರಳಯ ಕಾಲದ ತನಕ ಹು ಮರಣ ಹೊಂದಿದ ಪ್ರತಿಯೊಬ್ಬ ಮನುಷ್ಯನನ್ನೂ ಅಂದು ಅಲ್ಲಾಹನು ಪುನಃ ಜೀವ ಗೊಳಿಸುವನು. ಎಲ್ಲ ಮನುಷ್ಯರೂ ತಮ್ಮ ಸೃಷ್ಟಿಕರ್ತನಾದ ಅಲ್ಲಾಹನ ನ್ಯಾಯಾಲಯದ ವಿಚಾರಣೆಗಾಗಿ ಹಾಜರುಗೊಳಿಸಲ್ಪಡುವರು. ಆ ಮಹಾ ನ್ಯಾಯಾಧೀಶನ ನ್ಯಾಯಾಲಯದ ಮನುಷ್ಯನು ತನ್ನ ಎಲ್ಲ ಆಚಾರ-ವಿಚಾರ ಮತ್ತು ಸತ್ಕರ್ಮ-ದುಷ್ಕರ್ಮಗಳ ಜತೆ ಹಾಜರಾಗುವ ಅವನ ಯಾವ ಕರ್ಮವೂ ಯಾವ ವಿಚಾರವೂ ಯಾವ ಸಂಕಲ್ಪವೂ ಅಲ್ಲಾಹನಿ ಮರೆಯಾಗಿರಲಾರದು. ಅಲ್ಲಿ ತೀರ್ಮಾನವು ಮನುಷ್ಯನ ವಿಚಾರ ಮತ್ತು ವಿಶ್ವಾಸ ಹಾ ಆಚಾರ ಮತ್ತು ಕರ್ಮಗಳ ಆಧಾರದಲ್ಲಾಗುವುದು. ಆ ನಿರ್ಣಾಯಕ ದಿನದ ಅಧಿಪತಿಯ ಸರ್ವಶ್ರೇಷ್ಠ ನ್ಯಾಯಾಧೀಶನೂ ಆದ ಅಲ್ಲಾಹನು ಮನುಷ್ಯರ ಮಧ್ಯೆ ಅತ್ಯ ನ್ಯಾಯಪೂರ್ಣವಾಗಿ ತೀರ್ಮಾನಿಸುವನು.

ಪರಲೋಕ ಜೀವನದ ವಾಸ್ತವಿಕತೆ

ಇಲ್ಲಿ ಸತ್ಯದ ಮೇಲೆ ವಿಶ್ವಾಸವಿರಿಸುತ್ತಾ ಸತ್ಕರ್ಮಗಳನ್ನು ಮಾಡುತ್ತಾ ಜೀವಿಸಿದವ ಆ ನಿರ್ಣಾಯಕ ದಿನದಂದು ವಿಜಯಿಯಾಗುವನು, ಮೋಕ್ಷ ಹೊಂದುವನು ಮ ಅನುಗ್ರಹಭರಿತ ಸ್ವರ್ಗದ ಶಾಶ್ವತ ನಿವಾಸಿಯಾಗುವನು. ಅಲ್ಲಿ ಅವನಿಗೆ ಯಾವ ಕಣ್ ನೋಡಿರದ, ಯಾವ ಕಿವಿಯೂ ಕೇಳಿರದ, ಯಾವ ನಾಲಗೆಯೂ ಸವಿದಿರದ, ಯಾ ಬುದ್ಧಿಯೂ ಯೋಚಿಸಿರದಂತಹ ಎಲ್ಲ ಸುಖ ಸೌಭಾಗ್ಯಗಳು ಲಭ್ಯವಾಗುವುವು. ಅ ಕಾಯಿಲೆಯಾಗಲೀ ಮುಪ್ಪಾಗಲೀ ಮರಣವಾಗಲೀ ಮನುಷ್ಯನಿಗೆ ಬಾರದು. ಅಲ್ಲಿ ಮನುಷ್ಯ ತಾನು ಬಯಸಿದ್ದೆಲ್ಲವನ್ನೂ ಪಡೆಯುವನು. ಶಾಶ್ವತ ಐಶ್ವರ್ಯ, ಶಾಶ್ವತ ಯೌವ ಶಾಶ್ವತ ಆರೋಗ್ಯ ಮತ್ತು ಶಾಶ್ವತ ಜೀವನ ಅವನಿಗೆ ಅಲ್ಲಿ ಪ್ರಾಪ್ತವಾಗುವುದು. ಯಾ ಚಿಂತೆಯೂ ಅವನನ್ನು ಕಾಡದು, ಯಾವ ಭಯವೂ ಅವನ ಬಳಿ ಸುಳಿಯದು.

ಜೀವನವನ್ನು ಮಿಥ್ಯ ವಿಚಾರಗಳು ಮತ್ತು ದುರಾಚಾರಗಳಲ್ಲಿ ಕಳೆದವನು

ರ್ಣಯಕ ನ್ಯಾಯಾಲಯದಲ್ಲಿ ಕಠಿಣ ಶಿಕ್ಷೆಗೆ ಗುರಿಯಾಗುವನು. ಅವನ ದುರ್ವಿಚಾರ ತ್ತು ದುರಾಚಾರಗಳಿಗೆ ಅನುಗುಣವಾದ ಶಿಕ್ಷೆಯನ್ನು ಅವನು ನರಕದಲ್ಲಿ ಅನುಭವಿಸುವನು. ವ ಶಿಫಾರಸೂ ಅವನನ್ನು ಅದರಿಂದ ರಕ್ಷಿಸಲಾರದು. ಯಾವನ ವಕಾಲತ್ತೂ ಅವನಿಗೆ ಕಾರಿಯಾಗದು. ಲಂಚವಾಗಲೀ ಪರಿಹಾರ ಧನವಾಗಲೀ ಅಲ್ಲಾಹನ ನ್ಯಾಯಾಲಯದಲ್ಲಿ ಕರಿಸಲ್ಪಡದು. ದೇವನ ಹೊರತು ಅವನು ಯಾರ್‍ಯಾರಲ್ಲಿ ನಂಬಿಕೆಯಿಟ್ಟು ಕರೆದು ರ್ಥಿಸುತ್ತಿದ್ದನೋ, ಯಾರ್‍ಯಾರಲ್ಲಿ ಭರವಸೆಯಿಟ್ಟು ಅವನು ಜೀವನದಲ್ಲಿ ಸ್ವೇಚ್ಛಾವಿಹಾರಿ ಗಿ ವರ್ತಿಸಿದ್ದನೋ, ಯಾರ್‍ಯಾರ ಆರಾಧನೆ ಉಪಾಸನೆಗಳಲ್ಲಿ ಅವನು ಮೋಕ್ಷವನ್ನು ಸಿದ್ದನೋ, ಅವೆಲ್ಲವೂ ಮಿಥ್ಯವೆಂದು ಅವನಿಗೆ ಮನವರಿಕೆಯಾಗುವುದು. ಯಾರಿಗಾಗಿ ನುಷ್ಯನು ಜೀವನದಲ್ಲಿ ಎಲ್ಲ ನಿಷಿದ್ಧ ಮಾರ್ಗಗಳಿಂದ ಸಂಪಾದಿಸಿದ್ದನೋ ಆ ತಂದೆ ಯಿಗಳಾಗಲೀ ಮಡದಿ ಮಕ್ಕಳಾಗಲೀ ಬಂಧು, ನೆಂಟರಿಷ್ಟರಾಗಲಿ ಯಾರೂ ಅಂದು ನ ನೆರವಿಗೆ ಬರಲಾರರು. ನರಕಾಗ್ನಿಯ ಘೋರ ಯಾತನೆಯಿಂದ ಅವನನ್ನು ಸಲಾರರು. ಈ ಬಗ್ಗೆ ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ:

"ಅಂದು ಮನುಷ್ಯನು ದೂರ ಓಡುವನು- ತನ್ನ ಸಹೋದರನಿಂದ- ತನ್ನ ತಾಯಿಯಿಂದ ತ್ತು ತನ್ನ ತಂದೆಯಿಂದ- ತನ್ನ ಪತ್ನಿಯಿಂದ ಮತ್ತು ತನ್ನ ಮಕ್ಕಳಿಂದ. ಅವರಲ್ಲಿ ಯೊಬ್ಬನಿಗೂ ಅಂದು, ತನ್ನ ಹೊರತು ಬೇರೆ ಯಾರ ಪ್ರಜ್ಞೆಯೂ ಇಲ್ಲದಂತಹ ಸ್ಥಿತಿ ಬಂದೊದಗುವುದು." (ಪವಿತ್ರ ಕುರ್‌ಆನ್: **80: 34-37**)

"ಜನರೇ ನಿಮ್ಮ ಪ್ರಭುವಿನ ಕ್ರೋಧವನ್ನು ಭಯಪಡಿರಿ. ವಾಸ್ತವದಲ್ಲಿ ಪುನರುತ್ಥಾನದ ಗೆಯ ಮಹಾಕಂಪನವು (ಭಯಾನಕ) ವಿಷಯವಾಗಿದೆ. ನೀವು ಅದನ್ನು ಕಾಣುವಂದು ುಣಿಸುವವಳು ಹಾಲುಣ್ಣುವ ತನ್ನ ಶಿಶುವನ್ನು ಮರೆತು ಬಿಡುವಳು. ಪ್ರತಿಯೊಬ್ಬ ್ಣಿಗೆ ಗರ್ಭಪಾತವಾಗಿ ಬಿಡುವುದು. ಜನರು ನಿಮಗೆ ಉನ್ಮತ್ತರಂತೆ ತೋರುವರು. ್ತತಃ ಅವರು ಉನ್ಮತ್ತರಾಗಿರಲಾರರು. ನಿಜವಾಗಿ ಅಲ್ಲಾಹನ ಯಾತನೆಯೇ ಅಷ್ಟು ಕರ ವಾಗಿರುವುದು." (ಪವಿತ್ರ ಕುರ್‌ಆನ್: **22: 1-2**)

"ಭೂಮಿಯು ತನ್ನ ಸಂಪೂರ್ಣ ಉಗ್ರತೆಯೊಂದಿಗೆ ಕುಲುಕಲ್ಪಡುವಾಗ, ಭೂಮಿಯು ್ನಳಗಿನ ಸಕಲ ಹೊರೆಗಳನ್ನೂ ಹೊರ ಹಾಕಿ ಬಿಡುವಾಗ- ಮತ್ತು ಮನುಷ್ಯನು ಕ್ಕೇನಾಗುತ್ತಿದೆ?' ಎನ್ನುವಾಗ, ಅಂದು ಅದು ತನ್ನ (ಮೇಲೆ ಗತಿಸಿದ) ಸ್ಥಿತಿಗತಿಗಳನ್ನು ರಿಸುವುದು- ಏಕೆಂದರೆ ನಿನ್ನ ಪ್ರಭು ಅದಕ್ಕೆ (ಹಾಗೆ ಮಾಡಬೇಕೆಂದು) ಅಪ್ಪಣೆ ಕೊಟ್ಟಿರು ು. ಅಂದು ಜನರು ವಿಭಿನ್ನ ಸ್ಥಿತಿಗಳಲ್ಲಿ ಮರಳುವರು. (ಇದು) ಅವರ ಕರ್ಮಗಳು ರಿಗೆ ತೋರಿಸಲ್ಪಡಲಿಕ್ಕಾಗಿ, ತರುವಾಯ ಅಣು ಗಾತ್ರದಷ್ಟು ಪುಣ್ಯ ಕಾರ್ಯವೆಸಗಿದವನು ನ್ನು ಕಂಡೇ ತೀರುವನು. ಮತ್ತು ಅಣು ಗಾತ್ರದಷ್ಟು ಪಾಪ ಕಾರ್ಯವೆಸಗಿ ದವನು ನ್ನು ಕಂಡೇ ತೀರುವನು." (ಪವಿತ್ರ ಕುರ್‌ಆನ್: **99: 1-8**)

ಮಾನವ ಹುಟ್ಟು ಪಾಪಿಯಲ್ಲ

ಮೇಲಿನ ವಿವರಗಳಿಂದ ಇಹಲೋಕ ಜೀವನ ಮತ್ತು ಪರಲೋಕದ ಕುರಿ ಇಸ್ಲಾಮಿನ ಕಲ್ಪನೆಗಳ ಸ್ಥೂಲ ಪರಿಚಯವಾಯಿತು. ಈ ಕಲ್ಪನೆಯಲ್ಲಿ ಮಾನವನು ಜನ್ಮ ಪಾಪಿಯಾಗಿದ್ದಾನೆ ಎಂಬುದಕ್ಕೆ ಯಾವ ಸ್ಥಾನವೂ ಇಲ್ಲ. ಎಲ್ಲಾ ಮನುಷ್ಯರು ಜನ್ಮ ಸೃಷ್ಟಿಕರ್ತನಾದ ಅಲ್ಲಾಹನ ಮೂಲ ಪ್ರಕೃತಿಯಲ್ಲಿ ಸೃಷ್ಟಿಸಲ್ಪಡುತ್ತಾರೆ. ನಿಷ್ಕಳಂಕವ ಬೌದ್ಧಿಕ ಮತ್ತು ಶಾರೀರಿಕ ಸಾಮರ್ಥ್ಯಗಳೊಂದಿಗೆ ಅವನನ್ನು ಸೃಷ್ಟಿಸಲಾಗಿದೆ. ಅವ ಜನ್ಮತಃ ಪಾಪಿಯೋ ಪುಣ್ಯವಂತನೋ ಆಗಿರದೆ ಬೆಳೆದು ಪ್ರೌಢನಾದ ಬಳಿಕ ಇರಿಸಿ ಕೊಳ್ಳ ವಿಶ್ವಾಸ - ನಂಬಿಕೆಗಳು, ವಿಚಾರ-ಶ್ರದ್ಧೆಗಳು, ಆಚಾರ - ಸಂಪ್ರದಾಯಗಳು ಮತ್ತು ಕೃ ಕರ್ಮಗಳ ಆಧಾರದಲ್ಲೇ ಪಾಪ ಪುಣ್ಯಗಳನ್ನು ಕಟ್ಟಿಕೊಳ್ಳುತ್ತಾನೆ.

ಮಾನವಕುಲದ ಆದಿಪಿತರಾದ ಆದಮ್‌ರವರು(ಅ) ಸ್ವರ್ಗದಲ್ಲಿ ಮಾಡಿದ ಒಂ ತಪ್ಪಿಗಾಗಿ ಅವರನ್ನು ಶಿಕ್ಷಾರೂಪದಲ್ಲಿ ಧರೆಗಿಳಿಸಲಾಯಿತೆಂಬ ನಂಬಿಕೆಯನ್ನೂ ಆದಮ್‌ರ(ಸಂತತಿಗಳ ಪಾಪದ ಪ್ರಾಯಶ್ಚಿತ್ತಕ್ಕಾಗಿ ಪ್ರವಾದಿ ಈಸಾ[ಏಸುಕ್ರಿಸ್ತ](ಅ)ರನ್ನು ದೇವ ಶಿಲುಬೆಗೇರಿಸಿದನೆಂಬ ವಿಶ್ವಾಸವನ್ನೂ ಇಸ್ಲಾಮ್ ಖಂಡಿಸುತ್ತದೆ. ಆದುದರಿಂದ ಕೇ ಒಬ್ಬ ಪ್ರವಾದಿಯನ್ನು ದೇವಪುತ್ರನೆಂದು ನಂಬಿದ ಮಾತ್ರಕ್ಕೆ ಜನರ ಎಲ್ಲ ಪಾಪಗಳಿ ಪ್ರಾಯಶ್ಚಿತ್ತವಾಗಿ ಬಿಡುತ್ತದೆ ಎಂಬ ಮಿಥ್ಯ ಕಲ್ಪನೆಗೆ ಇಸ್ಲಾಮಿನಲ್ಲಿ ಆಸ್ಪದವೇ ಇ ಆದಮ್‌ರವರು(ಅ) ಸೃಷ್ಟಿಸಲ್ಪಟ್ಟಿದ್ದೇ ಭೂಮುಖದ ಮೇಲೆ ಅಲ್ಲಾಹನ ಪ್ರತಿನಿಧಿಯ ಕಳುಹಿಸಲ್ಪಡಲಿಕ್ಕಾಗಿ ಎಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸುತ್ತದೆ. ಮನುಷ್ಯರ ಸೃಷ್ಟಿ ಮುಂಚೆ ಸೃಷ್ಟಿಕರ್ತನು ತನ್ನ ದೇವಚರರನ್ನು ಉದ್ದೇಶಿಸಿ ಹೀಗೆ ಹೇಳಿರುವುದಾಗಿ ಪವಿ ಕುರ್‌ಆನ್ ಉಲ್ಲೇಖಿಸಿದೆ: "ನಿಮ್ಮ ಪ್ರಭುವು ಮಲಾಯಿಕಃ(ದೇವಚರ)ರೊಡನೆ, "ನಾ ಭೂಮಿಯಲ್ಲಿ ಒಬ್ಬ ಖಲೀಫಃನನ್ನು (ಪ್ರತಿನಿಧಿ) ನೇಮಿಸಲಿದ್ದೇನೆ" ಎಂದು ಹೇ ಸಂದರ್ಭವನ್ನು ಕೊಂಚ ಊಹಿಸಿರಿ." (ಪವಿತ್ರ ಕುರ್‌ಆನ್: 2: 30)

ಮನುಷ್ಯನನ್ನು ಭೂಮಿಗೆ ಕಳುಹಿಸುವಾಗ ಜೀವನದ ವಾಸ್ತವಿಕತೆಯನ್ನು ಮತ್ತು ದೇ ಮಾರ್ಗದರ್ಶನದ ಅನುಸರಣೆಯ ಅಗತ್ಯವನ್ನು ಆತನಿಗೆ ಈ ರೀತಿ ಬೋಧಿಸಲಾಗಿ "ನೀವೆಲ್ಲರೂ ಇಲ್ಲಿಂದ ಹೊರಗಿಳಿಯಿರಿ. ಮುಂದೆ ನನ್ನ ಕಡೆಯಿಂದ ಮಾರ್ಗದರ್ಶನ ನಿಮ್ಮ ಬಳಿ ಬಂದಾಗ, ಯಾರು ಆ ಮಾರ್ಗದರ್ಶನದಂತೆ ನಡೆಯುವರೋ ಅವ ಯಾವುದೇ ಭಯ ಮತ್ತು ಚಿಂತೆ ಇರಲಾರದು. ಆ ಮಾರ್ಗದರ್ಶನವನ್ನು ಮಾನ್ಯಮಾಡ ನಿರಾಕರಿಸುವವರೂ ನಮ್ಮ 'ದೃಷ್ಟಾಂತ'ಗಳನ್ನು ಸುಳ್ಳಾಗಿಸುವವರೂ ನರಕಾಗ್ನಿಯಲ್ಲಿ ಬೀಳುವ ರಾಗಿದ್ದು ಅಲ್ಲಿ ಅವರು ಸದಾ ಕಾಲವೂ ಇರುವರು." (ಪವಿತ್ರ ಕುರ್‌ಆನ್: 2: 38-39

❖ ❖ ❖ ❖

ಧ್ಯಾಯ: ಆರು

ಆರಾಧನಾ ಕರ್ಮಗಳು

ಮಾರ್ಝ್

ಮುಸ್ಲಿಮರು ದಿನಕ್ಕೆ ಐದು ಬಾರಿ ಮಸೀದಿಗೆ ಹೋಗಿ ಸಾಮೂಹಿಕವಾಗಿ ನಮಾರ್ಝ್ ಾಡುವುದು ಕಡ್ಡಾಯವಾಗಿದೆ. ನಮಾರ್ಝ್ ಎಂಬುದು ಇಸ್ಲಾಮ್ ಧರ್ಮದ ವಿಶಿಷ್ಟ ್ರಾರ್ಥನೆ. ಅದನ್ನು ವಯಸ್ಕರಾದ ಸ್ತ್ರೀ-ಪುರುಷರೆಲ್ಲರೂ ಕಡ್ಡಾಯವಾಗಿ ನಿರ್ವಹಿಸಬೇಕು. ರುಷರು ಅದನ್ನು ಮಸೀದಿಗಳಲ್ಲಿ ಸಂಘಟಿತವಾಗಿ ನೆರವೇರಿಸಬೇಕೆಂಬುದು ಇಸ್ಲಾಮಿನ ಧಿ. ಮಸೀದಿಗಳಿಂದ ದಿನಕ್ಕೆ ಐದು ಬಾರಿ ಕೇಳಿ ಬರುವ 'ಅದಾನ್' ಅಥವಾ ಬಾಂಗ್ ು ನಮಾರ್ಝ್‌ನ ಕರೆಯಾಗಿದೆ. ಅನೇಕ ದೇಶ ಬಾಂಧವರು ಈ 'ಅದಾನ್' ಕರೆಯನ್ನೇ ್ರಾರ್ಥನೆ ಎಂದು ಭಾವಿಸುವುದಿದೆ. 'ಅದಾನ್' ಕರೆಯನ್ನು ಮಸೀದಿಗಳಿಂದ ಸಾಮಾನ್ಯವಾಗಿ ೖಕುಗಳಲ್ಲಿ ಕೊಡಲಾಗುತ್ತದೆ. ಕೆಲವರು ಪ್ರಾರ್ಥನೆಯನ್ನು ಇಷ್ಟು ಗಟ್ಟಿಯಾಗಿ ಯಾಕೆ ೕಳಬೇಕು, ದೇವರಿಗೆ ಕಿವಿ ಕೇಳಿಸುವುದಿಲ್ಲವೆ? ಎಂದು ಕೇಳುವುದುಂಟು. ನಿಜವಾಗಿ ದಾನ್' ಪ್ರಾರ್ಥನೆಯಲ್ಲ. ಅದು "ಪ್ರಾರ್ಥನೆಗೆ ಸಮಯವಾಯಿತು, ಮಸೀದಿಗೆ ಬನ್ನಿ" ಂದು ಜನರಿಗೆ ನೀಡುವ ಕರೆ. ಊರಿನ ಅಥವಾ ಪರಿಸರದ ಎಲ್ಲ ಜನರೂ ಕೇಳುವಂತಾಗಲು ದನ್ನು ಮೈಕ್‌ನಲ್ಲಿ ನೀಡಲಾಗುತ್ತದೆ. ಅದಾನ್‌ನಲ್ಲಿ ಹೇಳಲಾಗುವ ವಚನಗಳ ಅರ್ಥ ಿದರೆ ಈ ಬಗ್ಗೆ ಇರುವ ಹಲವು ಗೊಂದಲಗಳು ನಿವಾರಣೆಯಾಗುತ್ತದೆ.

ಅಲ್ಲಾಹು ಅಕ್ಬರ್ = ಅಲ್ಲಾಹನೇ ಅತ್ಯಂತ ಮಹಾನನು (ಇದನ್ನು ನಾಲ್ಕು ಬಾರಿ ೕಳಲಾಗುತ್ತದೆ).

ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ = ಅಲ್ಲಾಹನಲ್ಲದೆ ಆರಾಧನೆಗೆ ಅರ್ಹರು ಾರೂ ಇಲ್ಲವೆಂದು ನಾನು ಸಾಕ್ಷ್ಯ ನುಡಿಯುತ್ತೇನೆ. (ಎರಡು ಬಾರಿ)

ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್ = ಪ್ರವಾದಿ ಮುಹಮ್ಮದ್‌ರವರು(ಸ) ಲ್ಲಾಹನ ಸಂದೇಶವಾಹಕರಾಗಿರುವರೆಂದು ನಾನು ಸಾಕ್ಷ್ಯ ನುಡಿಯುತ್ತೇನೆ. (ಎರಡು ಬಾರಿ)

ಹಯ್ಯ ಅಲಸ್ಸಲಾಃ = ಬನ್ನಿ ನಮಾರ್ಝ್‌ನ ಕಡೆಗೆ (ಎರಡು ಸಲ)

ಹಯ್ಯ ಅಲಲ್ ಫಲಾಹ್ = ಬನ್ನಿ ವಿಜಯದ ಕಡೆಗೆ (ಎರಡು ಸಲ)

ಅಲ್ಲಾಹು ಅಕ್ಬರ್ = ಅಲ್ಲಾಹನೇ ಅತ್ಯಂತ ಮಹಾನನು (ಎರಡು ಸಲ)

ಲಾ ಇಲಾಹ ಇಲ್ಲಲ್ಲಾಹ್ = ಅಲ್ಲಾಹನಲ್ಲದೆ ಮತ್ತಾರೂ ಆರಾಧನೆಗೆ ಅರ್ಹರ

ನಿತ್ಯ ಬೆಳಿಗ್ಗೆ ಸೂರ್ಯೋದಯಕ್ಕೆ ಸುಮಾರು 80 ನಿಮಿಷ ಮುಂಚೆ ದಿನದ ಪ್ರಥ ನಮಾಝ್‌ಗೆ ಕರೆ ನೀಡುವಾಗ ಎರಡು ಸಲ ಈ ಕೆಳಗಿನ ನುಡಿಯನ್ನು ಸೇರಿಸಿ ಕ ಲಾಗುತ್ತದೆ:

ಅಸ್ಸಲಾತು ಖೈರುಂಮಿನನ್ನೌಮ್ = ನಮಾಝ್ ನಿದ್ರೆಗಿಂತ ಉತ್ತಮವಾದು

ಉಳಿದ ನಾಲ್ಕು ನಮಾಝ್‌ಗಳನ್ನು ಈ ಕೆಳಗಿನ ವೇಳೆಗಳಲ್ಲಿ ನೆರವೇರಿಸಲಾಗುತ್ತ ಮಧ್ಯಾಹ್ನ ಸೂರ್ಯನು ನಡುನೆತ್ತಿಯಿಂದ ಸ್ವಲ್ಪ ಪಶ್ಚಿಮದ ಕಡೆ ವಾಲಿದಾಗ, ಅಪರ ವಸ್ತುವಿನ ನೆರಳು ವಸ್ತುವಿನ ಆಕಾರಕ್ಕಿಂತ ಉದ್ದವಾದಾಗ, ಸಂಜೆ ಸೂರ್ಯನು ಅಸ್ತಮಿಸಿದ ಮತ್ತು ರಾತ್ರೆ ಮಲಗುವುದಕ್ಕೆ ಮುಂಚೆ. ಈ ಐದು ಹೊತ್ತಿನ ನಮಾಝ್‌ಗಳ ಪ್ರತಿಯೊಂದರಲ್ಲೂ ಕುರ್‌ಆನಿನ ಪೀಠಿಕೆಯಂತಿರುವ ಅದರ ಪ್ರಥಮ ಅಧ್ಯಾಯವನ್ನು ಪ ಲಾಗುತ್ತದೆ. ಅದುವೇ ನಮಾಝ್‌ನ ಮುಖ್ಯ ಪ್ರಾರ್ಥನೆ. ಅದರ ಅನುವಾದ ಈ ರೀತಿ ಇ

"ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂ ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು. ಪರಮ ದಯಾಳು, ಕರುಣಾನಿ ನಿರ್ಣಾಯಕ ದಿನದ ಅಧಿಪತಿ (ಆದ ಪ್ರಭುವೇ)- ನಾವು ನಿನಗೆ ಮಾತ್ರ ಇಬಾದ ಮಾಡುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ. ನಮಗೆ ಸನ್ಮಾರ್ಗವ ತೋರಿಸು. ನೀನು ಅನುಗ್ರಹಿಸಿದವರ ಮಾರ್ಗ. ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವ (ನೀನು ತೋರಿದ) ದಾರಿಯನ್ನು ತಪ್ಪಿ ನಡೆದವರ ಮಾರ್ಗವೂ ಅಲ್ಲ."

(ಪವಿತ್ರ ಕುರ್‌ಆನ್: 1: 1

ಕಅಬಾಕ್ಕೆ ಮುಖ ಮಾಡುವುದು

ನಮಾಝ್ ಮಾಡುವಾಗ ಮುಸ್ಲಿಮರು ಪವಿತ್ರ ಕಅಬಾ ಭವನದತ್ತ ಮು ಮಾಡುತ್ತಾರೆ. ಭಾರತದ ಪಶ್ಚಿಮ ಕರಾವಳಿಯಲ್ಲಿ ವಾಸಿಸುವ ನಮಗೆ ಅದು ಪಶ್ಚಿ ದಿಕ್ಕಿನಲ್ಲೇ ಇದೆ. ಕಅಬಾ ಭವನವು ಏಕದೇವಾರಾಧನೆಗಾಗಿ ಈ ಭೂಮಿಯ ಮೇ ನಿರ್ಮಿಸಲ್ಪಟ್ಟ ಪ್ರಥಮ ಆರಾಧನಾಲಯ. ಆದ್ದರಿಂದಲೇ ಜಗತ್ತಿನ ಎಲ್ಲ ಕಡೆ ಮುಸ್ಲಿಮರೂ ಆ ಕಡೆಗೇ ಮುಖ ಮಾಡಿ ನಮಾಝ್ ಮಾಡುತ್ತಾರೆ. ಲೋಕದ ಎ ಮಸೀದಿಗಳೂ ಕಅಬಾಕ್ಕೆ ಅಭಿಮುಖ ವಾಗಿರುವಂತೆಯೇ ನಿರ್ಮಿಸಲ್ಪಡುತ್ತವೆ.

ನಮಾಝ್ ಅತ್ಯಂತ ಸರಳವೂ ಸುಂದರವೂ ಆದ ಆರಾಧನಾ ಕ್ರಮ. ಒಬ್ಬ ವಿನಿ

ವಕನಂತೆ ಕೈಕಟ್ಟಿ ನಿಲ್ಲುವುದು. ಮೊಣಕಾಲಿನ ಮೇಲೆ ಕೈಗಳನ್ನಿಟ್ಟು ಬಾಗುವುದು. ಪುನಃ ವ್ದು ನೇರವಾಗಿ ನಿಲ್ಲುವುದು, ಪಾದದ ಬೆರಳುಗಳು, ಮೊಣಕಾಲು, ಅಂಗೈ, ಹಣೆ ಮತ್ತು ೂಗನ್ನು ನೆಲಕ್ಕೆ ತಾಗಿಸಿ ಸಾಷ್ಟಾಂಗವೆರಗುವುದು. ಆ ಬಳಿಕ ಎದ್ದು ಎರಡು ಕಾಲುಗಳ ೀಲೆ ಕುಳಿತುಕೊಳ್ಳುವುದು ಹಾಗೂ ಪುನಃ ಅದೇ ರೀತಿಯ ಸಾಷ್ಟಾಂಗ ವಂದನೆ ಮಾಡುವುದು. ಮ ನಮಾಝ್‌ನ ಒಂದು 'ರಕಅತ್' (Unit) ಆಗಿದೆ. ಪ್ರಭಾತದ ನಮಾಝ್‌ನಲ್ಲಿ ಂತಹ ಎರಡು ರಕಅತ್‌ಗಳು. ಮಧ್ಯಾಹ್ನ, ಅಪರಾಹ್ನ ಮತ್ತು ರಾತ್ರಿ ತಲಾ ನಾಲ್ಕು ಅತ್‌ಗಳು ಮತ್ತು ಸಂಜೆಯ ನಮಾಝ್‌ನಲ್ಲಿ ಮೂರು ರಕಅತ್‌ಗಳು ಇವೆ. ಇವಲ್ಲದೆ ತ್ಯಾವಂತ ಸತ್ಯವಿಶ್ವಾಸಿಗಳು ಅನೇಕ ರಕಅತ್‌ಗಳ ಐಚ್ಛಿಕ ನಮಾಝ್‌ಗಳನ್ನೂ ಮಾಡುತ್ತಾರೆ. ವುಗಳ ಪೈಕಿ ಕಡ್ಡಾಯ ನಮಾಝ್‌ಗಳಿಗೆ ಮುಂಚೆ ಮತ್ತು ಅವುಗಳ ಬಳಿಕ ಮಾಡುವ ಚ್ಛಿಕ ನಮಾಝ್ ಮತ್ತು ರಾತ್ರಿಯ ಅಂತ್ಯ ಯಾಮಗಳಲ್ಲಿ ಎದ್ದು ಮಾಡುವ ಐಚ್ಛಿಕ ಮಾಝ್ ಪ್ರಮುಖವಾಗಿದೆ. ಐಚ್ಛಿಕ ನಮಾಝ್‌ಗಳನ್ನು ಮಸೀದಿಗಿಂತ ಮನೆಯಲ್ಲಿ ರ್ವಹಿಸುವುದೇ ಶ್ರೇಷ್ಠವೆಂದು ಪ್ರವಾದಿ ಮುಹಮ್ಮದ್(ಸ) ಬೋಧಿಸಿರುವರು.

ಮಾಝ್‌ನ ಮಹತ್ವ

ನಮಾಝ್‌ನ ಮಹತ್ವದ ಕುರಿತು ಪವಿತ್ರ ಕುರ್‌ಆನಿನಲ್ಲಿ ಅನೇಕ ಸೂಕ್ತಗಳಿವೆ. ವುಗಳ ಪೈಕಿ ಒಂದೆರಡನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇವೆ:

"ನನ್ನ ಸ್ಮರಣೆಗಾಗಿ ನಮಾಝನ್ನು ಸಂಸ್ಥಾಪಿಸಿರಿ." (ಪವಿತ್ರ ಕುರ್‌ಆನ್: **20: 14**)

"ಖಂಡಿತವಾಗಿಯೂ ನಮಾಝ್ ಸಮಯ ನಿರ್ಣಯದೊಂದಿಗೆ ಸತ್ಯವಿಶ್ವಾಸಿಗಳ ೀಲೆ ಕಡ್ಡಾಯವಾಗಿದೆ." (ಪವಿತ್ರ ಕುರ್‌ಆನ್: **4: 103**)

"ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯಪಾಲನೆಯೊಂದಿಗೆ ನೆರವೇರಿಸಲು ಧಿಸಲ್ಪಟ್ಟಿರುವ ಕಡ್ಡಾಯ ವಿಧಿಯಾಗಿರುತ್ತದೆ." (ಪವಿತ್ರ ಕುರ್‌ಆನ್: **29: 45**)

ಾಮೂಹಿಕ ನಮಾಝ್

ಮಸೀದಿಗಳಲ್ಲಿ ಐದು ಹೊತ್ತಿನ ಕಡ್ಡಾಯ ನಮಾಝ್‌ಗಳನ್ನು ಸಂಘಟಿತವಾಗಿ ರ್ವಹಿಸಲಾಗುತ್ತದೆ ಎಂದು ಹೇಳಿದೆವಷ್ಟೆ. ಈ ನಮಾಝ್‌ನಲ್ಲಿ ಒಬ್ಬರು ಮುಂದೆ ನಿಂತು ತರರು ಅವರ ಹಿಂದೆ ಸಾಲುಗಟ್ಟಿ ನಿಲ್ಲುತ್ತಾರೆ. ನಮಾಝ್‌ನ ನಾಯಕತ್ವ ವಹಿಸುವವರನ್ನು ಮಾಮ್'(ನಾಯಕ) ಎನ್ನುತ್ತಾರೆ. ಅವರನ್ನು ಅನುಕರಿಸುತ್ತಾ ಹಿಂದೆ ಇದ್ದವರೆಲ್ಲರೂ ಮಾಝ್ ಮಾಡುತ್ತಾರೆ. ಒಂದು ಇಸ್ಲಾಮೀ ರಾಷ್ಟ್ರದಲ್ಲಿ ಆಯಾ ಪ್ರದೇಶದ ಮುಖ್ಯ ಡಳಿತಗಾರರೇ ಮಸೀದಿಯ ಇಮಾಮರೂ ಆಗಿರುತ್ತಾರೆ. ರಾಜಧಾನಿಯ ಮುಖ್ಯ ಸೀದಿಯ ನಮಾಝ್‌ನ ನೇತೃತ್ವವನ್ನು ರಾಷ್ಟ್ರದ ಅಧ್ಯಕ್ಷ ಅಥವಾ ಖಲೀಫ ಅವರೇ

ವಹಿಸುತ್ತಾರೆ. ಪ್ರಾಂತೀಯ ರಾಜಧಾನಿಯ ಮುಖ್ಯ ಮಸೀದಿಯಲ್ಲಿ ರಾಜ್ಯಪಾ ನಮಾಝ್‌ನ ನಾಯಕತ್ವ ವಹಿಸುತ್ತಾರೆ ಮತ್ತು ಜಿಲ್ಲಾ ಕೇಂದ್ರದ ಮುಖ್ಯ ಮಸೀದಿಯ ಜಿಲ್ಲೆಯ ಆಡಳಿತಗಾರ. ಈ ರೀತಿ ಪ್ರತಿಯೊಂದು ಕಡೆಯ ಆಯಾ ಪ್ರದೇ ಮುಖ್ಯಾಧಿಕಾರಿಯೇ ನಮಾಝ್‌ನ ನೇತೃತ್ವವನ್ನು ವಹಿಸುವರು. ಇಸ್ಲಾಮೀ ರಾಷ್ಟ್ರವ ಕಡೆ ಮುಸ್ಲಿಮರು ತಂತಮ್ಮ ಪ್ರದೇಶದ ಮಸೀದಿಗೆ ಇಮಾಮರನ್ನು ನೇಮಕ ಮಾಡುತ

ಇಸ್ಲಾಮಿನಲ್ಲಿ ಪೌರೋಹಿತ್ಯವಿಲ್ಲ

ಇಸ್ಲಾಮಿನಲ್ಲಿ ಪೌರೋಹಿತ್ಯವಿಲ್ಲ. ಧಾರ್ಮಿಕ ವಿಧಿಗಳನ್ನು ನಿರ್ವಹಿಸಲು ಯಾವ ವಿಶಿಷ್ಟ ವರ್ಗದ ಅಗತ್ಯವಿಲ್ಲ. ಇಸ್ಲಾಮಿನಲ್ಲಿ ಸನ್ಯಾಸವಿಲ್ಲ. ಧರ್ಮದ ಜ್ಞಾನ, ಕುರ್‌ಆ ವಿದ್ಯೆ, ದೇವಭಕ್ತಿ ಮತ್ತು ಧರ್ಮನಿಷ್ಠೆ ಇವುಗಳೇ ಇಮಾಮತ್‌ಗೆ(ನೇತೃತ್ವ) ಬೇ ಗುಣಗಳು. ಈ ಗುಣಗಳಿರುವ ಯಾವ ವ್ಯಕ್ತಿಯೂ ಇಮಾಮತ್(ನೇತೃತ್ವ) ಮಾಡಬಹು ಅವನ ಕುಲಗೋತ್ರಗಳಿಗಾಗಲೀ ವರ್ಣ, ವರ್ಗಗಳಿಗಾಗಲೀ ಯಾವುದೇ ಮಹತ್ವವಿ ಇಮಾಮತ್‌ಗೆ ನೇಮಿಸಲ್ಪಟ್ಟ ವ್ಯಕ್ತಿ ಕಾರಣಾಂತರದಿಂದ ಯಾವುದಾದರೂ ನಮಾಝ ಸಮಯಕ್ಕೆ ಸರಿಯಾಗಿ ಬರದೇ ಇದ್ದರೆ ಅವರ ಸ್ಥಾನದಲ್ಲಿ ನಮಾಝ್‌ಗೆ ಸೇರಿದವರ ಕುರ್‌ಆನ್ ಹೆಚ್ಚು ಬಲ್ಲವರು ಮತ್ತು ಹೆಚ್ಚು ದೇವಭಕ್ತಿಯುಳ್ಳವರನ್ನು ಇಮಾಮ ನಿಲ್ಲಿಸಲಾಗುತ್ತದೆ. ನಮಾಝ್‌ನಲ್ಲಿ ಎಲ್ಲರೂ ಸಮಾನವಾಗಿ ಒಂದೇ ಪಂಕ್ತಿಯಲ್ಲಿ ಭು ಭುಜ, ಪಾದಕ್ಕೆ ಪಾದ ತಾಗಿಸಿ ಸಾಲಾಗಿ ನಿಲ್ಲುತ್ತಾರೆ. ಮೊದಲು ಬಂದವರು ಮುಂ ಸಾಲಲ್ಲಿ ಮತ್ತು ಅನಂತರ ಬಂದವರು ಹಿಂದಿನ ಸಾಲುಗಳಲ್ಲಿ ನಿಲ್ಲಬೇಕು. ಯಾರಿಗೂ ಸ್ಥಳ ಕಾದಿರಿಸುವಿಕೆಯಿಲ್ಲ. ಯಾರನ್ನೂ ಕಾಯುವ ಪ್ರಸಂಗವಿಲ್ಲ.

❖ ❖ ❖ ❖

ಧ್ಯಾಯ: ಏಳು

ಝಕಾತ್: ಧನಿಕರ ಸೊತ್ತಿನಲ್ಲಿರುವ ಬಡವರ ಹಕ್ಕು

ನಮಾಝ್‌ನಂತೆಯೇ ಝಕಾತ್ ಕೂಡಾ ಇಸ್ಲಾಮಿನ ಒಂದು ಆರಾಧನಾ ವಿಧಿ. ಮಾಝ್ ದೈಹಿಕ ಆರಾಧನೆಯಾದರೆ ಝಕಾತ್ ಸಂಪತ್ತಿನ ಮೂಲಕ ನಡೆಸುವ ಆರಾಧನೆ. ತಿಯೊಬ್ಬ ಸ್ಥಿತಿವಂತ ಮುಸ್ಲಿಮನೂ ತನ್ನ ಸೊತ್ತು-ಸಂಪತ್ತುಗಳ ಒಂದಂಶವನ್ನು ತಿವರ್ಷ ಬಡಬಗ್ಗರಿಗೆ, ದೀನದಲಿತರಿಗೆ, ಸಾಲದಲ್ಲಿ ಮುಳುಗಿದವರಿಗೆ, ಪ್ರಯಾಣಿಕರಿಗೆ, ರ್ಮ ಸಂಸ್ಥಾಪನೆಯ ಕಾರ್ಯಗಳಿಗೆ ಕಡ್ಡಾಯವಾಗಿ ನೀಡಬೇಕು.

ವರ್ಷಾಂತ್ಯದಲ್ಲಿ ಒಬ್ಬ ಸ್ಥಿತಿವಂತ ಮುಸ್ಲಿಮನ ಬಳಿಯಿರುವ ನಗದು, ವ್ಯಾಪಾರ ಕು, ಬೆಳ್ಳಿ, ಬಂಗಾರಗಳು ಇತ್ಯಾದಿಗಳ ನಲ್ವತ್ತನೇ ಒಂದಂಶವನ್ನು ಝಕಾತ್ ಡಬೇಕು. ಕೃಷಿ ಉತ್ಪನ್ನಗಳಿಂದ ಹತ್ತನೇ ಒಂದಂಶವನ್ನೂ ಕೃತಕ ನೀರಾವರಿಯಿಂದಾದ ಷಿ ಉತ್ಪನ್ನಗಳ ಇಪ್ಪತ್ತನೇ ಒಂದಂಶವನ್ನೂ ಝಕಾತ್ ನೀಡಬೇಕು.

ಝಕಾತ್ ಒಂದು ದಾನವಾಗಲೀ ಭಿಕ್ಷೆಯಾಗಲೀ ಅಲ್ಲ. ಅದು ಬಡವರ ಹಕ್ಕಾಗಿದೆ. ನ್ನು ಪವಿತ್ರ ಕುರ್‌ಆನ್ ಅನೇಕ ಕಡೆ ಸ್ಪಷ್ಟಪಡಿಸಿದೆ. ಅವುಗಳ ಪೈಕಿ ಒಂದನ್ನು ಮಾತ್ರ ಲ್ಲಿ ಉಲ್ಲೇಖಿಸುತ್ತೇವೆ:

"ಅವರ ಸಂಪತ್ತುಗಳಲ್ಲಿ ಒಂದು ನಿಶ್ಚಿತ ಹಕ್ಕಿದೆ. ಬೇಡುವವನಿಗೆ ಮತ್ತು ವಂಚಿತನಿಗೆ."

(ಪವಿತ್ರ ಕುರ್‌ಆನ್: 70: 24-25)

ಒಂದು ಇಸ್ಲಾಮೀ ಸರಕಾರವಿರುವ ಕಡೆ ಧನಿಕರಿಂದ ಝಕಾತನ್ನು ಸಂಗ್ರಹಿಸುವ ತ್ತು ಬಡವರಲ್ಲಿ ಅದನ್ನು ವಿತರಿಸುವ ಕಾರ್ಯವನ್ನು ಸರಕಾರವೇ ಮಾಡಬೇಕು. ಇಸ್ಲಾಮೀ ರಕಾರವಿಲ್ಲದಿರುವಲ್ಲಿ ಮುಸ್ಲಿಮರು ಝಕಾತನ್ನು ಸಾಧ್ಯವಿರುವಲ್ಲಿ ಸಾಮೂಹಿಕವಾಗಿ ಂಗ್ರಹಿಸುವ ಮತ್ತು ವಿತರಿಸುವ ವ್ಯವಸ್ಥೆ ಮಾಡುತ್ತಾರೆ. ಉಳಿದೆಡೆ ಧನಿಕರು ಸ್ವಯಂ ವರ ವಿತರಣೆಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಝುಕಾತನ್ನು ದಾನದ ರೂಪದಲ್ಲಿ ನೀಡುವುದು ಮತ್ತು ಅದಕ್ಕಾಗಿ ಬಡವರು ತಮ ಮನೆ ಬಾಗಿಲಿಗೆ ಬರುವಂತೆ ಮಾಡುವುದು ಇಸ್ಲಾಮಿನ ಶಿಕ್ಷಣಕ್ಕೆ ವಿರುದ್ಧವಾಗಿದೆ. ಅ ಝುಕಾತ್ ಹಣದ ವಿತರಣೆಯ ಹೊಣೆಯನ್ನು ಧನಿಕರ ಮೇಲೆಯೇ ಹೊರಿಸುತ್ತದೆ ಮತ ಅರ್ಹ ಬಡವರನ್ನು ಗುರುತಿಸಿ ಅದನ್ನು ತಲುಪಿಸುವಂತೆ ಅವರಿಗೆ ಆಜ್ಞಾಪಿಸುತ್ತದೆ.

ಭಿಕ್ಷಾಟನೆಯನ್ನು ಇಸ್ಲಾಮ್ ಅತ್ಯುಗ್ರವಾಗಿ ಖಂಡಿಸಿದೆ. ಕೊಡುವ ಕೈಯು ಪಡೆಯು ಕೈಗಿಂತ ಉತ್ತಮವಾದುದೆಂದು ಪ್ರವಾದಿ(ಸ) ಹೇಳಿರುವರು. ಹಾಗೆಯೇ ಬೇಡುವುದನ ವೃತ್ತಿಯಾಗಿಸಿಕೊಂಡವನು ನಿರ್ಣಾಯಕ ದಿನದಂದು ಮುಖದ ಮೇಲೆ ಚರ್ಮವಿಲ್ಲ ಸ್ಥಿತಿಯಲ್ಲಿ ಅಲ್ಲಾಹನ ಮುಂದೆ ಹಾಜರಾಗುವನೆಂದೂ ಪ್ರವಾದಿ(ಸ) ಎಚ್ಚರಿಸಿರುವರು ಬಡವರನ್ನು ಮನೆ ಬಾಗಿಲಲ್ಲಿ ಸೇರಿಸಿ ಅವರಿಗೆ ಝುಕಾತ್ ವಿತರಣೆ ಮಾಡುವುದರಲ್ಲಿ ತೃಪ್ತಿ ಕಾಣುವವರು ಪ್ರವಾದಿ ಮುಹಮ್ಮದ್‌ರವರ(ಸ) ಆದೇಶಗಳಿಗೆ ವಿರುದ್ಧ ವರ್ತಿಸುತ್ತಿದ್ದಾರೆ ಮಾತ್ರವಲ್ಲ, ಬಡವರ ಆತ್ಮ ಗೌರವವನ್ನು ಕಸಿಯುವ ಮೂಲಕ ಒಂದು ಘೋ ಅಪರಾಧವನ್ನೂ ಎಸಗುತ್ತಿದ್ದಾರೆ.

❖ ❖ ❖ ❖

ಅಧ್ಯಾಯ: ಎಂಟು

ಹಜ್ಜ್: ವಿಶ್ವ ಭ್ರಾತೃತ್ವ ಸಮ್ಮೇಳನ

ಪ್ರವಾದಿ ಮುಹಮ್ಮದ್(ಸ) ಹೇಳಿರುವರು: ಇಸ್ಲಾಮಿನ ಸೌಧವನ್ನು ಪಂಚ ಬುನಾದಿಗಳ ಮೇಲೆ ಕಟ್ಟಲಾಗಿದೆ. ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲವೆಂದೂ ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರೆಂದೂ ಸಾಕ್ಷ್ಯ ವಹಿಸುವುದು, ನಮಾಝ್ ಸಂಸ್ಥಾಪಿಸುವುದು, ಝಕಾತ್ ನೀಡುವುದು, ರಮಝಾನ್ ತಿಂಗಳ ಉಪವಾಸ ವ್ರತ ಆಚರಿಸುವುದು ಮತ್ತು ಹಜ್ಜ್ ನಿರ್ವಹಿಸುವುದು.

ಹಜ್ಜ್ ಇಸ್ಲಾಮಿನ ಐದು ಬುನಾದಿ ಅಥವಾ ಸ್ತಂಭಗಳ ಪೈಕಿ ಒಂದಾಗಿದೆ ಎಂಬುದು ಈ ಪ್ರವಾದಿ ವಚನದಿಂದ ವ್ಯಕ್ತವಾಗುತ್ತದೆ. ನಮಾಝ್, ಝಕಾತ್ ಮತ್ತು ಉಪವಾಸ ವ್ರತದಂತೆಯೇ ಹಜ್ಜ್ ಕೂಡಾ ಒಂದು ಕಡ್ಡಾಯ ಆರಾಧನಾ ವಿಧಿಯಾಗಿದೆ.

ಆರ್ಥಿಕವಾಗಿಯೂ ದೈಹಿಕವಾಗಿಯೂ ಸಾಮರ್ಥ್ಯವುಳ್ಳ ಪ್ರತಿಯೊಬ್ಬ ವಯಸ್ಕ ಮುಸ್ಲಿಮ್ ಸ್ತ್ರೀ-ಪುರುಷರ ಮೇಲೆ ಜೀವನದಲ್ಲಿ ಒಮ್ಮೆ ಹಜ್ಜ್ ನಿರ್ವಹಿಸುವುದು ಕಡ್ಡಾಯವಾಗಿದೆ.

ಅರೇಬಿಯಾದ ಮಕ್ಕಾ ಪಟ್ಟಣವನ್ನು ಸಂದರ್ಶಿಸಿ ಅಲ್ಲಿರುವ ಕಅಬಾ ಭವನಕ್ಕೆ ಏಳು ಬಾರಿ ಪ್ರದಕ್ಷಿಣೆ ಬರುವುದು, ಕಅಬಾ ಭವನದ ಬಳಿಯಲ್ಲೇ ಇರುವ ಸಫಾ ಮತ್ತು ಮರ್ವಾ ಎಂಬ ಬೆಟ್ಟಗಳ ಮಧ್ಯೆ ಏಳು ಬಾರಿ ನಡೆದಾಡುವುದು, ಮಕ್ಕಾದ ಪರಿಸರ ದಲ್ಲಿರುವ ಮಿನಾ, ಅರಫಾತ್ ಮತ್ತು ಮುಝ್ದಲಿಫಾಗಳಲ್ಲಿ ನಿರ್ದಿಷ್ಟ ದಿನಗಳಲ್ಲಿ ತಂಗಿ ಅಲ್ಲಾಹನ ಸ್ತುತಿ-ಸ್ತೋತ್ರ ಮತ್ತು ಪ್ರಾರ್ಥನೆಗಳಲ್ಲಿ ನಿರತರಾಗಿರುವುದು, ಇವಿಷ್ಟು ಹಜ್ಜ್ ಕರ್ಮದ ಪ್ರಮುಖ ಪ್ರತ್ಯಕ್ಷ ವಿಧಿಗಳು. ಪ್ರಾಣಿ ಬಲಿಯೂ ಹಜ್ಜ್ ಕಾರ್ಯಗಳಲ್ಲಿ ಸೇರಿದೆ.

ಪವಿತ್ರ ಕಅಬಾ

ಕಅಬಾ ಭವನವು ಜಗತ್ತಿನ ಅತ್ಯಂತ ಪುರಾತನ ಮಸೀದಿಯಾಗಿದೆ. ಅದನ್ನು ಅಲ್ಲಾಹನ ಆಜ್ಞೆಯ ಪ್ರಕಾರ ಪ್ರವಾದಿ ಇಬ್ರಾಹೀಮ್(ಅ) ಮತ್ತವರ ಪುತ್ರ ಪ್ರವಾದಿ ಇಸ್ಮಾಈಲ್(ಅ) ಸುಮಾರು 4 ಸಾವಿರ ವರ್ಷಗಳ ಹಿಂದೆ ನಿರ್ಮಿಸಿದರು. ಹಜ್ಜ್ ಕರ್ಮವೂ ಕಅಬಾ ಭವನದಷ್ಟೇ ಪುರಾತನವಾದ ಒಂದು ಆರಾಧನಾ ವಿಧಿಯಾಗಿದೆ. ಕಅಬಾ ಭವನದ

ನಿರ್ಮಾಣ ಕಾರ್ಯ ಪೂರ್ಣಗೊಂಡಾಗ ಅಲ್ಲಾಹನು ಪ್ರವಾದಿ ಇಬ್ರಾಹೀಮ್‌ರವರಿಗೆ(ಜನರನ್ನು ಆ ಭವನದೆಡೆಗೆ ಆಹ್ವಾನಿಸಲು ಆಜ್ಞಾಪಿಸಿದನು. ಅಂತೆಯೇ ಅವರು ಜನರನ ಆ ಪವಿತ್ರ ಭವನದ ಹಜ್ಜ್ ನಿರ್ವಹಿಸಲು ಆಹ್ವಾನಿಸಿದರು. ಅಂದಿನಿಂದ ಈ ತನಕ ಕರೆಗೆ ಓ ಗೊಡುತ್ತಾ ಜಗತ್ತಿನ ದಶದಿಕ್ಕುಗಳಿಂದಲೂ ಜನರು ಪ್ರತಿವರ್ಷ ಚಾಂದ್ರಮಾ ವರ್ಷದ ದುಲ್‌ಹಜ್ಜ್ ತಿಂಗಳಲ್ಲಿ ಆ ಪುಣ್ಯ ಭವನದ ಯಾತ್ರೆ ಕೈಗೊಳ್ಳುತ್ತಿದ್ದಾರೆ.

ನಾನು ಹಾಜರಿದ್ದೇನೆ!

ಚಾಂದ್ರಮಾನ ವರ್ಷದ ಕೊನೆಯ ತಿಂಗಳಾದ ದುಲ್‌ಹಜ್ಜ್‌ನಲ್ಲಿ ಜಗತ್ತಿನ ಏಕದೇ ವಿಶ್ವಾಸಿಗಳ ಕೇಂದ್ರವಾದ ಈ ಭವನದಲ್ಲಿ ಒಂದು ವಿಶ್ವ ಸಮ್ಮೇಳನವೇ ಏರ್ಪಡುತ್ತದೆ ಎಲ್ಲರೂ ಅಲ್ಲಾಹನ ಕರೆಗೆ ಓಗೊಡುತ್ತಾ, "ನಾನು ಹಾಜರಿದ್ದೇನೆ, ಅಲ್ಲಾಹನೇ ನಾನ ಹಾಜರಿದ್ದೇನೆ. ನಾನು ಹಾಜರಿದ್ದೇನೆ, ನಿನಗಾರೂ ಭಾಗೀದಾರರಿಲ್ಲ, ನಾನು ಹಾಜರಿದ್ದೇನೆ ಖಂಡಿತವಾಗಿಯೂ ಸ್ತುತಿಸ್ತೋತ್ರಗಳೂ ಅನುಗ್ರಹಗಳೂ ಆಧಿಪತ್ಯವೂ ನಿನಗೇ ಮೀಸಲು. ನಿನಗಾರೂ ಭಾಗೀದಾರರಿಲ್ಲ" ಎಂಬ ಘೋಷಣೆಯೊಂದಿಗೆ ಮಕ್ಕಾ ಪಟ್ಟಣದತ್ತ ಧಾವಿಸುತ್ತಾರೆ. ಪುರುಷರು ಹೊಲಿಗೆಯಿಲ್ಲದ ಕೇವಲ ಎರಡು ಬಿಳಿ ವಸ್ತ್ರಗಳನ್ನು ಧರಿಸಿರುತ್ತಾರೆ. ಒಂದನ್ನು ಲುಂಗಿ ಯಂತೆ ಉಟ್ಟುಕೊಂಡು ಇನ್ನೊಂದನ್ನು ಹೆಗಲ ಮೇಲೆ ಹೊದ್ದುಕೊಳ್ಳುತ್ತಾರೆ. ಸ್ತ್ರೀಯರು ಮುಖ ಮತ್ತು ಹಸ್ತಗಳನ್ನು ಬಿಟ್ಟು ಉಳಿದ ದೇಹವನ್ನು ಬಿಳಿ ವಸ್ತ್ರದಿಂದ ಪೂರ್ಣ ಮುಚ್ಚಿಕೊಳ್ಳುತ್ತಾರೆ.

ಬಿಳಿಯರು, ಕರಿಯರು, ಹಳದಿ ವರ್ಣದವರು, ಅರಬರು, ತುರ್ಕರು, ಭಾರತೀಯರು, ಅಮೇರಿಕಾ, ಆಫ್ರಿಕಾ, ಆಸ್ಟ್ರೇಲಿಯಾ, ಯೂರೋಪ್ ಮತ್ತು ಏಷ್ಯಾ ಖಂಡದವರು. ಜಗತ್ತಿನ ಎಲ್ಲ ಭಾಷೆಗಳನ್ನಾಡುವವರು. ಶ್ರೀಮಂತರು, ಬಡವರು, ರಾಜರು, ರಾಷ್ಟ್ರಾಧ್ಯಕ್ಷರುಗಳು, ಮಂತ್ರಿಗಳು, ಪ್ರಜೆಗಳು, ವಿದ್ಯಾವಂತರು, ಅವಿದ್ಯಾವಂತರು ಎಲ್ಲರೂ ಒಂದೇ ಸಮವಸ್ತ್ರ ಧರಿಸಿ ಒಂದೇ ಘೋಷಣೆಯನ್ನು ಕೂಗುತ್ತಾ ಹಜ್ಜ್‌ನ ವಿಧಿ ಕರ್ಮಗಳನ್ನು ನೆರವೇರಿಸುವ ದೃಶ್ಯ ಎಂತಹ ಮನುಷ್ಯನ ಮನಸ್ಸಿನಿಂದಲೂ ಜನಾಂಗೀಯ, ರಾಷ್ಟ್ರೀಯ, ಭಾಷೀಯ, ವಂಶೀಯ, ವರ್ಣೀಯ, ವರ್ಗೀಯ ಮೇಲ್ಮೆಗಳ ಮತ್ತು ಪಕ್ಷಪಾತಗಳ ಮಿಥ್ಯ ಕಲ್ಪನೆಗಳನ್ನು ಕಿತ್ತೆಸೆಯಲು ಪರ್ಯಾಪ್ತವಿದೆ.

ಲಕ್ಷೋಪಲಕ್ಷ ಜನರು ನೆರೆಯುವ ಈ ವಾರ್ಷಿಕ ಹಜ್ಜ್‌ಯಾತ್ರೆಯಲ್ಲಿ ವಾದ್ಯ ಘೋಷಗಳಾಗಲೀ, ಆಡಂಬರದ ಆಚರಣೆಗಳಾಗಲೀ, ಅಪವ್ಯಯದ ಕಂದಾಚಾರಗಳಾಗಲೀ ಇಲ್ಲ. ಯಾವುದೇ ರೀತಿಯ ಜಗಳವಾಗಲೀ, ಗಲಭೆ ಗದ್ದಲವಾಗಲೀ, ಉತ್ಸವ-ಜಾತ್ರೆಗಳಲ್ಲಿ ಸಾಮಾನ್ಯವಾಗಿರುವ ಮನೋರಂಜನಾ ಕಾರ್ಯಕ್ರಮಗಳಾಗಲೀ, ಆಟ ವಿನೋದಗಳಾಗಲೀ ಇಲ್ಲ. ಸಾಂಸ್ಕೃತಿಕ ಕಾರ್ಯಕ್ರಮದ ಹೆಸರಲ್ಲಿ ನಡೆಯುವ ನೃತ್ಯ-ಸಂಗೀತಗಳಾಗಲೀ, ಸ್ತ್ರೀ-ಪುರುಷರ ಅನಿರ್ಬಂಧಿತ ಮಿಲನಗಳಾಗಲೀ ಇಲ್ಲಿ ನಡೆಯುವುದಿಲ್ಲ. ಸ್ತ್ರೀಯೂ ಮುಖ

ತ್ತು ಹಸ್ತಗಳನ್ನು ಬಿಟ್ಟು ದೇಹದ ಉಳಿದ ಎಲ್ಲ ಭಾಗಗಳನ್ನೂ ಉಬ್ಬು-ತಗ್ಗುಗಳು ಗೋಚರಿಸದಂತೆ ಮುಚ್ಚಿಕೊಳ್ಳಬೇಕಾದುದು ಕಅಬಾ ಭವನದೊಳಗೂ ಕಡ್ಡಾಯವಾಗಿದೆ. ತಿ-ಪತ್ನಿಯರು ಕೂಡಾ ಪರಸ್ಪರ ರೊಂದಿಗೆ ಕಾಮಾಸಕ್ತಿಯ ಮಾತು ಕೃತಿಗಳನ್ನು ರ್ಣವಾಗಿ ವರ್ಜಿಸಬೇಕು.

ಅಬಾ ಪ್ರದಕ್ಷಿಣೆ

ಕಅಬಾ ಭವನದ ತವಾಫ್ ಹಜ್ಜ್ ಕರ್ಮದ ಒಂದು ಕಡ್ಡಾಯ ವಿಧಿಯಾಗಿದೆ. ಕಅಬಾ ವನಕ್ಕೆ ಏಳು ಬಾರಿ ಕಾಲ್ನಡಿಗೆಯಿಂದ ಸುತ್ತು ಬರುವುದಕ್ಕೆ ತವಾಫ್ ಎನ್ನಲಾಗುತ್ತದೆ. ಲ್ಕು ಗೋಡೆಗಳಿರುವ ಈ ಭವನದ ಪ್ರದಕ್ಷಿಣೆಯನ್ನು ಎಲ್ಲಿಂದ ಆರಂಭಿಸಬೇಕೆಂದು ಚಿಸಲು ಅದರ ಒಂದು ಮೂಲೆಯಲ್ಲಿ ಎರಡು ಗೋಡೆಗಳು ಸೇರುವ ಕಡೆ ಒಂದು ಶಿಲೆಯನ್ನು ಆಳೆತ್ತರದಲ್ಲಿ ಗೋಡೆಗೆ ಜೋಡಿಸಿ ಇಡಲಾಗಿದೆ. ಇದನ್ನು 'ಹಜರುಲ್ ಸ್ವದ್' ಎನ್ನುತ್ತಾರೆ. 'ಕಪ್ಪು ಕಲ್ಲು' ಎಂಬುದೇ 'ಹಜರುಲ್ ಅಸ್ವದ್'ನ ಅರ್ಥ. ಆ ಕಪ್ಪು ಲೆಯು ಪ್ರವಾದಿ ಇಬ್ರಾಹೀಮ್(ಅ) ನಿರ್ಮಿಸಿದ ಕಅಬಾ ಭವನದ ಒಂದು ಭಾಗವಾಗಿತ್ತು. ಂದಿನ ತನಕವೂ ಅದನ್ನು ಉಳಿಸಿಕೊಳ್ಳಲಾಗಿದೆ. ಒಂದು ತವಾಫ್ ಆಗಬೇಕಾದರೆ ಏಳು ಬ ಪ್ರದಕ್ಷಿಣೆ ಬರಬೇಕು. ಒಂದು ಪ್ರದಕ್ಷಿಣೆಯು 'ಹಜರುಲ್ ಅಸ್ವದ್'ನಿಂದ ರಂಭಗೊಂಡು ಅಲ್ಲಿಗೇ ಕೊನೆಗೊಳ್ಳುತ್ತದೆ. ತೀವ್ರ ಜನಸಂದಣಿಯಲ್ಲಿಯೂ ಪ್ರದಕ್ಷಿಣೆಯ ರಂಭ ಮತ್ತು ಅಂತ್ಯ ತಿಳಿಯುವಂತಾಗಲು ಪ್ರತಿಸಲ ಪ್ರದಕ್ಷಿಣೆ ಬರುವಾಗ 'ಹಜರುಲ್ ಸ್ವದ್' ಅನ್ನು ಚುಂಬಿಸಬೇಕು ಅಥವಾ ಅದರೆಡೆಗೆ ಕೈಸನ್ನೆ ಮಾಡಬೇಕು ಎಂಬ ಯಮವಿದೆ.

'ಹಜರುಲ್ ಅಸ್ವದ್' ಕೇವಲ ಒಂದು ಕರಿಯ ಶಿಲೆ. ಅದಕ್ಕೆ ಯಾವುದೇ ವಸ್ತುವಿನ ಕಾರವಿಲ್ಲ. ಅದು ಆರಾಧ್ಯವೋ ಪೂಜ್ಯವೋ ಅಲ್ಲ. ಪ್ರವಾದಿವರ್ಯರ(ಸ) ಆಪ್ತ ಂಗಾತಿಗಳಲ್ಲೊಬ್ಬರೂ ದ್ವಿತೀಯ ಖಲೀಫರೂ ಆದ ಹ. ಉಮರ್ ಫಾರೂಕ್(ರ) ಒಮ್ಮೆ ಜರುಲ್ ಅಸ್ವದ್'ನ ಕುರಿತು ಈ ರೀತಿ ಹೇಳಿರುವುದು ಇತಿಹಾಸ ಗ್ರಂಥಗಳಲ್ಲಿ ಲ್ಲೇಖಿಸಲ್ಪಟ್ಟಿದೆ: "ಹಜರುಲ್ ಅಸ್ವದ್! ನೀನು ಒಂದು ಶಿಲೆ ಮಾತ್ರ. ಯಾರಿಗೂ ಲಾಭ-ಷ್ಟ ಉಂಟು ಮಾಡಲು ನಿನ್ನಿಂದಾಗದು. ಪ್ರವಾದಿವರ್ಯರು(ಸ) ಚುಂಬಿಸಿದ ಕಾರಣಕ್ಕೆ ಾತ್ರ ನಿನ್ನನ್ನು ನಾನು ಚುಂಬಿಸುತ್ತಿದ್ದೇನೆ. ಅನ್ಯಥಾ ನಾನು ನಿನ್ನನ್ನು ಚುಂಬಿಸುತ್ತಿರಲಿಲ್ಲ."
(ಬುಖಾರಿ-ಮುಸ್ಲಿಮ್)

ಇದರಿಂದ 'ಹಜರುಲ್ ಅಸ್ವದ್' ಪೂಜ್ಯವೆಂಬ ಭಾವನೆಯನ್ನು ಸಂಪೂರ್ಣ ರಾಕರಿಸಿದಂತಾಗುತ್ತದೆ. ಪ್ರವಾದಿ ಇಬ್ರಾಹೀಮ್‌ರಿಂದ(ಅ) ಪ್ರವಾದಿ ಮುಹಮ್ಮದ್‌ರವರ(ಸ) ನಕ ಅನೇಕ ಪ್ರವಾದಿಗಳು, ಪ್ರವಾದಿಯ ಲಕ್ಷಗಟ್ಟಲೆ ಸಂಗಾತಿಗಳು(ರ), ಕೋಟಿಗಟ್ಟಲೆ ಹಾತ್ಮರು, ಪುಣ್ಯ ಪುರುಷರು, ಧರ್ಮನಿಷ್ಠರು ಅದನ್ನು ಚುಂಬಿಸಿದ್ದಾರೆಂಬುದೇ

ಅದಕ್ಕಿರುವ ಪ್ರಾಮುಖ್ಯತೆ. ಅದರ ಚುಂಬನವು ಹಜ್ಜ್‌ನ ಕಡ್ಡಾಯ ವಿಧಿಯೇನಲ್ಲ. ಅದೊಂದು ಐಚ್ಛಿಕ ಪುಣ್ಯಕಾರ್ಯ ಮಾತ್ರ. ಅದನ್ನು ಚುಂಬಿಸದೆ ಅದರೆಡೆಗೆ ಸನ್ನೆ ಮಾ ಅಥವಾ ಅದನ್ನು ನೋಡಿ ತವಾಫ್ ಆರಂಭಿಸಿದರೂ ಸಾಕಾಗುತ್ತದೆ.

ಹಜ್ಜ್ ಯಾತ್ರೆಯಾದ್ಯಂತ ಸತ್ಯವಿಶ್ವಾಸಿಗಳು ಮಾಡುವ ಮುಖ್ಯ ಪ್ರಾರ್ಥನೆ ಹೀಗಿದೆ

"ನಮ್ಮ ಪ್ರಭೂ! ನಮಗೆ ಇಹಲೋಕದಲ್ಲೂ ಒಳಿತನ್ನು ದಯಪಾಲಿಸು, ಪರಲೋ ದಲ್ಲೂ ಒಳಿತನ್ನು ದಯಪಾಲಿಸು ಮತ್ತು ನರಕಾಗ್ನಿಯ ಶಿಕ್ಷೆಯಿಂದ ನಮ್ಮನ್ನು ರಕ್ಷಿಸು.

ಈ ಪ್ರಾರ್ಥನೆಯಲ್ಲಿ ಬಾಳಿನ ಬಗ್ಗೆ ಸತ್ಯವಿಶ್ವಾಸಿಯ ಕಲ್ಪನೆಯು ಅಭಿವ್ಯಕ್ತವಾಗುತ್ತದ ಅವನು ಲೋಕವನ್ನೂ ಅದರ ಸುಖಗಳನ್ನೂ ತ್ಯಜಿಸುವ ವೈರಾಗಿಯಲ್ಲ. ಅಂತೆಯೆ ಪರಲೋಕದ ಶಾಶ್ವತ ಜೀವನದ ಬಗ್ಗೆ ನಂಬಿಕೆಯಿಲ್ಲದ ಅಥವಾ ಅದರ ಬಗ್ಗೆ ನಿಶ್ಚಿಂತನಾ ಲೌಕಿಕ ಸುಖಾಡಂಬರಗಳಲ್ಲೇ ತಲ್ಲೀನನಾಗುವ ಭೌತಿಕವಾದಿಯೂ ಅಲ್ಲ. ಅವನು ಇಹ ಪರಗಳೆರಡರ ಹಿತವನ್ನು ಬಯಸುತ್ತಾ ಅದನ್ನು ಗಳಿಸಲು ಶ್ರಮಿಸುತ್ತಿರುವ ಸಮತೋಲನವಾ ಎಂಬುದಕ್ಕೆ ಪವಿತ್ರ ಕುರ್‌ಆನ್ ಕಲಿಸಿರುವ ಈ ಪ್ರಾರ್ಥನಾ ನುಡಿಗಳೇ ಸಾಕ್ಷಿ.

ಬಲಿದಾನ

ಪ್ರಾಣಿ ಬಲಿಯೂ ಹಜ್ಜ್‌ನ ವಿಧಿಗಳಲ್ಲಿ ಒಂದು ಪ್ರಮುಖ ವಿಧಿ. ಮುಸ್ಲಿಮರಿ ತಿನ್ನಲು ಅನುಮತಿಯಿರುವ ಜಾನುವಾರುಗಳ ಪೈಕಿ ಯಾವುದಾದರೊಂದು ಜಾನುವಾರನ್ನು ಹಜ್ಜ್ ಯಾತ್ರಿಕನು ಬಲಿ ನೀಡಬೇಕು. ಆದರೆ ಈ ಬಲಿದಾನವು ಕಅಬಾ ಭವನದಲ್ಲಾಗಲಿ ಅದರ ಸುತ್ತಲಿರುವ 'ಮಸ್ಜಿದುಲ್ ಹರಾಮ್' ಎಂಬ ಪವಿತ್ರ ಮಸೀದಿಯಲ್ಲಾಗಲೀ ಅಥವ ಅದರ ಪರಿಸರದಲ್ಲಾಗಲೀ ನೀಡುವುದಲ್ಲ. ಬದಲಾಗಿ 'ಮಿನಾ'ದ ಮೈದಾನದಲ್ಲಿ ಈ ಬಲಿದಾನವನ್ನು ನೀಡಲಾಗುತ್ತದೆ. ಹ. ಇಬ್ರಾಹೀಮ್‌ರವರು(ಅ) ಅಲ್ಲಾಹನ ಆಜ್ಞೆಯ ಮೇರೆ ತಮ್ಮ ವೃದ್ಧಾಪ್ಯದ ಏಕೈಕ ಆಸರೆಯಾಗಿದ್ದ ಪುತ್ರ ಇಸ್ಮಾಈಲ್‌ರನ್ನು(ಅ) ಬಲಿಕೊಡಲ ಸಿದ್ಧರಾದ ಘಟನೆಯ ಸ್ಮರಣಾರ್ಥವಾಗಿ ಈ ಬಲಿದಾನವನ್ನು ನೀಡಲಾಗುತ್ತದೆ. ಬಲಿ ನೀಡಿ ಜಾನುವಾರಿನ ರಕ್ತವಾಗಲೀ ಅದರ ಮಾಂಸವಾಗಲೀ ಅಲ್ಲಾಹನಿಗೆ ತಲುಪುವುದಿಲ್ಲ. ಆತನಿ ತಲುಪುವುದು ಸತ್ಯವಿಶ್ವಾಸಿಯ ಧರ್ಮನಿಷ್ಠೆ ಮತ್ತು ದೇವಭಕ್ತಿ ಮಾತ್ರ ಎಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸುತ್ತದೆ. ಈ ಪ್ರಾಣಿ ಬಲಿಯನ್ನು ಕೇವಲ ದೇವಭಕ್ತಿಯ ಸಂಕೇತ ರೂಪದಲ್ಲಿ ಮಾಡಿ ಅದರ ಮಾಂಸವನ್ನು, ಸ್ವತಃ ಬಲಿ ನೀಡಿದವನೂ ತಿನ್ನಬೇಕು ಮತ್ತು ಬಂಧುಗಳಿಗೂ ಬಡಬಗ್ಗರಿಗೂ ಹಂಚಬೇಕು ಎಂದು ಆಜ್ಞಾಪಿಸಲಾಗಿದೆ. ಅಂತೆಯೆ ಲಕ್ಷಗಟ್ಟಲೆ ಯಾತ್ರಾರ್ಥಿಗಳು ಬಲಿ ನೀಡಿದ ಪ್ರಾಣಿಗಳ ಮಾಂಸವನ್ನು ಸೌದಿ ಸರಕಾರವು ಜಗತ್ತಿನ ಬಡ ರಾಷ್ಟ್ರಗಳಿಗೆ ತಲುಪಿಸಿ ಧರ್ಮಾರ್ಥ ವಿತರಣೆಯ ವ್ಯವಸ್ಥೆ ಮಾಡುತ್ತದೆ

❖ ❖ ❖ ❖

್ಯಾಯ: ಒಂಭತ್ತು

ಜಿಹಾದ್: ಧರ್ಮ ಸಂಸ್ಥಾಪನೆಗಾಗಿ ಹೋರಾಟ

ಮುಸ್ಲಿಮನೆಂದರೆ, "ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ಕುರ್‌ಆನ್ ದುಕೊಂಡು ಒಂದೋ ಕುರ್‌ಆನನ್ನು ನಂಬಿ ಮುಸ್ಲಿಮನಾಗು ಇಲ್ಲವೇ ಖಡ್ಗಕ್ಕೆ ಕಾಗಿ ಸಾಯಲು ಸಿದ್ಧನಾಗು" ಎಂದು ಹೇಳುವ ಮತ್ತು ಖಡ್ಗದ ಬಲದಿಂದ ಜನರನ್ನು ಾಂತರ ಮಾಡುವ ಒಬ್ಬ ಮತಾಂಧನೆಂಬ ವಿಕೃತ ಚಿತ್ರವನ್ನು ಇಸ್ಲಾಮಿನ ಪಾಶ್ಚಾತ್ಯ ್ಗಗಳು ಮತ್ತವರ ಪೌರ್ವಾತ್ಯ ಅಂಧಾನುಯಾಯಿಗಳು ಮೂಡಿಸಿರುವರು. ಸಾಮಾನ್ಯವಾಗಿ ಾದ್' ಎಂದರೆ ಧರ್ಮವನ್ನು ಬಲಾತ್ಕಾರವಾಗಿ ಹೇರಲು ಮಾಡುವಂತಹ ಯುದ್ಧ ಮ ಭಾವಿಸಲಾಗುತ್ತದೆ. ಆದರೆ ಪವಿತ್ರ ಕುರ್‌ಆನ್, ಪ್ರವಾದಿ ವಚನಗಳು, ಪ್ರವಾದಿ ವನ ಚರಿತ್ರೆ ಮತ್ತು ಅವರ ಸತ್ಯಸಂಧರಾದ ಖಲೀಫರುಗಳ ಇತಿಹಾಸವು ಜಿಹಾದ್‌ನ ಇದಕ್ಕೆ ತೀರಾ ವ್ಯತಿರಿಕ್ತವಾದ ಒಂದು ಚಿತ್ರವನ್ನು ನಮ್ಮ ಮುಂದಿಡುತ್ತದೆ.

'ಧರ್ಮದಲ್ಲಿ ಯಾವುದೇ ಒತ್ತಾಯ, ಬಲಾತ್ಕಾರಗಳಿಲ್ಲ' (2: 256) ಎಂದು ಪವಿತ್ರ ್‌ಆನ್ ಖಡಾಖಂಡಿತವಾಗಿ ಸಾರಿದೆ. ವಿಚಾರ ಸ್ವಾತಂತ್ರ್ಯವು ಮನುಷ್ಯನ ಜನ್ಮಸಿದ್ಧ ್ಕ. ಅದನ್ನು ಕಸಿಯುವ ಅಧಿಕಾರವನ್ನು ಇಸ್ಲಾಮ್ ಯಾರಿಗೂ ನೀಡುವುದಿಲ್ಲ. ಒತ್ತಾಯ-ಾತ್ಕಾರಗಳಿಂದ, ಖಡ್ಗ-ಬಂದೂಕುಗಳಿಂದ ಜನರ ಶಿರಬಾಗಿಸಬಹುದೇ ಹೊರತು ಅವರ ಗಳನ್ನು ಜಯಿಸಲು ಸಾಧ್ಯವಿಲ್ಲ. ಇಸ್ಲಾಮ್ ಮನುಷ್ಯರ ಮನವನ್ನು ಜಯಿಸ ುಸುತ್ತದೆ. ಅದು ಮಾನವನ ಮನಸ್ಸಿನಲ್ಲಿ ಕೆಲವು ವಿಶ್ವಾಸ-ಶ್ರದ್ಧೆಗಳನ್ನು ಬಿತ್ತ ುಸುತ್ತದೆ. ಮನುಷ್ಯನಲ್ಲಿ ವೈಚಾರಿಕ ಕ್ರಾಂತಿಯನ್ನು ತರಬಯಸುತ್ತದೆ. ಈ ಕಾರ್ಯ ದಿಂದ ಸಾಧ್ಯವಲ್ಲವೆಂಬುದು ಶತಃಸಿದ್ಧ. ಇಸ್ಲಾಮಿನ ಸಂಪೂರ್ಣ ಧರ್ಮಸಂಹಿತೆಯು ವೈಚಾರಿಕ ಕ್ರಾಂತಿಯನ್ನು ಅವಲಂಬಿಸಿರುವಾಗ ಅದನ್ನು ಖಡ್ಗದ ಮೂಲಕ ಸಾಧಿಸ ುದೆನ್ನುವುದು ಮಹಾ ಮೂರ್ಖತನ.

ಪ್ರವಾದಿವರ್ಯರ(ಸ) ಮಕ್ಕಾ ಜೀವನದ 13 ವರ್ಷಗಳಲ್ಲಿ ಅವರು ಮತ್ತು ಅವರ

ಅನುಯಾಯಿಗಳು ಅನುಭವಿಸಿದ ಕಷ್ಟ-ನಷ್ಟಗಳಿಗೆ, ಹಿಂಸೆ-ದೌರ್ಜನ್ಯಗಳಿಗೆ ಲೆಕ್ಕ ವಿ ಇರಲಿಲ್ಲ. ಆದರೂ ಪ್ರವಾದಿ(ಸ) ಆ ಕಾಲದಲ್ಲಿ ತಮ್ಮ ಅನುಯಾಯಿಗಳಿಗೆ ಆ ರಕ್ಷಣೆಗಾಗಿಯೂ ಖಡ್ಗ ಎತ್ತುವ ಅನುಮತಿ ನೀಡಿರಲಿಲ್ಲ. ಕೊನೆಗೊಮ್ಮೆ ಶತ್ರುಗಳ ಹಿ ಮಿತಿ ಮೀರಿದಾಗ ಪ್ರವಾದಿವರ್ಯರು(ಸ) ಮತ್ತವರ ಅನುಯಾಯಿಗಳು(ರ) ಮ ಪಟ್ಟಣವನ್ನು ತೊರೆದು ಮದೀನಾಕ್ಕೆ ವಲಸೆ ಹೋಗುತ್ತಾರೆ. ಅಲ್ಲಿಯೂ ಪ್ರವಾ ವರ್ಯರು(ಸ) ಮತ್ತವರ ಅನುಯಾಯಿಗಳನ್ನೂ ತಮ್ಮಿಷ್ಟದ ಧರ್ಮವನ್ನು ಪಾಲಿಸುತ ಹಾಯಾಗಿ ಜೀವಿಸಲು ಮತ್ತು ಶಾಂತಿಯುತವಾಗಿ ಅದನ್ನು ಪ್ರಚಾರ ಪಡಿಸಲು ಮಕ್ಕಾ ಬಹುದೇವಾರಾಧಕರು ಅನುಮತಿಸಲಿಲ್ಲ. ಅವರು ಮಕ್ಕಾದಿಂದ ದಂಡೆತ್ತಿ ಬಂದು ಮದೀನಾ ಮೇಲೆ ಆಕ್ರಮಣಕ್ಕೆ ಸಜ್ಜಾದಾಗ ಮುಸ್ಲಿಮರಿಗೆ ಮೊಟ್ಟ ಮೊದಲು ಯುದ್ಧ ಮಾಡ ಅನುಮತಿ ದೊರೆಯಿತು. ಪವಿತ್ರ ಕುರ್‌ಆನಿನಲ್ಲಿ ಅದು ಈ ರೀತಿ ಉಲ್ಲೇಖಿಸಲ್ಪಟ್ಟಿ

"ನಿಮ್ಮೊಡನೆ ಯುದ್ಧ ಮಾಡುವವರೊಂದಿಗೆ ನೀವೂ ಅಲ್ಲಾಹನ ಮಾರ್ಗದ ಯುದ್ಧ ಮಾಡಿರಿ. ಆದರೆ ಅತಿಕ್ರಮಿಸಬೇಡಿರಿ. ಅಲ್ಲಾಹನು ಅತಿಕ್ರಮಿಸುವವರ ಮೆಚ್ಚುವುದಿಲ್ಲ." (ಪವಿತ್ರ ಕುರ್‌ಆನ್: 2: 190)

ಅದೇ ರೀತಿ ಧರ್ಮಾಚರಣೆ ಮತ್ತು ಧರ್ಮ ಪ್ರಚಾರವು ಮನುಷ್ಯನ ಮೂಲಭೂ ಸ್ವಾತಂತ್ರ್ಯ. ತನಗಿಷ್ಟ ಬಂದ ಧರ್ಮವನ್ನು ಸ್ವೀಕರಿಸುವ, ಅದರಂತೆ ಜೀವನ ಸಾಗಿಸ ಮತ್ತು ಶಾಂತಿಯುತವಾಗಿ ಅದನ್ನು ಇತರರಲ್ಲಿ ಪ್ರಚಾರಪಡಿಸುವ ಹಕ್ಕು ಪ್ರತಿಯೊ ಮನುಷ್ಯನಿಗೂ ಇದೆ. ಇಸ್ಲಾಮ್ ಮನುಷ್ಯನ ಈ ಸ್ವಾತಂತ್ರ್ಯವನ್ನು ಮಾನ್ಯ ಮಾಡುತ್ತ ಈ ಸ್ವಾತಂತ್ರ್ಯವು ಕಸಿಯಲ್ಪಟ್ಟಾಗ ಅಥವಾ ಶಾಂತಿಯುತ ಧರ್ಮಪ್ರಚಾರ ಕಾರ್ಯಗ ಹಿಂಸಾ ಮಾರ್ಗದಿಂದ ತಡೆಯಲ್ಪಟ್ಟಾಗ, ಇಸ್ಲಾಮ್ ಹಾಗೆ ಹಿಂಸೆಗಿಳಿಯುವವರ ವಿರು ಯುದ್ಧ ಮಾಡುವ ಅನುಮತಿ ನೀಡುತ್ತದೆ.

"ಓ ಸತ್ಯವಿಶ್ವಾಸಿಗಳೇ, 'ಫಿತ್ನ'(ಕ್ಷೋಭೆ) ಅಳಿದು ಹೋಗುವವರೆಗೂ 'ಧರ್ಮ'(ದೀನ ಸರ್ವಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವವರೆಗೂ ಈ ಸತ್ಯನಿಷೇಧಿಗಳೊ ಹೋರಾಡಿರಿ." (ಪವಿತ್ರ ಕುರ್‌ಆನ್: 8: 39)

ಆದರೆ ಶಾಂತಿಯ ಎಲ್ಲ ಮಾರ್ಗಗಳು ಮುಚ್ಚಲ್ಪಟ್ಟಾಗ ಮಾತ್ರ ಯುದ್ಧಕ್ಕೆ ಅನುಮ ನೀಡಲಾಗಿದೆ. ಅನಿವಾರ್ಯ ಸ್ಥಿತಿಯಲ್ಲಿ ಯುದ್ಧಕ್ಕೆ ಅನುಮತಿ ಸಿಕ್ಕಿದ ಬಳಿಕವೂ ಅದ ಕೆಲವು ನೀತಿ-ನಿಯಮಗಳನ್ನು ಇಸ್ಲಾಮ್ ಧರ್ಮವು ನಿರ್ಧರಿಸಿದೆ. ಅವುಗಳ ಪಾಲನೆ ಕಡ್ಡಾಯವಾಗಿದೆ. ಮುನ್ನೆಚ್ಚರಿಕೆ ಅಥವಾ ಪೂರ್ವ ಘೋಷಣೆಯಿಲ್ಲದೆ ಯುದ್ಧ ಮಾಡುವಂತಿ ರಕ್ತಪಾತವನ್ನು ತಪ್ಪಿಸಿ ಶಾಂತಿ ಸ್ಥಾಪನೆಯ ಅಂತಿಮ ಅವಕಾಶವನ್ನು ನೀಡದೆ ಯುದ್ಧ ಧುಮುಕುವಂತಿಲ್ಲ.

"ಓ ಪೈಗಂಬರರೇ, ಶತ್ರುವು ಶಾಂತಿ ಸಂಧಾನಗಳ ಕಡೆಗೆ ವಾಲಿದರೆ ನೀವೂ ಅದಕ್ಕೆ ಸಾಗಿರಿ ಮತ್ತು ಅಲ್ಲಾಹನ ಮೇಲೆ ಭರವಸೆಯನ್ನಿರಿಸಿರಿ." (ಪವಿತ್ರ ಕುರ್‌ಆನ್: 8: 61)

ುದ್ಧದ ನಿಯಮಗಳು

ಸತ್ಯಧರ್ಮದ ಪ್ರಚಾರ ಕಾರ್ಯದಲ್ಲಿ ಅಡ್ಡಿಯುಂಟು ಮಾಡದವರ ವಿರುದ್ಧ ಯುದ್ಧ ಕಬಾರದು. ಶಾಂತಿ-ಸಂಧಾನಗಳಿಗೆ ಸಿದ್ಧವಿರುವವರೊಡನೆ ಯುದ್ಧ ಮಾಡಬಾರದು. ದ್ಧದ ವೇಳೆಯೂ ಯಾವುದೇ ರೀತಿಯ ಅಕ್ರಮ ನೀತಿಯನ್ನನುಸರಿಸಬಾರದು. ಸ್ತ್ರೀಯರ ೆ, ಮಕ್ಕಳ ಮೇಲೆ, ವೃದ್ಧರ ಮೇಲೆ ಹಾಗೂ ಗಾಯಾಳುಗಳ ಮೇಲೆ ಕೈ ಮಾಡಬಾರದು. ೀಡಾದ ಶತ್ರು ಸೈನಿಕರ ಅಂಗಾಂಗಗಳನ್ನು ಕತ್ತರಿಸಬಾರದು. ಹೊಲ-ಬೆಳೆಗಳನ್ನೂ ುವಾರುಗಳನ್ನೂ ನಾಶಗೊಳಿಸಬಾರದು. ಪ್ರವಾದಿ ವಚನಗಳಲ್ಲಿ ಇಂತಹ ಎಲ್ಲ ್ರಮ ಗಳನ್ನು ನಿಷೇಧಿಸಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಎಷ್ಟು ಬೇಕೋ ಃ ಬಲ ಪ್ರಯೋಗ ಮಾಡುವುದಕ್ಕೆ ಇಸ್ಲಾಮ್ ಅನುಮತಿ ನೀಡಿದೆ.

ುದ್ಧವಲ್ಲ ಹೋರಾಟ

ಇವಿಷ್ಟು ಸಶಸ್ತ್ರ ಹೋರಾಟಕ್ಕೆ ಪ್ರತಿಯಾಗಿ ಅಥವಾ ಇಸ್ಲಾಮಿೂ ಪ್ರಚಾರ ಕಾರ್ಯವನ್ನು ಯುವವರ ವಿರುದ್ಧ ಇಸ್ಲಾಮ್ ಅನುಮತಿಸಿರುವ ಧರ್ಮ ಯುದ್ಧ. ಇದನ್ನು ಇಸ್ಲಾಮಿನ ಭಾಷಿಕದಲ್ಲಿ 'ಕಿತಾಲ್' ಎನ್ನುತ್ತಾರೆ. ಇದು ಜಿಹಾದ್‌ನ ಅಂತಿಮ ರೂಪ. ಆದರೆ ುದ್' ಎನ್ನುವುದು ಯುದ್ಧಕ್ಕಲ್ಲ, ಹೋರಾಟಕ್ಕೆ. ಸತ್ಯಧರ್ಮದ ರಕ್ಷಣೆ, ಪ್ರಚಾರ ಮತ್ತು ್ಥಾಪನೆಗಾಗಿ ಮಾಡುವ ಎಲ್ಲ ಶ್ರಮಗಳೂ ಈ 'ಜಿಹಾದ್'ನಲ್ಲಿ ಸೇರುತ್ತವೆ. ಬರಹ, ಣ, ಮತ್ತಿತರ ಎಲ್ಲ ಸತ್ಯಪ್ರಚಾರ ಚಟುವಟಿಕೆಗಳೂ 'ಜಿಹಾದ್'ನ ಅರ್ಥವ್ಯಾಪ್ತಿಯಲ್ಲೇ ತ್ತವೆ.

ತಂತಮ್ಮ ಆದರ್ಶ ಸಿದ್ಧಾಂತಗಳ ಪ್ರಚಾರ ಮತ್ತು ತಾವು ನೆಚ್ಚಿದ ಜೀವನ ಕ್ರಮದ ್ಥಾಪನೆಗಾಗಿ ಎಲ್ಲ ಪಕ್ಷಗಳು, ಧರ್ಮಗಳು, ಸಿದ್ಧಾಂತಗಳು ಮತ್ತು ವಿಚಾರಧಾರೆಗಳೂ ಹೋರಾಟ ನಡೆಸುತ್ತವೆ. ಅದೇ ರೀತಿ ಇಸ್ಲಾಮ್ ಧರ್ಮದ ಪ್ರಚಾರ ಮತ್ತು ್ಥಾಪನೆಗಾಗಿ ನಡೆಸುವ ಎಲ್ಲ ರೀತಿಯ ವೈಚಾರಿಕ, ಬೌದ್ಧಿಕ, ಆರ್ಥಿಕ, ದೈಹಿಕ ಹೋರಾಟದ ೇ 'ಜಿಹಾದ್'. ಇದನ್ನು 'ಧರ್ಮಯುದ್ಧ' ಎನ್ನುವುದಕ್ಕಿಂದ 'ಧರ್ಮ ಸಂಸ್ಥಾಪನೆಗಾಗಿ ಡುವ ಹೋರಾಟ' ಎನ್ನುವುದು ನ್ಯಾಯಸಮ್ಮತವೂ ತರ್ಕಬದ್ಧವೂ ಆಗಿದೆ.

❖ ❖ ❖ ❖

ಅಧ್ಯಾಯ: ಹತ್ತು

ಪವಿತ್ರ ಕುರ್‌ಆ
ಮುಹಮ್ಮದ್ ಪೈಗಂಬರರ ಕೃತಿಯೆ

"ಇಸ್ಲಾಮ್ ಧರ್ಮದ ಬಗ್ಗೆ ಹಾಗೂ ಪವಿತ್ರ ಕುರ್‌ಆನಿನ ಬಗ್ಗೆ ಸರಿಯಾದ ತಿಳು ಇಲ್ಲದ ಕೆಲವರು ಪವಿತ್ರ ಕುರ್‌ಆನನ್ನು ಪ್ರವಾದಿ ಮುಹಮ್ಮದ್‌ರವರ(ಸ) ಕೃತಿಯೆ ಹೇಳುವುದಿದೆ. ಆದರೆ ಇದು ತಪ್ಪು. ಪವಿತ್ರ ಕುರ್‌ಆನ್ ಮನುಷ್ಯ ಕೃತಿಯಲ್ಲವೆಂ ಅದು ಸರ್ವಲೋಕ ಪರಿಪಾಲಕನಾದ ಅಲ್ಲಾಹನ ವಚನವೆಂದೂ ಸ್ವಯಂ ಆ ಗ್ರಂ ಪ್ರತಿಪಾದಿಸುತ್ತದೆ. ಅಲ್ಲಾಹನು ತನ್ನ ವಚನವನ್ನು ದೇವದೂತರಾದ ಜಿಬ್ರೀಲ್‌ರ ಮೂಲಕ ತನ್ನ ದಾಸರಾದ ಮುಹಮ್ಮದ್‌ರವರ(ಸ) ಮೇಲೆ ಅವತೀರ್ಣಗೊಳಿಸಿದನು. ವಾಸ್ತವಿಕತೆಯನ್ನು ಪವಿತ್ರ ಕುರ್‌ಆನ್ ಅನೇಕ ಕಡೆ ಸಾರಿ ಹೇಳಿದೆ: "ಇದು ಸರ್ವಲೋ ಪಾಲಕ ಪ್ರಭುವಿನಿಂದ ಅವತೀರ್ಣಗೊಂಡಿದೆ. ನೀವು (ದೇವವತಿಯಿಂದ ದೇವ ಸೃಷ್ಟಿಗ ಎಚ್ಚರಿಕೆ ನೀಡುವವರಲ್ಲಿ ಸೇರಲಿಕ್ಕಾಗಿ, ಪ್ರಾಮಾಣಿಕ ಆತ್ಮವು ಇದರ ಜೊತೆ ನಿ ಹೃದಯಕ್ಕೆ ಇಳಿದಿದೆ. ಇದು ಸುಸ್ಪಷ್ಟ ಅರಬೀ ಭಾಷೆಯಲ್ಲಿದೆ."

(ಪವಿತ್ರ ಕುರ್‌ಆನ್: 26: 192-1

ಪವಿತ್ರ ಕುರ್‌ಆನಿಗಿಂತ ಮುಂಚೆ ಅವತೀರ್ಣಗೊಂಡ ದೇವಗ್ರಂಥಗಳಾದ ತೌರ ಮತ್ತು ಇಂಜೀಲ್‌ಗಳಲ್ಲಿ ಇದರ ಬಗ್ಗೆ ಭವಿಷ್ಯವಾಣಿ ಮತ್ತು ಸುವಾರ್ತೆಗಳಿದ್ದುವು. ಒ ಅಂತಿಮ ದೇವಗ್ರಂಥ ಬರಲಿಕ್ಕಿದೆ ಮತ್ತು ಓರ್ವ ಅಂತಿಮ ಪ್ರವಾದಿ ಬರಲಿಕ್ಕಿರು ಎಂದು ಅವು ಭವಿಷ್ಯ ನುಡಿದಿದ್ದುವು. ಪವಿತ್ರ ಕುರ್‌ಆನ್ ಆ ಭವಿಷ್ಯ ನುಡಿಗ ಅನುಗುಣವಾಗಿಯೇ ಇದೆ ಎಂಬುದನ್ನು ಆ ಗ್ರಂಥದಲ್ಲೇ ಸ್ಪಷ್ಟಪಡಿಸಲಾಗಿದೆ-

"ಕುರ್‌ಆನಿನಲ್ಲಿ ವಿವರಿಸಲ್ಪಡುತ್ತಿರುವುದೆಲ್ಲ ಕೃತಕ ವಿಷಯಗಳಲ್ಲ. ಪರಂತು ಇದಕ್ಕಿ ಮುಂಚೆ ಬಂದಿರುವ ಗ್ರಂಥಗಳ ದೃಢೀಕರಣವೂ ಪ್ರತಿಯೊಂದು ವಿಷಯದ ವಿವರಣೆ ಸತ್ಯವಿಶ್ವಾಸವನ್ನು ಸ್ವೀಕರಿಸಿಕೊಳ್ಳುವವರಿಗೆ ಸನ್ಮಾರ್ಗದರ್ಶನವೂ ಅನುಗ್ರಹವೂ ಆಗಿರುತ್ತ

(ಪವಿತ್ರ ಕುರ್‌ಆನ್: 12: 1

ಬಲ್‌ನ ಪುರಾವೆಗಳು

ತಮ್ಮ ಅನುಯಾಯಿಗಳಿಂದ ಹಸ್ತಕ್ಷೇಪಕ್ಕೆ ಒಳಗಾಗಿ ತಿದ್ದುಪಡಿಗೊಂಡು ವಿಕೃತವಾಗಿರುವ ತ್ ಮತ್ತು ಇಂಜೀಲ್‌ಗಳ ಇಂದಿನ ಅವಶೇಷವಾದ ಬೈಬಲ್‌ನಲ್ಲಿ ಕೂಡಾ ಅನೇಕ ಳಲ್ಲಿ ಈ ಸುವಾರ್ತೆಯ ಉಲ್ಲೇಖವಿರುವುದು ಕಂಡು ಬರುತ್ತದೆ.

(ನೋಡಿರಿ: ಮತ್ತಾಯನು ಬರೆದ ಸುವಾರ್ತೆ: 21:42-45,
ಯೋಹಾನನು ಬರೆದ ಸುವಾರ್ತೆ 16:12-13, 14:15-17, 29-30, 16:7-8)

ಯೇಸು ಅವರಿಗೆ ಹೇಳಿದನು: ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಖ್ಯವಾದ ಮೂಲೆಗಲ್ಲಾಯಿತು; ಇದು ಕರ್ತನಿಂದ ಆಯಿತು; ನಿಮಗೆ ಆಶ್ಚರ್ಯವಾಗಿ ರುತ್ತದೆ ಎಂಬ ಮಾತನ್ನು ನೀವು ಶಾಸ್ತ್ರದಲ್ಲಿ ಎಂದಾದರೂ ಓದಲಿಲ್ಲವೋ? ರಿಂದ ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಕ್ಕೆ ಕೊಡಲಾಗುವುದು. ಈ ಕಲ್ಲಿನ ಮೇಲೆ ಬೀಳುವವನು ತುಂಡು ತುಂಡಾಗುವನು; ಯಾರ ಮೇಲೆ ಬೀಳುತ್ತದೋ ಅವನನ್ನು ಪುಡಿಪುಡಿ ಮಾಡುವುದು.

(ಮತ್ತಾಯನು ಬರೆದ ಸುವಾರ್ತೆ: 21:42-45)

ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ರಲಾರಿರಿ. ಸತ್ಯದ ಆತ್ಮ ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.

(ಯೋಹಾನನು ಬರೆದ ಸುವಾರ್ತೆ: 16:12-13)

ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ. ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು.

(ಯೋಹಾನನು ಬರೆದ ಸುವಾರ್ತೆ: 14: 15-17)

ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ಪಿಗೆ ತರುವನು. (ಯೋಹಾನನು ಬರೆದ ಸುವಾರ್ತೆ: 14: 26)

ಅದೆಲ್ಲಾ ನಡೆಯುವಾಗ ನೀನು ನಮ್ಮನ್ನು ನಂಬುವಂತೆ ಅದು ನಡೆಯುವುದಕ್ಕಿಂತ ಂಚೆಯೇ ಈಗ ನಿಮಗೆ ಹೇಳಿದ್ದೇನೆ. ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳ ಡುವುದಿಲ್ಲ. ಏಕೆಂದರೆ ಇಹಲೋಕಾಧಿಪತಿಯು ಬರುತ್ತಾನೆ. ಅವನಿಗೆ ಸಂಬಂಧಪಟ್ಟದ್ದು ಾವುದೊಂದೂ ನನ್ನಲ್ಲಿಲ್ಲ. (ಯೋಹಾನನು ಬರೆದ ಸುವಾರ್ತೆ: 14: 29-30)

ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವ ನಿಮಗೆ ಹಿತಕರವಾಗಿದೆ, ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬ ಬರುವುದಿಲ್ಲ. ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ. ಆ ಬಂದು ಪಾಪ, ನೀತಿ, ನ್ಯಾಯ ತೀರ್ಪಿಗೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹ ಹುಟ್ಟಿಸುವವನು. (ಯೋಹಾನನು ಬರೆದ ಸುವಾರ್ತೆ: 16: 7-8)

ಈ ಉದ್ಧರಣೆಗಳಲ್ಲಿ ಬಂದಿರುವ ಭವಿಷ್ಯವಾಣಿಯು ಪ್ರವಾದಿ ಮುಹಮ್ಮದ್ ಮತ್ತು ಪವಿತ್ರ ಕುರ್‌ಆನಿನ ಬಗೆಗಾಗಿದೆ ಎಂಬುದು ಸ್ಪಷ್ಟ.

'ಮುಖ್ಯವಾದ ಮೂಲೆಗಲ್ಲಾಯಿತು' ಅಂದರೆ ಕೊನೆಗೆ ನಾಯಕತ್ವ ಪದವಿ ಪಡೆಯಿ ಎಂದರ್ಥ.

"ಆದರೆ ಸದ್ಯಕ್ಕೆ ನೀವು ಅದನ್ನು ಹೊರಲಾರಿರಿ" ಎಂದರೆ ಇನ್ನಷ್ಟು ದೇವ ವಿಧಿ ಭಾರ ಹೊರುವ ಶಕ್ತಿ ನಿಮ್ಮಲ್ಲಿಲ್ಲ. ಆದ್ದರಿಂದ ಅಲ್ಲಾಹನು ನನ್ನ ಮೂಲಕ ತನ್ನ ಧರ್ಮವ ಪೂರ್ಣಗೊಳಿಸದೆ ಅದಕ್ಕಾಗಿ ಇನ್ನೊಬ್ಬ ಪ್ರವಾದಿಯನ್ನು ನಿಯೋಗಿಸುವನೆಂದರ್ಥ.

'ಸಹಾಯಕ' ಎಂಬ ಪದದ ಹಿಬ್ರೂ ಮೂಲವನ್ನು ಅರಬಿ ಬೈಬಲ್‌ನಲ್ಲಿ 'ಫಾರ್ಕಲೀ ಎಂದು ಅನುವಾದಿಸಲಾಗಿದೆ. ಇದು ಮುಹಮ್ಮದ್ ಮತ್ತು ಅಹ್ಮದ್ ಎಂಬ ಪದಗ ಸಮಾನವಾದ ಅರ್ಥವುಳ್ಳ ಪದವಾಗಿದೆ.

'ಸದಾ ಕಾಲ ನಿಮ್ಮ ಸಂಗಡ' ಇರುವುದಕ್ಕೆ ಎಂದರೆ ಅವನು ತರುವ ಧರ್ಮಗ್ರಂಥ ತೌರಾತ್ ಮತ್ತು ಇಂಜೀಲ್‌ಗಳಂತೆ ಒಂದು ಸೀಮಿತ ಕಾಲಾವಧಿಗೆ ಆಗಿರದೆ ಸಾರ್ವಕಾ ವಾಗಿರುವುದೆಂದರ್ಥ.

'ಇಹಲೋಕಾಧಿಪತಿ' ಎಂದರೆ ಸಂಪೂರ್ಣ ವಿಶ್ವ ಮತ್ತು ಸಮಸ್ತ ಮಾನವಕು ಅಲ್ಲಾಹನ ಪ್ರವಾದಿ. ಯಾವುದೇ ಪ್ರತ್ಯೇಕ ಜನಾಂಗ ಅಥವಾ ರಾಷ್ಟ್ರಕ್ಕೆ ಅಲ್ಲ.

"ಅವನಿಗೆ ಸಂಬಂಧಪಟ್ಟ ಯಾವೊಂದೂ ನನ್ನಲ್ಲಿಲ್ಲ" ಎಂದರೆ ಅವನು ನನಗಿ ಬಹಳ ಉನ್ನತ ಸ್ಥಾನಮಾನಗಳ ಪ್ರವಾದಿಯಾಗಿರುವನು ಎಂದರ್ಥ.

ಈ ವಚನಗಳ ಇಂಗಿತ ತಿಳಿಯಲು ಈ ಸಂಕ್ಷಿಪ್ತ ವಿವರಣೆ ಸಾಕು.

ಪವಿತ್ರ ಕುರ್‌ಆನ್ ಮಾನವ ಕೃತಿಯಾಗಿದ್ದರೆ 23 ವರ್ಷಗಳ ದೀರ್ಘ ಅವಧಿಯ ಭಿನ್ನ ಭಿನ್ನ ಪರಿಸ್ಥಿತಿಗಳಲ್ಲಿ ಪೂರ್ಣಗೊಂಡ 114 ಅಧ್ಯಾಯಗಳ ಮತ್ತು 6236 ಸೂಕ್ತ ಈ ಬೃಹತ್ ಗ್ರಂಥದಲ್ಲಿ ಒಂದಲ್ಲ ಒಂದು ಕಡೆ ವಿರೋಧಾಭಾಸವಿರುವುದು ಅನಿವಾಯ ವಾಗಿತ್ತು. ಅಂತೆಯೇ ಇದರ ವಿಷಯಗಳು, ತತ್ವಗಳು, ವಿಚಾರಗಳು ಮತ್ತು ಶಿಕ್ಷಣಗಳ ಸ್ವಾಭಾವಿಕವಾಗಿಯೂ ಭಿನ್ನತೆಗಳಿರುತ್ತಿದ್ದುವು. ಆದರೆ ಪವಿತ್ರ ಕುರ್‌ಆನಿನಲ್ಲಿ ಇಂತ ವಿರೋಧಾ ಭಾಸದ ಛಾಯೆಯನ್ನು ನಾವು ಕಾಣುವುದಿಲ್ಲ. ಕುರ್‌ಆನ್ ಸ್ವತಃ ಈ ರಿ

ಸುತ್ತದೆ: "ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ರಲ್ಲಿ ಅನೇಕ ವಿರೋಧಾಭಾಸಗಳು ಕಂಡು ಬರುತ್ತಿದ್ದುವು." (ಪವಿತ್ರ ಕುರ್‌ಆನ್: 4: 82)

ರ್‌ಆನಿನ ಭವಿಷ್ಯವಾಣಿಗಳು

ಕುರ್‌ಆನಿನಲ್ಲಿ ಅನೇಕ ಭವಿಷ್ಯವಾಣಿಗಳಿದ್ದು ಅವೆಲ್ಲವೂ ಪೂರ್ಣಗೊಂಡಿವೆ. ಮಾನ್ಯವಾಗಿ ಈ ಭವಿಷ್ಯವಾಣಿಗಳು ಪೂರ್ಣಗೊಳ್ಳುವ ಯಾವುದೇ ಪ್ರತ್ಯಕ್ಷ ಸೂಚನೆ ್ಯವಿಲ್ಲದಿದ್ದ ಪರಿಸ್ಥಿತಿಗಳಲ್ಲಿ ಅವು ನುಡಿಯಲ್ಪಟ್ಟಿವೆ. ಆದರೆ ಅದರ ಒಂದೇ ಒಂದು ಷ್ಯವಾಣಿಯೂ ಸುಳ್ಳಾಗಿಲ್ಲ. ಎಲ್ಲವೂ ಪೂರ್ಣಗೊಂಡದ್ದನ್ನು ಜಗತ್ತು ಕಂಡಿದೆ.

ಹಿಜರಿಶಕೆ 6ರಲ್ಲಿ ನಡೆದ ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಕುರ್‌ಆನ್ ಸ್ಲಿಮರಿಗೆ ಈ ಸುವಾರ್ತೆಯನ್ನು ನೀಡಿತ್ತು:

"ಅಲ್ಲಾಹನಿಚ್ಛಿಸಿದರೆ, ನೀವು ಖಂಡಿತವಾಗಿಯೂ ಸಂಪೂರ್ಣ ಶಾಂತಿಯೊಂದಿಗೆ ಸ್ಜಿದುಲ್ ಹರಾಮನ್ನು ಪ್ರವೇಶಿಸುವಿರಿ. ನಿಮ್ಮ ತಲೆ ಬೋಳಿಸಿಕೊಳ್ಳುವಿರಿ ಮತ್ತು ದಲು ಕತ್ತರಿಸಿಕೊಳ್ಳುವಿರಿ ಮತ್ತು ನಿಮಗೆ ಯಾವ ಭಯವೂ ಇರಲಾರದು."

(ಪವಿತ್ರ ಕುರ್‌ಆನ್: 48: 27)

ಇಷ್ಟು ದೊಡ್ಡ ಭರವಸೆ ನೀಡುವ ಈ ಸೂಕ್ತ ಅವತೀರ್ಣಗೊಂಡಾಗ ಇದ್ದ ಪರಿಸ್ಥಿತಿ ಕಳ ಗಮನಾರ್ಹ. ಹಿ.ಶ. 6ರಲ್ಲಿ ಪ್ರವಾದಿ ಮುಹಮ್ಮದ್(ಸ) ತಮ್ಮ ಅನುಯಾಯಿ ೊಂದಿಗೆ ಕಅಬಾ ಸಂದರ್ಶಿಸಲು ಮದೀನಾದಿಂದ ಮಕ್ಕಾದೆಡೆಗೆ ಹೊರಟಾಗ ಮಕ್ಕಾದ ್ಯವಿರೋಧಿಗಳು ಅವರನ್ನು ನಡುದಾರಿಯಲ್ಲೇ ತಡೆದರು ಮತ್ತು ಮೇಲ್ನೋಟಕ್ಕೆ ಅತ್ಯಂತ ವಮಾನಕಾರಿಯೆಂದು ತೋರುವಂತಹ ಒಂದು ಒಪ್ಪಂದ ಮಾಡಿಕೊಳ್ಳುವಂತೆ ಪ್ರವಾದಿ ರ್ಯರನ್ನು(ಸ) ನಿರ್ಬಂಧಿಸಿದರು. ಪ್ರವಾದಿವರ್ಯರು(ಸ) ಮತ್ತವರ ಅನುಯಾಯಿಗಳು ರಾ ದುಃಖತಪ್ತರಾಗಿ ಅಲ್ಲಿಂದಲೇ ಮರಳಿ ಬರಬೇಕಾಯಿತು. ಮುಂದೆಂದಾದರೂ ುಸ್ಲಿಮರಿಗೆ ಮಕ್ಕಾ ಪಟ್ಟಣವನ್ನು ವಿಜಯಿಗಳಾಗಿ ಪ್ರವೇಶಿಸಲು ಸಾಧ್ಯವಾದೀತೆಂದು ುಬಲು ಅಲ್ಲಿ ಅವಕಾಶವೇ ಇರಲಿಲ್ಲ. ಪರಿಸ್ಥಿತಿಯು ಅಷ್ಟು ಪ್ರತಿಕೂಲವಾಗಿತ್ತು. ಆದರೂ ುಗೆಯೇ ಆಗಲಿದೆ ಎಂದು ಪವಿತ್ರ ಕುರ್‌ಆನ್ ದೃಢ ಸ್ವರದಲ್ಲಿ ಸಾರಿತು. ಕೇವಲ ಎರಡೇ ರ್ಷಗಳಲ್ಲಿ ಈ ಸುವಾರ್ತೆ ಪೂರ್ಣಗೊಂಡಿತು. ಹಿ.ಶ. 8ರಲ್ಲಿ ಪ್ರವಾದಿ ಮುಹಮ್ಮದ್(ಸ) ತ್ತು ಅವರ ಸಂಗಾತಿಗಳು ವಿಜಯಿಗಳಾಗಿ ಮಕ್ಕಾ ಪಟ್ಟಣವನ್ನು ಪ್ರವೇಶಿಸಿದರು.

ಪವಿತ್ರ ಕುರ್‌ಆನಿನ ಇನ್ನೊಂದು ಭವಿಷ್ಯ ನುಡಿ ಈ ರೀತಿ ಇದೆ,

"ನಿಮ್ಮ ಪೈಕಿ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ, ಅಲ್ಲಾಹನು ಅವರಿಗಿಂತ ುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಗಳಾಗಿ ಮಾಡಿದಂತೆಯೇ ಅವರನ್ನು ಮಾಡುವ ುದು ವಾಗ್ದಾನ ಮಾಡಿರುವನು. ತಾನು ಅವರಿಗಾಗಿ ಮೆಚ್ಚಿರುವ ಅವರ ಧರ್ಮವನ್ನು ಭದ್ರ ಬುನಾದಿಗಳಲ್ಲಿ ಸ್ಥಾಪಿಸುವನು ಮತ್ತು ಅವರ (ಪ್ರಚಲಿತ) ಭಯಾವಸ್ಥೆಯನ್ನು

ಶಾಂತಿಯಾಗಿ ಮಾರ್ಪಡಿಸಿ ಬಿಡುವನು." (ಪವಿತ್ರ ಕುರ್‌ಆನ್: 24: 55)

ಇದು ಮುಸ್ಲಿಮರು ತೀವ್ರ ಭಯ ಮತ್ತು ಆತಂಕದಲ್ಲಿ ಬಾಳುತ್ತಿದ್ದ ಸಂದರ್ಭ ಅವತೀರ್ಣಗೊಂಡ ಸೂಕ್ತವಾಗಿತ್ತು. ಧರ್ಮವು ದುರ್ಬಲವಾಗಿತ್ತು. ಅಧಿಕಾರ ಮ ಮೇಲ್ಮೆ ಇಸ್ಲಾಮಿನ ಶತ್ರುಗಳ ಕೈಯಲ್ಲಿತ್ತು. ಆದರೆ ಕೆಲವೇ ವರ್ಷಗಳಲ್ಲಿ ಈ ಪರಿ ಬದಲಾಗಿ ಅರಬ್ ದೇಶವು ಸಂಪೂರ್ಣವಾಗಿ ಮುಸ್ಲಿಮರ ಅಧೀನಕ್ಕೆ ಬಂದು ಬಿಟ್ಟಿತೆಂಬು ಇತಿಹಾಸ ಸಾಕ್ಷಿ ಇದೆ. ಪವಿತ್ರ ಕುರ್‌ಆನಿನ ರಕ್ಷಣೆಯ ಹೊಣೆಯನ್ನು ಅಲ್ಲಾಹನೇ ವ ಕೊಂಡಿರುವನು. ಪವಿತ್ರ ಕುರ್‌ಆನ್ ಆ ಬಗ್ಗೆ ಈ ರೀತಿ ಸಾರುತ್ತದೆ:

"ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮ ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ." (ಪವಿತ್ರ ಕುರ್‌ಆನ್: 15: 9)

ಈ ಘೋಷಣೆಯು ಒಂದು ವಾಸ್ತವಿಕ ಘಟನೆಯ ರೂಪದಲ್ಲಿ ನಮ್ಮ ಮುಂದಿ ಇದನ್ನು ಇಸ್ಲಾಮಿನ ಅನುಯಾಯಿಗಳು ಮಾತ್ರವಲ್ಲ ಅದರ ಪ್ರಾಮಾಣಿಕ ನಿಷೇಧಿ ಕೂಡಾ ಅಲ್ಲಗಳೆಯುವಂತಿಲ್ಲ. ಈ ಹಿಂದೆ ಬಂದಂತಹ ದೈವಿಕ ಗ್ರಂಥಗಳ ಒಂದಾದರೂ ತನ್ನ ಮೂಲ ರೂಪದಲ್ಲಿಲ್ಲ. ಅದು ಮೂಲ ರೂಪದಲ್ಲೇ ಇದೆ ಎಂ ಸ್ವತಃ ಆ ಗ್ರಂಥಗಳೂ ವಾದಿಸುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪವಿತ್ರ ಕುರ್‌ಆನ್ ತ ಮೂಲ ರೂಪದಲ್ಲಿ ಒಂದಕ್ಷರದ ವ್ಯತ್ಯಾಸವೂ ಇಲ್ಲದೆ ಉಳಿದುಕೊಂಡು ಬಂದಿದ

ಇವುಗಳಲ್ಲದೆ ಪವಿತ್ರ ಕುರ್‌ಆನಿನಲ್ಲಿ ಇನ್ನೂ ಅನೇಕ ಭವಿಷ್ಯ ನುಡಿಗಳಿ ಅವುಗಳೆಲ್ಲಾ ಅಕ್ಷರಶಃ ಪೂರ್ಣಗೊಂಡಿರುವುದಕ್ಕೆ ಮಾನವ ಇತಿಹಾಸವು ಸಾಕ್ಷ್ಯ ವಹಿಸುತ್ತ ಅವುಗಳ ಪೈಕಿ ಒಂದೂ ಸುಳ್ಳಾಗಲಿಲ್ಲ. ಈ ಭವಿಷ್ಯ ನುಡಿಗಳು ಊಹೆ ಮತ್ತು ಗುಮ ಖಂಡಿತ ಆಗಿರಲಿಲ್ಲ. ಅದು ಪರೋಕ್ಷದ ಸ್ಪಷ್ಟ ಮತ್ತು ನಿರ್ಣಾಯಕ ಜ್ಞಾನದ ಆಧಾರವ ಹೊಂದಿತ್ತೆಂಬುದು ಖಚಿತ. ಅಲ್ಲಾಹನ ಹೊರತು ಇನ್ನಾರಿಗೂ ಅದೃಶ್ಯದ ಸ್ಪಷ್ಟ ಮ ಖಚಿತ ಜ್ಞಾನ ಇಲ್ಲವೆಂಬುದು ವ್ಯಕ್ತ. ಹಾಗಿರುವಾಗ ಇದು ಮಾನವ ಕೃತಿಯಾಗಿರ ಸಾಧ್ಯವೇ ಇಲ್ಲ.

ಪವಿತ್ರ ಕುರ್‌ಆನ್ ಗತ ಪ್ರವಾದಿಗಳ ಇತಿಹಾಸವನ್ನು ಕಣ್ಣಾರೆ ಕಂಡಂತೆ ವಿವರಿಸುತ್ತ ನಿರಕ್ಷರಸ್ಥರಾದ ಪ್ರವಾದಿ ಮುಹಮ್ಮದ್(ಸ) ಅವರಿಗಾಗಲೀ ಅವರ ಜನಾಂಗಕ್ಕಾಗಲೀ ಇತಿಹಾಸ ಬೇರಾವುದೇ ಮೂಲದಿಂದ ತಿಳಿದಿರಲಿಲ್ಲ.

ವೈಜ್ಞಾನಿಕ ವಾಸ್ತವಿಕತೆಗಳು

ಪವಿತ್ರ ಕುರ್‌ಆನ್ ಮನುಷ್ಯ ಕೃತಿಯಾಗಿರದೆ ಸರ್ವಜ್ಞನಾದ ಅಲ್ಲಾಹನಿಂ ಅವತೀರ್ಣಗೊಂಡಿದೆ ಎಂಬುದಕ್ಕೆ ಇನ್ನೊಂದು ಪುರಾವೆ ಅದರಲ್ಲಿ ವಿವರಿಸಲಾಗಿರು ವೈಜ್ಞಾನಿಕ ವಾಸ್ತವಿಕತೆಗಳಾಗಿವೆ. ಪವಿತ್ರ ಕುರ್‌ಆನ್ ಅವತೀರ್ಣಗೊಂಡ ಕಾಲದ ಜನ

ೀದೇ ಇಲ್ಲದ ಅನೇಕ ವೈಜ್ಞಾನಿಕ ವಾಸ್ತವಿಕತೆಗಳನ್ನು ಅದು ವಿವರಿಸಿದೆ. ಉದಾ:

"ಆಕಾಶಗಳೂ ಭೂಮಿಯೂ ಕೂಡಿ ಕೊಂಡಿದ್ದು ಅನಂತರ ನಾವು ಅವುಗಳನ್ನು ೀರ್ಪಡಿಸಿದ್ದನ್ನೂ ಪ್ರತಿಯೊಂದು ಜೀವಿಯನ್ನೂ ನೀರಿನಿಂದ ಸೃಷ್ಟಿಸಿದ್ದನ್ನೂ ಕಾಣಲಿಲ್ಲವೇ?" (ಪವಿತ್ರ ಕುರ್‌ಆನ್: 21: 30)

ವಿಶ್ವವು ತನ್ನ ಪ್ರಸಕ್ತ ರೂಪವನ್ನು ಹೊಂದುವ ಮೊದಲು ಎಲ್ಲವೂ ಒಂದೇ ಒಂದು ಸ್ತುವಿನ ರೂಪದಲ್ಲಿತ್ತೆಂಬುದು ಪವಿತ್ರ ಕುರ್‌ಆನ್ ಅವತೀರ್ಣಗೊಂಡ ಕೆಲವು ಶತಮಾನಗಳ ಳಿಕ ವಿಜ್ಞಾನಿಗಳು ಕಂಡುಕೊಂಡ ವಾಸ್ತವಿಕತೆ ಎಂಬುದು ಇಲ್ಲಿ ಗಮನಾರ್ಹ.

ಆ ಮೂಲ ವಸ್ತುವಿನ ಕುರಿತು ಪವಿತ್ರ ಕುರ್‌ಆನ್ 'ಅದೊಂದು ಹೊಗೆಯಂತಿತ್ತು' 41: 11) ಎಂದು ಹೇಳಿದೆ.

ಎಲ್ಲ ಜೀವಿಗಳಿಗೂ ಮೂಲ ಜಲವಾಗಿದೆ ಎಂಬುದು ಮುಂದಿನ ಶತಮಾನಗಳಲ್ಲಿ ಜ್ಞಾನಿಗಳು ಕಂಡುಕೊಂಡ ವಾಸ್ತವಿಕತೆ. ಅದನ್ನೂ, ಪವಿತ್ರ ಕುರ್‌ಆನ್ ಪ್ರಸ್ತಾಪಿಸಿದೆ:

"ಪ್ರತಿಯೊಂದು ಜೀವಿಯನ್ನೂ ನೀರಿನಿಂದ ಸೃಷ್ಟಿಸಿದ್ದನ್ನೂ ಕಾಣಲಿಲ್ಲವೇ?" (21: 30)

"ನಾವು ಪ್ರತಿಯೊಂದು ವಸ್ತುವಿನ ಜೋಡಿಗಳನ್ನು ಮಾಡಿರುತ್ತೇವೆ" (51: 49) ಎಂಬುದನ್ನೂ ಪವಿತ್ರ ಕುರ್‌ಆನ್ ಪ್ರತಿಪಾದಿಸುತ್ತದೆ.

ಸೂರ್ಯ-ಚಂದ್ರರ ಕುರಿತು ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ:

"ಸೂರ್ಯನು ತನ್ನ ಸ್ಥಾನದ ಕಡೆಗೆ ಚಲಿಸುತ್ತಿದ್ದಾನೆ. ಪ್ರಬಲನೂ ಸರ್ವಜ್ಞನೂ ಆದವನ ನಿರ್ಣಯವಿದು ಮತ್ತು ಚಂದ್ರ - ಅದಕ್ಕೆ ನಾವು ಘಟ್ಟಗಳನ್ನು ನಿಶ್ಚಯಿಸಿಕೊಟ್ಟಿದ್ದು, ಅವುಗಳನ್ನು ಹಾದು ಹೋಗುತ್ತಾ ಕೊನೆಗೆ ಅದು ಖರ್ಜೂರದ ಒಣಗೆಲ್ಲಿನಂತಾಗಿ ಬಿಡುತ್ತದೆ. ಚಂದ್ರನನ್ನು ಹಿಡಿಯಲು ಸೂರ್ಯನಿಂದಾಗದು ಮತ್ತು ರಾತ್ರಿಯು ಹಗಲನ್ನು ಮೀರಿ ಹೋಗಲಾರದು. ಎಲ್ಲವೂ ಒಂದೊಂದು ಕಕ್ಷೆಯಲ್ಲಿ ತೇಲುತ್ತಿವೆ." (36: 38-40)

ಇವೆಲ್ಲವೂ ಇಂದು ವೈಜ್ಞಾನಿಕ ವಾಸ್ತವಿಕತೆಗಳಾಗಿವೆ. ಆದರೆ ಪವಿತ್ರ ಕುರ್‌ಆನ್ ಅವತೀರ್ಣಗೊಂಡ ಕಾಲದ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ಈ ವಾಸ್ತವಿಕತೆಗಳ ಗಂಧ ಗಾಳಿಯೂ ಸೋಂಕಿರಲಿಲ್ಲ. ಆ ಕಾಲದಲ್ಲಿ ಮಾತ್ರವಲ್ಲ ಮುಂದಿನ ಅನೇಕ ಶತಮಾನಗಳ ಕಾಲ ವಿಜ್ಞಾನ ಮತ್ತು ಸಂಶೋಧನೆಗೆ ನಿಲುಕಿರದ ವಿಶ್ವದ ಈ ಮಹಾನ್ ವಾಸ್ತವಿಕತೆಗಳು ಓರ್ವ ನಿರಕ್ಷರಿಯ ಬಾಯಿಯಿಂದ ಬರುವುದು ಹೇಗೆ ಸಾಧ್ಯವಾಯಿತು? ಅದು ಮಾನವ ಕೃತಿಯಾಗಿರದೆ ವಿಶ್ವದ ಸೃಷ್ಟಿಕರ್ತನ ಹಾಗೂ ಅದರ ಎಲ್ಲ ರಹಸ್ಯಗಳನ್ನು ಅರಿತ ಸರ್ವಜ್ಞನಾದ ಅಲ್ಲಾಹನಿಂದ ಅವತೀರ್ಣಗೊಂಡ ಗ್ರಂಥವಾಗಿರುವುದರಿಂದ ಮಾತ್ರ ಇದು ಸಾಧ್ಯವಾಯಿತು.

ಪವಿತ್ರ ಕುರ್‌ಆನಿನಲ್ಲಿ ಇಂದಿನ ತನಕ ಸ್ಥಿರಗೊಂಡ ಯಾವುದೇ ವೈಜ್ಞಾನಿ ವಾಸ್ತವಿಕತೆಗೆ ವಿರುದ್ಧವಾದ ಒಂದೇ ಒಂದು ವಿಷಯವೂ ಪ್ರಸ್ತಾಪಿಸಲ್ಪಟ್ಟಿಲ್ಲ. ಮಾತ್ರವ ಅದು ಪ್ರತಿಪಾದಿಸುವ ಯಾವ ತತ್ವವನ್ನೂ ಈ ತನಕ ವೈಜ್ಞಾನಿಕವಾಗಿ ನಿರಾಕರಿಸ ಸಾಧ್ಯವಾಗಿಲ್ಲ ಎಂಬ ವಾಸ್ತವಿಕತೆಯೂ ಅದರ ದಿವ್ಯ ಮೂಲಕ್ಕೆ ಸಾಕೆನಿಸುವ ಪುರಾವೆಯಾಗಿ

ಇವುಗಳಲ್ಲದೆ ಪವಿತ್ರ ಕುರ್‌ಆನಿನ ಅಸದೃಶ ವಿವರಣಾ ಶೈಲಿ, ಅದರ ಅಸಾಮಾ ವಾಕ್‌ಝರಿ ಮತ್ತು ಅತ್ಯದ್ಭುತ ಪ್ರಭಾವ ಶಕ್ತಿಯೂ ಅದರ ದೈವಿಕ ಮೂಲಕ್ಕೆ ಇರು ಸ್ಪಷ್ಟ ಪುರಾವೆಗಳಲ್ಲೊಂದಾಗಿದೆ. ಅದು ನೀಡುವ ಬೋಧನೆಗಳಲ್ಲಿ ಉನ್ನತ ಮಟ್ಟ ಸಮತೋಲನ ಮತ್ತು ಸಹಜ ವೈಚಾರಿಕತೆ ತುಂಬಿ ತುಳುಕುತ್ತಿದೆ. ಅದು ಮಾನವಕುಲ ಒಂದು ಸಮಗ್ರ ಮತ್ತು ಸಾರ್ವಕಾಲಿಕ ಮಾರ್ಗದರ್ಶನವಾಗಿದೆ.

ಕುರ್‌ಆನಿನ ಪಂಥಾಹ್ವಾನ

ಪವಿತ್ರ ಕುರ್‌ಆನನ್ನು ದೇವಗ್ರಂಥವಲ್ಲವೆನ್ನುವವರ ಮತ್ತು ಅದನ್ನು ಮಾನ ಕೃತಿಯೆಂದು ವಾದಿಸುವವರ ಮುಂದೆ ಅದು ಒಂದು ಪಂಥಾಹ್ವಾನವನ್ನು ಇಡುತ್ತದೆ:

"ನಾವು ನಮ್ಮ ದಾಸನಿಗೆ ಅವತೀರ್ಣಗೊಳಿಸಿದ ಈ ಗ್ರಂಥವು ನಮ್ಮದೋ ಅಲ್ಲವೋ ಎಂಬ ವಿಷಯದಲ್ಲಿ ನಿಮಗೆ ಸಂದೇಹವಿದ್ದರೆ ಇದಕ್ಕೆ ಸರಿಸಮಾನವಾದ ಒಂದು ಅಧ್ಯಾಯ ವನ್ನಾದರೂ ರಚಿಸಿ ತನ್ನಿರಿ. ಅಲ್ಲಾಹನ ಹೊರತು ನಿಮ್ಮೆಲ್ಲ ಸಾಕ್ಷಿಗಳನ್ನು ನಿಮ ಸಹಾಯಕ್ಕಾಗಿ ಕರೆದು ತನ್ನಿರಿ. ನೀವು ಸತ್ಯವಾದಿಗಳಾಗಿದ್ದರೆ ಈ ಕಾರ್ಯವನ್ನು ಮಾ ತೋರಿಸಿರಿ." (ಪವಿತ್ರ ಕುರ್‌ಆನ್: 2: 23)

ಈ ಪಂಥಾಹ್ವಾನವನ್ನು ಪ್ರಥಮತಃ ಅರಬರಿಗೆ ನೀಡಲಾಗಿತ್ತು. ಅವರಿಗೆ ತಮ್ಮ ವಾಕ ವೈಭವದ ಅಸದೃಶತೆಯ ಬಗ್ಗೆ ಹೆಮ್ಮೆ ಇತ್ತು. ಅವರು ಅರಬೇತರರನ್ನು 'ಅಜಮ್' ಅಥವ 'ಮೂಕರು' ಎನ್ನುತ್ತಿದ್ದರು. ಆದರೆ ಈ ಪಂಥಾಹ್ವಾನವನ್ನು ಕೇಳಿ ಸಂಪೂರ್ಣ ಅರಬ ಜನಾಂಗವು ಮೂಕವಾಯಿತು.

ಈ ಪಂಥಾಹ್ವಾನವು ಇಂದಿಗೂ ಅಸ್ತಿತ್ವದಲ್ಲಿ ಇದೆ. ಲೋಕದ ಇತರ ದೇವಗ್ರಂಥಗಳಂ ಪವಿತ್ರ ಕುರ್‌ಆನಿನ ಭಾಷೆಯು ಸತ್ತು ಹೋಗಿಲ್ಲ. ಅದು ತನ್ನ ಎಲ್ಲ ನವೀನತೆಗ ಹೊರತಾಗಿಯೂ ತನ್ನ ಪುರಾತನ ಶೈಲಿಯನ್ನು ಪೂರ್ಣವಾಗಿ ಉಳಿಸಿಕೊಂಡಿದೆ. ಈಗಲು ಅದು ಕೋಟಿಗಟ್ಟಲೆ ಜನರ ಮಾತೃಭಾಷೆಯಾಗಿದೆ. ಜಗತ್ತಿನಾದ್ಯಂತ ಆ ಭಾಷೆಯನ್ನು ಬಲ್ಲ ಕೋಟಿಗಟ್ಟಲೆ ಜನರು ಇದ್ದಾರೆ. ಅವರಲ್ಲಿ ದೊಡ್ಡ ದೊಡ್ಡ ಕವಿಗಳೂ ಹೆಸರಾಂ ಸಾಹಿತಿಗಳೂ ಇದ್ದಾರೆ. ಅವರ ಪೈಕಿ ಇಸ್ಲಾಮಿನ ಕಡು ವೈರಿಗಳೂ ಅನೇಕರಿದ್ದಾರೆ. ಅವರ ಬೇಕಾದರೆ ಈ ಪಂಥಾಹ್ವಾನವನ್ನು ಇಂದೂ ಸ್ವೀಕರಿಸಬಹುದು. ಆದರೆ 14 ಶತಮಾನಗ ಮೌನ ಮುರಿಯುವ ಯಾವ ಲಕ್ಷಣಗಳೂ ಗೋಚರಿಸುವುದಿಲ್ಲ.

ಸುಳ್ಳಾಡದ ವ್ಯಕ್ತಿ

ಕೊನೆಯದಾಗಿ ಪವಿತ್ರ ಕುರ್‌ಆನನ್ನು ಜಗತ್ತಿನ ಮುಂದೆ ಪ್ರಸ್ತುತಪಡಿಸಿದ ಪ್ರವಾದಿ ಮುಹಮ್ಮದ್‌ರವರು(ಸ) ಅದನ್ನು ತಮ್ಮ ಕೃತಿಯೆಂದು ಎಂದೂ ವಾದಿಸಲಿಲ್ಲ. ಬದಲಾಗಿ ಪ್ರತಿಯೊಂದು ಸಲವೂ ಅದು ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಂದ ತಮ್ಮ ಮೇಲೆ ಅವತೀರ್ಣಗೊಂಡ ಗ್ರಂಥವೆಂದೇ ಪ್ರತಿಪಾದಿಸಿದರು. ಪ್ರವಾದಿ ಮುಹಮ್ಮದ್‌ರ(ಸ) ಸತ್ಯ ಸಂಧತೆಯು ಎಲ್ಲ ರೀತಿಯಲ್ಲೂ ಸಂಶಯಾತೀತವಾಗಿದೆ. ಅವರ ಕಡುವೈರಿಗಳೂ ಅವರ ಸತ್ಯ ಸಂಧತೆ ಹಾಗೂ ಪ್ರಾಮಾಣಿಕತೆಗಳನ್ನು ನಿರಾಕರಿಸಲಿಲ್ಲ. ಪ್ರವಾದಿತ್ವಕ್ಕೆ ಮೊದಲು ಮಕ್ಕಾ ನಿವಾಸಿಗಳು ಅವರಿಗೆ ಸಾದಿಕ್(ಸತ್ಯವಂತ) ಮತ್ತು ಅಮೀನ್(ಪ್ರಾಮಾಣಿಕ) ಎಂಬ ಬಿರುದುಗಳನ್ನು ನೀಡಿದ್ದರು. ಪ್ರವಾದಿತ್ವ ಘೋಷಣೆಯ ಬಳಿಕವೂ ಜನರು ಅವರ ಪ್ರವಾದಿತ್ವವನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲೂ ಅವರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುತ್ತಿದ್ದರು. ಒಬ್ಬ ವ್ಯಕ್ತಿ ಜೀವನದಾದ್ಯಂತ ಸತ್ಯವಂತ ನಾಗಿದ್ದು, ಯಾವುದೇ ವಿಷಯದಲ್ಲಿ ಜನರೊಂದಿಗೆ ಸುಳ್ಳಾಡದಿದ್ದು ತನ್ನ ಸೃಷ್ಟಿಕರ್ತನಾದ ದೇವನ ಬಗ್ಗೆ ಇಂತಹ ಬಹಿರಂಗ ಸುಳ್ಳು ಹೇಳುವನೇ? ಅದೂ ಎಂತಹ ಸುಳ್ಳು? ಸರ್ವಜ್ಞನೂ ಸರ್ವಶ್ರುತನೂ ಸರ್ವ ವೀಕ್ಷಕನೂ ಆದ ಅಲ್ಲಾಹನ ಬಗ್ಗೆ ನಿರಂತರ 23 ವರ್ಷಗಳ ಕಾಲ ಸುಳ್ಳು ಹೇಳುತ್ತಿರಲು ಒಬ್ಬ ಸತ್ಯಸಂಧನಿಂದ ಸಾಧ್ಯವೇ? ತನ್ನ ಶತ್ರುಗಳ ಮೇಲೂ ಸುಳ್ಳಾರೋಪ ಹೊರಿಸದವನು ತನ್ನ ಪಾಲಕ ಪ್ರಭುವಿನ ಬಗ್ಗೆ ಸದಾ ಸುಳ್ಳು ಹೇಳುತ್ತಿದ್ದನೇ? ಮನುಷ್ಯ ವ್ಯವಹಾರಗಳಲ್ಲಿ ಎಂದೂ ಸುಳ್ಳಾಡದ ಮನುಷ್ಯ ಅಲ್ಲಾಹನ ವಿಷಯದಲ್ಲಿ ಸುಳ್ಳು ಹೇಳಿರಲು ಸಾಧ್ಯವೇ? ಮನೋವಿಜ್ಞಾನವಾಗಲೀ ಅನುಭವವಾಗಲೀ ಬುದ್ಧಿ-ವಿವೇಕಗಳಾಗಲೀ ಇದನ್ನು ಸಮರ್ಥಿಸುತ್ತದೆಯೇ? ಖಂಡಿತ ಇಲ್ಲ. ಆದ್ದರಿಂದ ಪವಿತ್ರ ಕುರ್‌ಆನ್ ದೇವ ಗ್ರಂಥವಾಗಿದೆ ಎಂಬುದಕ್ಕೆ ಪ್ರವಾದಿ ಮುಹಮ್ಮದ್‌ರವರ(ಸ) ಸಾಕ್ಷ್ಯವೇ ಅತಿ ದೊಡ್ಡ ಪುರಾವೆಯಾಗಿದೆ.

ಕಾಲಹರಣಗೊಂಡ ಗ್ರಂಥವೇ?

14 ಶತಮಾನಗಳಿಗೂ ಹಿಂದೆ ಬಂದಂತಹ ಒಂದು ಗ್ರಂಥದ ಆಧಾರದಲ್ಲಿ ಒಂದು ಆಧುನಿಕ ಸಮಾಜದ ನಿರ್ಮಾಣ ಸಾಧ್ಯವೇ? ಅದರ ಶಿಕ್ಷಣ ಮತ್ತು ಬೋಧನೆಗಳು ಕಾಲಹರಣಗೊಂಡು ಅಪ್ರಸ್ತುತವೆನಿಸಲಿವೆಯೇ? 7ನೆಯ ಶತಮಾನದ ಒಂದು ಅನಾಗರಿಕ ಸಮಾಜದ ಸುಧಾರಣೆಗೆ ಮುಂದಿಡಲ್ಪಟ್ಟಂತಹ ರೂಪರೇಷೆಯನ್ನು 21ನೆಯ ಶತಮಾನದ ಅತ್ಯಾಧುನಿಕ ಮಾನವ ಸಮಾಜಕ್ಕೆ ಅನ್ವಯಿಸುವುದು ನ್ಯಾಯವೇ? ಎಂಬಿತ್ಯಾದಿ ಪ್ರಶ್ನೆಗಳು ಪವಿತ್ರ ಕುರ್‌ಆನಿನ ಕುರಿತು ಆಧುನಿಕ ಮಾನವನ ಮನ-ಮಸ್ತಿಷ್ಕಗಳನ್ನು ಕಾಡುತ್ತಿರುತ್ತದೆ.

ಮಾನವ ನಿರ್ಮಿತ ತತ್ವ ಸಿದ್ಧಾಂತಗಳ ಬಗ್ಗೆ ಈ ರೀತಿಯ ಪ್ರಶ್ನೆಗಳು ಸಹಜ. ಆದರೆ

ತ್ರಿಕಾಲಜ್ಞಾನಿಯಾದ ಸರ್ವಲೋಕ ಪ್ರಭುವಿನ ವತಿಯಿಂದ ಮಾನವಕುಲದ ಸಮಗ್ರ ಮಾರ್ಗದರ್ಶನಕ್ಕೆ ಅವತೀರ್ಣಗೊಂಡ ಗ್ರಂಥವೆಂದು ಅದನ್ನು ಒಪ್ಪಿಕೊಂಡ ಬಳಿಕ ಪವಿತ್ರ ಕುರ್‌ಆನಿನ ಕುರಿತು ಈ ರೀತಿಯ ಪ್ರಶ್ನೆಗಳು ಉಳಿಯುವುದೇ ಇಲ್ಲ. 7ನೆಯ ಶತಮಾನದ ಮಾನವನ ಗುಣವಿಶೇಷಗಳು, ಅವರ ಅಭಿರುಚಿ, ಒಲವುಗಳು, ಅವನ ಬಯಕೆ-ಬೇಡಿಕೆಗಳು ಅವನ ಕುಂದು-ಕೊರತೆಗಳು, ಅವನ ಶಕ್ತಿ-ಸಾಮರ್ಥ್ಯ ಇತ್ಯಾದಿಗಳನ್ನು ತಿಳಿದಿದ್ದ ಅಲ್ಲಾಹನ 21ನೆಯ ಶತಮಾನದಲ್ಲಿ ಅದರಲ್ಲಿ ಉಂಟಾಗಬಹುದಾದ ಮಾರ್ಪಾಟುಗಳನ್ನೂ ಚೆನ್ನಾಗಿ ಅರಿತಿದ್ದಾನೆ.

ವೈಜ್ಞಾನಿಕ ಮತ್ತು ತಾಂತ್ರಿಕ ರಂಗದಲ್ಲಿ, ಸಂಸ್ಕೃತಿ ಮತ್ತು ನಾಗರಿಕತೆಯ ಕ್ಷೇತ್ರದಲ್ಲಿ ಮಾನವನು ಎಷ್ಟು ಪ್ರಗತಿ ಸಾಧಿಸಿದರೂ ಅವನ ಮೂಲ ಪ್ರಕೃತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂಬುದು ವ್ಯಕ್ತ. ಅವನಲ್ಲಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸ ಉಂಟಾಗಲಿಲ್ಲ. ಆದ್ದರಿಂದ ಈ ಬಗ್ಗೆ ಅವನಿಗೆ ಸಿಗಬೇಕಾದ ಮಾರ್ಗದರ್ಶನದಲ್ಲಿಯೂ ಯಾವುದೇ ವ್ಯತ್ಯಾಸದ ಅಗತ್ಯ ಉಂಟಾಗಿಲ್ಲ.

ಇಷ್ಟು ಮಾತ್ರವಲ್ಲ, ಪವಿತ್ರ ಕುರ್‌ಆನ್ ನೀಡುವ ವಿಶ್ವಾಸ ಶ್ರದ್ಧೆಗಳು, ಆರಾಧನಾ ವಿಧಿಗಳು, ಆಚಾರ-ಸಂಪ್ರದಾಯಗಳು ಮತ್ತು ಜೀವನದ ವಿವಿಧ ರಂಗಗಳಿಗೆ ಅದು ವಿಧಿಸುವ ಬೇಕು-ಬೇಡಗಳಲ್ಲಿ ಯಾವ ವಿಷಯವೂ ಯಾವುದೇ ಕಾಲ, ದೇಶ ಮತ್ತು ಜನಾಂಗಕ್ಕೆ ಸೀಮಿತವಾದುದಿಲ್ಲ. ಅದರ ನಂಬಿಕೆಗಳು, ಆರಾಧನಾ ಕ್ರಮಗಳು ಮತ್ತು ವಿಧಿ-ನಿಷೇಧಗಳು ಸಾರ್ವಕಾಲಿಕವಾಗಿವೆ. ಮನುಷ್ಯನ ವೈಜ್ಞಾನಿಕ ಪ್ರಗತಿಯ ಯಾವ ಹಂತದಲ್ಲೂ ಅದರಲ್ಲಿ ಯಾವುದೇ ಬದಲಾವಣೆಯ ಅಗತ್ಯ ತಲೆದೋರಿಲ್ಲ. ಮುಂದೆ ಹಾಗೆ ಆಗುವ ಸಂಭವವೂ ಇಲ್ಲ.

❖ ❖ ❖ ❖

ಧ್ಯಾಯ: ಹನ್ನೊಂದು

ಆಚಾರ-ಸಂಪ್ರದಾಯಗಳು: ಪರ್ದಾ

ಪ್ರಕೃತಿಯು ಇತರ ಎಲ್ಲ ಸೃಷ್ಟಿಗಳಂತೆ ಮಾನವರನ್ನೂ ಜೋಡಿಗಳಾಗಿ ಸೃಷ್ಟಿಸಿದೆ ಮತ್ತು ಅವರ ಮಧ್ಯೆ ಪರಸ್ಪರ ಆಕರ್ಷಣೆ-ಆಸಕ್ತಿಗಳನ್ನು ಇರಿಸಿದೆ. ಇತರ ಸೃಷ್ಟಿಗಳಲ್ಲಿ ಈ ಸ್ತ್ರೀ-ಪುರುಷ ವರ್ಗೀಕರಣ ಮತ್ತು ಆಕರ್ಷಣೆಯು ಸಂತಾನಾಭಿವೃದ್ಧಿಗಾಗಿ ಮಾತ್ರ ಸೀಮಿತವಾಗಿದೆ. ಆದರೆ ಮಾನವರಲ್ಲಿ ಈ ವಿಂಗಡನೆ ಮತ್ತು ಆಕರ್ಷಣೆಯು ಸೀಮಾತೀತ ಆಗಿದೆ, ಅನಿಯಂತ್ರಿತವಾಗಿದೆ ಮತ್ತು ಇತರ ಎಲ್ಲ ಜೀವಿಗಳಿಗಿಂತ ಹೆಚ್ಚಾಗಿದೆ. ಅದಕ್ಕೆ ಸಮಯ ಮತ್ತು ಋತುವಿನ ಬಂಧನವಿಲ್ಲ. ಸ್ತ್ರೀ-ಪುರುಷರಲ್ಲಿ ಪರಸ್ಪರ ಶಾಶ್ವತವಾದ ಆಕರ್ಷಣೆಯನ್ನೂ ಇರಿಸಲಾಗಿದೆ. ಅವರಲ್ಲಿ ಒಬ್ಬರನ್ನೊಬ್ಬರು ಬಯಸುವ ಮತ್ತು ಲೈಂಗಿಕವಾಗಿ ಆಕರ್ಷಿಸುವ ಅಪಾರ ಸಾಮರ್ಥ್ಯವನ್ನು ಇರಿಸಲಾಗಿದೆ. ಅವರ ಮನದಲ್ಲಿ ಪರಸ್ಪರರ ಬಗ್ಗೆ ಪ್ರೀತಿ-ಪ್ರೇಮಗಳ ಭಾವನೆಯನ್ನು ಇರಿಸಲಾಗಿದೆ. ಅವರ ಶರೀರದ ರಚನೆ, ವರ್ಣ, ರೂಪ, ಸ್ವರ ಮತ್ತು ಪ್ರತಿಯೊಂದು ಅಂಗದಲ್ಲಿಯೂ ಪರಸ್ಪರರಿಗೆ ಆಕರ್ಷಣೆಯನ್ನು ಸೃಷ್ಟಿಸಲಾಗಿದೆ. ಅವರ ಸ್ವರ, ಹಾವಭಾವ, ನಡೆ-ನುಡಿ, ಚಲನ-ವಲನಗಳಲ್ಲಿ ಪರಸ್ಪರರನ್ನು ಆಕರ್ಷಿಸುವ ಅಪಾರ ಶಕ್ತಿಯನ್ನು ತುಂಬಲಾಗಿದೆ.

ಸ್ತ್ರೀ-ಪುರುಷರಲ್ಲಿರುವ ಈ ಲೈಂಗಿಕ ಆಕರ್ಷಣೆಯ ಉದ್ದೇಶ ಕೇವಲ ಸಂತಾನಾಭಿವೃದ್ಧಿ ಅಲ್ಲ. ನಿಸರ್ಗದ ಈ ನಿಯಮವನ್ನು ಯಥೋಚಿತವಾಗಿ ಉಪಯೋಗಿಸಿ, ಮಾನವಕುಲದ ಶ್ರೇಯೋದ್ದೇಶಗಳನ್ನು ತಿಳಿದುಕೊಂಡು ಮಾನವೀಯ ಸಂಸ್ಕೃತಿಯನ್ನು ಪೋಷಿಸಿ ಸರ್ವಾಂಗ ಸುಂದರವೂ ಸರ್ವೋತ್ಕೃಷ್ಟವೂ ಆದ ಸಾಮಾಜಿಕ ಜೀವನವನ್ನು ರೂಪಿಸಬೇಕೆಂಬುದೇ ಪ್ರಕೃತಿಯ ಉದ್ದೇಶ. ಅದಕ್ಕಾಗಿ ಸ್ತ್ರೀ-ಪುರುಷರಲ್ಲಿ ಜೀವನ ಪರ್ಯಂತ ನೆಲೆನಿಲ್ಲಬಲ್ಲ ಮೈತ್ರಿ-ವಿಶ್ವಾಸ, ನಲ್ಮೆ-ನಂಬುಗೆ, ಆತ್ಮೀಯತೆ-ಅವಲಂಬನೆ ಮತ್ತು ಸಹಕಾರಗಳನ್ನು ಉಂಟು ಮಾಡುವುದೇ ನಿಸರ್ಗದ ಗುರಿ.

ಸಂತಾನ ಪ್ರೇಮ

ಮಾನವ ಶಿಶು ಇತರೆಲ್ಲ ಪ್ರಾಣಿ-ಪಕ್ಷಿಗಳ ಮರಿಗಳಿಗಿಂತ ಹೆಚ್ಚು ದುರ್ಬಲವೂ

ಕೋಮಲವೂ ಆಗಿದೆ. ಅದು ತನ್ನ ಪಾಲನೆ-ಪೋಷಣೆ ಮತ್ತು ರಕ್ಷಣೆಗೆ ಮಾತಾಪಿತ ಬಹುಕಾಲದ ವರೆಗೆ ಅತ್ಯಧಿಕ ಆಶ್ರಯಿಸಬೇಕಾಗುತ್ತದೆ. ಇದು ಸ್ತ್ರೀ-ಪುರುಷರ ಸಂಬ ಕೇವಲ ಲೈಂಗಿಕ ಆಕರ್ಷಣೆ ಮತ್ತು ಆಸಕ್ತಿಗಳಿಗೆ ಮಾತ್ರ ಸೀಮಿತವಾಗಿ ಉಳಿಯದೆ ಅ ಪರಸ್ಪರರನ್ನು ಅರಿಯುವಂತೆಯೂ ಅವಲಂಬಿಸುವಂತೆಯೂ ಗೌರವಿಸುವಂತೆ ಪ್ರೇರೇಪಿಸುತ್ತದೆ.

ಅಂತೆಯೇ ಮನುಷ್ಯನು ತನ್ನ ಸಂತಾನದ ಬಗ್ಗೆ ಇತರ ಯಾವ ಪ್ರಾಣಿಗಿಂತ ಹೆಚ್ಚಿನ ಮಮತೆ-ವಾತ್ಸಲ್ಯಗಳನ್ನು ಹೊಂದಿದ್ದಾನೆ.

ಪ್ರಾಣಿಗಳು ತಮ್ಮ ಸಂತಾನವನ್ನು ಅತ್ಯಲ್ಪ ಕಾಲ ಮಾತ್ರ ಪೋಷಿಸುತ್ತವೆ. ಆ ಬ ಅವುಗಳನ್ನು ತೊರೆದು ಬಿಡುತ್ತವೆ. ಮಾತ್ರವಲ್ಲ ಅವುಗಳನ್ನು ಗುರುತಿಸುವ ಶಕ್ತಿಯ ಕಳೆದುಕೊಳ್ಳುತ್ತವೆ. ಆದರೆ ಮಾನವನು ತನ್ನ ಸಂತಾನದ ಬಗೆಗಿನ ಪ್ರೀತಿ, ವಾತ್ಸ ಅಭಿಮಾನಗಳನ್ನು ತಲೆತಲಾಂತರದ ವರೆಗೆ ಕಾಯ್ದುಕೊಂಡು ಅದರ ಕ್ಷೇಮಾಭ್ಯುದಯ ಬಗ್ಗೆ ಅತೀವ ಕಾಳಜಿ ವಹಿಸುತ್ತಾನೆ. ಇದುವೇ ಮನುಷ್ಯನ ಕುಟುಂಬ ಜೀವನದ ಅಸ್ತಿತ್ವ ಮಕ್ಕಳ ಮದುವೆ ಸಂಬಂಧಗಳ ಮೂಲಕ ಅನೇಕ ಕುಟುಂಬಗಳ ಮಧ್ಯೆ ಬಾಂಧವ್ಯ ಬೆಳೆ ಅದು ಸುವ್ಯವಸ್ಥಿತ ಸಾಮಾಜಿಕ ಜೀವನಕ್ಕೆ ಆಧಾರವಾಗುತ್ತದೆ.

ಅದಮ್ಯ ಕಾಮಾಸಕ್ತಿ

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಪಾಶವೀ ಪ್ರವೃತ್ತಿಗಳೂ ಮಾನವೀಯ ಗುಣಗ ವಿಭಿನ್ನ ಪ್ರಮಾಣಗಳಲ್ಲಿ ಇವೆ. ಈ ಪ್ರವೃತ್ತಿಗಳ ಸಮತೋಲನದಿಂದಲೇ ಸ್ತ್ರೀ-ಪುರು ಸಂಬಂಧಗಳು ಅನ್ಯೋನ್ಯವಾಗಿಯೂ ಮಧುರವಾಗಿಯೂ ಬೆಳೆದು ಒಂದು ಪರಿಶು ಸಮಾಜ ಜೀವನವು ರೂಪುಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಮಾನವನಲ್ಲಿರುವ ಅಪಾರ ಕಾ ಪ್ರಚೋದನೆ ಮತ್ತು ಲೈಂಗಿಕ ಆಸಕ್ತಿಯನ್ನು ನಿಯಂತ್ರಿಸುವುದು ಪ್ರಧಾನ ಸಮಸ್ಯೆ. ಕಾ ಪ್ರಚೋದಕ ಪರಿಸರ, ಸಂಗೀತ-ಕಲೆಗಳ ಹೆಸರಲ್ಲಿ ಪ್ರಸ್ತುತಪಡಿಸಲಾಗುವ ಲೈಂ ಆಕರ್ಷಣೆಯ ಉದ್ರೇಕಕಾರಿ ವಿಚಾರಗಳು ಆತನ ಈ ದಾಹವನ್ನು ಉಲ್ಬಣಗೊಳಿಸುತ್ತ ಈ ರೀತಿ ಉಲ್ಬಣಗೊಂಡ ದಾಹವನ್ನು ನೀಗಿಸುವ ಸಾಧನಗಳೂ ಲಭ್ಯವಾದಾಗ ಅದು ಮಿ ಮೀರಿ ಬೆಳೆಯುವುದಲ್ಲದೆ ಆತನು ಲಜ್ಜೆ, ಸಂಕೋಚಗಳ ಎಲ್ಲ ಮೇರೆಗಳನ್ನು ಮೀ ಪಶುವಿನಂತೆ ವರ್ತಿಸ ತೊಡಗುತ್ತಾನೆ.

ಅನಿಯಂತ್ರಿತ ಲೈಂಗಿಕ ಆಸಕ್ತಿಯಂತೆ ಅದರ ಸಂಪೂರ್ಣ ನಿಗ್ರಹವೂ ಸನ್ಯಾಸಪ ನಿಸರ್ಗದ ವಿರುದ್ಧ ಹೋರಾಟವಾಗಿದ್ದು ಮಾನವಕುಲದ ಸಮಗ್ರ ಹಿತಾಸಕ್ತಿಗಳಿಗೆ ಮಾರಕವಾಗಿ ಕಾಮ ಪ್ರಚೋದನೆ ಮತ್ತು ಲೈಂಗಿಕ ಆಸಕ್ತಿಯನ್ನು ವಿವಾಹ ಸಂಬಂಧದ ಮೂಲಕ ಪ ಪತ್ನಿಯರಾದವರ ಮಧ್ಯೆ ಸೀಮಿತಗೊಳಿಸುವುದು ಇಸ್ಲಾಮಿನ ಉದ್ದೇಶ.

ಸ್ತ್ರಧಾರಣೆ

ನಾಚಿಕೆ-ಲಜ್ಜೆ ಮತ್ತು ಶಿಷ್ಟಾಚಾರಗಳು ಮಾನವನ ಸಹಜ ಪ್ರಕೃತಿಯಲ್ಲಿರುವಂತಹ ಂಗಳಾಗಿವೆ. ಆದುದರಿಂದಲೇ ಅನಾಗರಿಕ ಕಾಲದಿಂದಲೇ ಸ್ತ್ರೀ-ಪುರುಷರು ತಮ್ಮ ತ್ಯಾಂಗಗಳನ್ನು ಮುಚ್ಚುವ ಒಂದಲ್ಲ ಒಂದು ವಿಧಾನವನ್ನು ಅನುಸರಿಸುತ್ತಾ ಬರುತ್ತಿದ್ದಾರೆ. ು ಮಾನವನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಒಂದು ಪ್ರಧಾನ ಮಾಧ್ಯಮ. ೃಕರ್ತನು ಮನುಷ್ಯನಿಗೆ ನೀಡಿರುವ ಈ ಲಜ್ಜೆ ಮತ್ತು ನಾಚಿಕೆ ಪ್ರಜ್ಞೆಯಿಂದಾಗಿಯೇ ಇತರ ಣಿಗಳಿಗೆ ವ್ಯತಿರಿಕ್ತವಾಗಿ ಮಾನವನು ತನ್ನ ಕಾಮಾಸಕ್ತಿಯ ಚಟುವಟಿಕೆಗಳನ್ನು ರಹಸ್ಯ ಡಲು ನಿರ್ಬಂಧಿತನಾಗುತ್ತಾನೆ. ಇತಿಹಾಸದುದ್ದಕ್ಕೂ ಮಾನವ ಸಮುದಾಯಗಳ ಮಧ್ಯೆ ್ವ ತಾತ್ವಿಕ, ಸೈದ್ಧಾಂತಿಕ, ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳ ರತಾಗಿಯೂ ವಸ್ತ್ರಧಾರಣೆ ಅನಿವಾರ್ಯವೆಂಬುದನ್ನು ಮಾನವಕುಲವು ಸರ್ವಾನುಮತದಿಂದ ಗೀಕರಿಸಿದೆ.

ಇದೇ ರೀತಿ ಎಲ್ಲ ಮಾನವ ವರ್ಗಗಳೂ ವಸ್ತ್ರಧಾರಣೆಯ ನಿಟ್ಟಿನಲ್ಲಿ ಪುರುಷನಿಗಿಂತ ಯ ಹೊಣೆಗಾರಿಕೆ ಅಧಿಕವೆಂಬುದನ್ನು ಒಪ್ಪುತ್ತವೆ. ಸ್ತ್ರೀಯ ದೇಹ ರಚನೆಯಲ್ಲಿರುವ ಷ್ಟ ಆಕರ್ಷಣೆಯು ಪುರುಷನಿಗಿಂತ ಎಷ್ಟೋ ಪಾಲು ಮಿಗಿಲಾಗಿರುವುದರಿಂದ ಸ್ತ್ರೀ-ುಷರಿಬ್ಬರನ್ನೂ ಸೃಷ್ಟಿಸಿರುವ ಅಲ್ಲಾಹನು ಸ್ತ್ರೀಯಲ್ಲಿ ಪುರುಷನಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಜ್ಜೆಯನ್ನು ಮೈಗೂಡಿಸಿರುವನು. ಆದ್ದರಿಂದಲೇ ಇಸ್ಲಾಮಿನಲ್ಲಿ ಈ ಬಗ್ಗೆ ಸ್ಪಷ್ಟ ಮತ್ತು ುಗ್ರ ಆದೇಶಗಳನ್ನು ನೀಡಲಾಗಿದೆ.

ಮಾನವಕುಲದ ಆರಂಭದಲ್ಲೇ ಮಾನವರಿಗೆ ಮೈ ಮುಚ್ಚಿಕೊಳ್ಳಬೇಕೆಂಬ ಆದೇಶವನ್ನು ಡಲಾಗಿತ್ತೆಂದು ಪವಿತ್ರ ಕುರ್‌ಆನಿನ ಮೂಲಕ ತಿಳಿದು ಬರುತ್ತದೆ.

್ರಕೃತಿಕ ಹೊಣೆ

ಇಸ್ಲಾಮ್ ನಿರ್ದೇಶಿಸಿರುವ ಜೀವನ ವ್ಯವಸ್ಥೆಯಲ್ಲಿ ಕುಟುಂಬದ ಪಾಲನೆ, ಪೋಷಣೆ, ್ಷಣ, ತರಬೇತಿಗಳ ಆರ್ಥಿಕ ಹೊಣೆಯನ್ನು ಕೇವಲ ಪುರುಷನಿಗೇ ವಹಿಸಿಕೊಡಲಾಗಿದೆ. ಕೆಂದರೆ ಸ್ತ್ರೀಯ ಮೇಲೆ ಪ್ರಕೃತಿಯು ಅದಕ್ಕಿಂತ ದೊಡ್ಡ ಹೊಣೆಯನ್ನು ವಹಿಸಿ ಕೊಟ್ಟಿದೆ. ರುಷನು ಒಂದು ಘಳಿಗೆಯ ಮಟ್ಟಿಗೆ ಸ್ತ್ರೀಯ ಜೊತೆ ಸೇರಿ ಶಾಶ್ವತವಾಗಿ ಅವಳಿಂದ ುತ್ತು ಅವಳ ಜೊತೆ ಸೇರಿರುವುದರ ಹೊಣೆಗಾರಿಕೆಗಳಿಂದ ಮುಕ್ತನಾಗಬಹುದು. ಆದರೆ ೀಯನ್ನು ಈ ಭೇಟಿಯ ಪರಿಣಾಮವು ಜೀವನದಾದ್ಯಂತ ಹಿಡಿದಿರಿಸುತ್ತದೆ. ಗರ್ಭ ರಣೆಯಾದ ಐದು ವರ್ಷಗಳ ತನಕವಂತೂ ಅದರ ಪರಿಣಾಮವು ಆಕೆಯನ್ನು ಬಿಟ್ಟಗಲುವುದೇ ಲ್ಲ. ಇದು ಪ್ರಕೃತಿಯ ನಿಯಮ. ಮಗುವಿನ ಬಗ್ಗೆ ತಾಯಿಗಿರುವಷ್ಟು ಆತ್ಮೀಯತೆ ತಂದೆಗೆ ಲ್ಲದಿರುವುದೂ ನಿಸರ್ಗ ನಿಯಮವೇ. ಆದುದರಿಂದ ಈ ಹೊಣೆಯಿಂದ ಸ್ತ್ರೀಯು

ಮುಕ್ತಳಾಗುವಂತಿಲ್ಲ. ಈ ಪ್ರಕೃತಿದತ್ತ ಹೊಣೆಯ ಜೊತೆ ಜೀವನದ ಇನ್ನಿತರ ಹೊಣೆಗಳ ಆಕೆಯ ಮೇಲೆ ಹೇರುವುದು ಮಹಾ ಅನ್ಯಾಯ. ಅನಿವಾರ್ಯವೂ ನಿಸರ್ಗ ಸಹಜವೂ (ಹೊಣೆಗಳನ್ನು ಮಾತ್ರ ಆಕೆಯ ಮೇಲೆ ಹೇರಬೇಕು. ಪುರುಷನು ತನ್ನ ಹೊಣೆಗಾರಿಕೆಯ ಆಕೆಯ ಮೇಲೆ ಹೇರಿರುವುದು ಇಂದಿನ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಪ್ರಮ ದೋಷ. ಸಂತಾನೋತ್ಪತ್ತಿ ಮತ್ತು ಬೆಳವಣಿಗೆಗೆ ಸ್ತ್ರೀ- ಪುರುಷರಿಬ್ಬರೂ ಸಮ ಪಾಲುದಾರರೆಂದ ಮೇಲೆ ಅದರ ಪೋಷಣೆಯ ಹೊಣೆಯನ್ನೂ ಇಬ್ಬರೂ ಸಮಾನವಾಗಿ ನಿರ್ವಹಿಸಬೇಕಾದುದು ನ್ಯಾಯಸಮ್ಮತ. ಪುರುಷನು ಕುಟುಂಬದ ಸಂಪೂರ್ಣ ಆಥಿ ಹೊರೆಯನ್ನು ಹೊರಬೇಕೆಂಬುದು ಈ ಸಮಾನ ಪಾಲುದಾರಿಕೆಯ ಅನಿವಾಯ ಬೇಡಿಕೆಯಾಗಿದೆ.

ಮಾನವಕುಲದ ಸಂತುಲಿತ ಬೆಳವಣಿಗೆಗೆ ಮತ್ತು ನಾಗರಿಕತೆ, ಸಂಸ್ಕೃತಿಗಳ ಪ್ರಸಾ ಅನಿವಾರ್ಯವಾದ ಈ ಸ್ತ್ರೀ-ಪುರುಷ ಕಾರ್ಯ ವಿಂಗಡನೆಯಲ್ಲಿ ಪ್ರತಿಯೊಬ್ಬರೂ ತಮ ಪಾಲಿನ ಕರ್ತವ್ಯವನ್ನು ನಿರ್ವಹಿಸಬೇಕಾದುದು ಅತ್ಯಗತ್ಯ. ನಿಸರ್ಗದ ಈ ನೈಜ ಗುರಿಯ ಸರಿಯಾಗಿ ತಿಳಿದ ಪ್ರವಾದಿಗಳು ಸ್ತ್ರೀ- ಪುರುಷರ ಸಹಜ ಬಯಕೆ-ಬೇಡಿಕೆಗಳ ಪೂರೈಕೆಗಾಗಿಯ ಜನಾಂಗದ ಅಭ್ಯುದಯಕ್ಕಾಗಿಯೂ ಮದುವೆಯೊಂದೇ ಉತ್ತಮ ವ್ಯವಸ್ಥೆ ಎಂ ಸಾರಿದರು. ವಿವಾಹಾತೀತ ಲೈಂಗಿಕ ಸಂಬಂಧಗಳನ್ನು ಬಲವಾಗಿ ನಿಷೇಧಿಸಿದರು. ನಿಷೇಧಗಳನ್ನು ಮುರಿಯುವವರಿಗೆ ಅತ್ಯುಗ್ರ ಶಿಕ್ಷೆಗಳನ್ನು ನೀಡಿದರು. ಮಾತ್ರವ ವಿವಾಹಾತೀತ ಲೈಂಗಿಕ ಸಂಬಂಧವನ್ನು ತಡೆಯಲಿಕ್ಕಾಗಿ ಶಿಕ್ಷಣ-ತರಬೇತಿಯ ಮೂ ಜನರು ಇಂತಹ ಹೇಯ ಕಾರ್ಯಗಳನ್ನು ದ್ವೇಷಿಸುವಂತೆ ಮಾಡಲಾಯಿತು. ಜನಾಭಿಪ್ರಾಯವ ರೂಪಿಸಿ ವಿವಾಹಾತೀತ ಲೈಂಗಿಕ ಸಂಬಂಧವನ್ನು ದ್ವೇಷ ಮತ್ತು ತಿರಸ್ಕಾರ ಭಾವದಿಂ ಕಾಣುವಂತೆ ಮಾಡಲಾಯಿತು. ಇಂತಹ ಹೀನ ಮತ್ತು ದೂಷಣೀಯ ಕೆಲಸಕ್ಕೆ ಪ್ರೇ ವಾಗುವ ಎಲ್ಲಾ ಅಂಶಗಳನ್ನು ತೊಡೆದು ಹಾಕಲಾಯಿತು. ವಿವಾಹಾತೀತ ಲೈಂಗಿ ಸಂಬಂಧಕ್ಕೆ ಅವಕಾಶವೇ ಇಲ್ಲದಂತೆ ಸಮಾಜ ಜೀವನವನ್ನು ಪುನರ್ವ್ಯವಸ್ಥೆಗೊಳಿಸಲಾಯಿತ

ಅನಿರ್ಬಂಧಿತ ಮಿಲನಕ್ಕೆ ತಡೆ

ಸಮಾಜದಲ್ಲಿ ಸ್ತ್ರೀ-ಪುರುಷರು ಅನಿರ್ಬಂಧಿತ ರೀತಿಯಲ್ಲಿ ಬೆರೆಯುವುದರಿಂ ಆಗಬಹುದಾದ ಅನಾಹುತ, ಅನೀತಿಗಳನ್ನು ತಪ್ಪಿಸಲು ಅವರನ್ನು ಪರಸ್ಪರರಿಂದ ಬೇರ್ಪಡಿಸಿದ ಅಥವಾ ಸ್ತ್ರೀ-ಪುರುಷ ಮಿಲನಕ್ಕೆ ಪ್ರತಿಬಂಧಗಳನ್ನು ಹೇರಿದರೆ ಅವರ ನೀತಿ-ಚಾರಿತ್ರ್ಯಗಳನ ಶಂಕಿಸಿದಂತಾಗುವುದಿಲ್ಲ. ಬಾಗಿಲಿಗೆ ಬೀಗ ಹಾಕಿದರೆ ಜಗತ್ತಿನಲ್ಲಿರುವವರೆಲ್ಲ ಕಳ್ಳರೆಂದಾಗ ತ್ತದೆಯೇ? ಪೊಲೀಸ್ ವ್ಯವಸ್ಥೆ ಇದ್ದ ಮಾತ್ರಕ್ಕೆ ದೇಶದಲ್ಲೆಲ್ಲ ದುಷ್ಕರ್ಮಿಗಳೇ ತುಂಬಿದ್ದಾ ರೆಂದಾಗುತ್ತದೆಯೇ? ವ್ಯವಹಾರಗಳ ದಾಖಲೆ ಪತ್ರ ಮಾಡುವುದರಿಂದ ಪರಸ್ಪರ ನಂಬಿ

ಲ್ಲವೆಂದಾಗುತ್ತದೆಯೇ? ಖಂಡಿತ ಇಲ್ಲ. ಹಾಗಾದರೆ ಸ್ತ್ರೀ-ಪುರುಷರ ಅನಿರ್ಬಂಧಿತ ತನಾಟದಿಂದಾಗಬಹುದಾದ ಅನರ್ಥಗಳ ನಿವಾರಣೆಗೆ ಮಾಡುವ ಮುಂಜಾಗ್ರತೆಯ ಬಗ್ಗೆ ಂತಹ ಪೂರ್ವಗ್ರಹ ಏಕೆ?

ಅತ್ಯಂತ ಸಮೀಪದ ರಕ್ತ ಸಂಬಂಧದಿಂದಾಗಿ ಒಂದೇ ಕುಟುಂಬದಲ್ಲಿ ಬಾಳಬೇಕಾದ ೀ-ಪುರುಷರ ಮಧ್ಯೆ ಇಸ್ಲಾಮ್ ವಿವಾಹ ಸಂಬಂಧವನ್ನು ನಿಷೇಧಿಸಿದೆ. ಈ ಬಗ್ಗೆ ಪವಿತ್ರ ರ್‌ಆನಿನಲ್ಲಿ ಬಂದಿರುವ ಆದೇಶವು ಹೀಗಿದೆ:

"ನಿಮಗೆ ಈ ಸ್ತ್ರೀಯರು ವಿವಾಹಕ್ಕೆ ನಿಷಿದ್ಧರು:- ನಿಮ್ಮ ಮಾತೆಯರು, ಪುತ್ರಿಯರು, ಹೋದರಿಯರು, ಸೋದರತ್ತೆಯರು, ತಾಯಿಯ ಸೋದರಿಯರು, ಸೋದರ ಪುತ್ರಿಯರು, ೋದರಿ ಪುತ್ರಿಯರು, ನಿಮಗೆ ಮೊಲೆ ಹಾಲುಣಿಸಿದ ಸಾಕು ತಾಯಂದಿರು, ನಿಮ್ಮೊಂದಿಗೆ ನಪಾನ ಸಂಬಂಧವಿರುವ ಸೋದರಿಯರು, ನಿಮ್ಮ ಪತ್ನಿಯರ ತಾಯಂದಿರು ನಿಮ್ಮ ಡಿಲಲ್ಲಿ ಪೋಷಣೆ ಪಡೆದಿರುವ ನಿಮ್ಮ ಪತ್ನಿಯ ಪುತ್ರಿಯರು, ಯಾವ ಪತ್ನಿಯರೊಂದಿಗೆ ವು ಸಂಭೋಗ ಮಾಡಿರುವಿರೋ ಅವರ ಪುತ್ರಿಯರು, ಆದರೆ (ಬರೇ ನಿಕಾಹ್ ಆಗಿದ್ದು) ವು ಸಂಭೋಗ ಮಾಡಿರದಿದ್ದರೆ (ಅವರನ್ನು ಬಿಟ್ಟು ಅವರ ಪುತ್ರಿಯರನ್ನು ವಿವಾಹ ಮಾಡಿ ಳ್ಳುವುದರಲ್ಲಿ) ದೋಷವಿಲ್ಲ. ನಿಮ್ಮ ಸ್ವಂತ ಪುತ್ರರ ಪತ್ನಿಯರೂ ನಿಮಗೆ ನಿಷಿದ್ಧ. ಂದು ವಿವಾಹ ಬಂಧನದಲ್ಲಿ ಇಬ್ಬರು ಸಹೋದರಿಯನ್ನಿರಿಸಿಕೊಳ್ಳುವುದೂ ನಿಷಿದ್ಧವಾಗಿದೆ. ದರೆ ಹಿಂದೆ ಆದುದು ಆಗಿ ಹೋಯಿತು. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಿಸುವವನೂ ಪೆದೋರುವವನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್: 4: 23)

್ರೀಗೆ ವಿನಾಯಿತಿ

ಮನೆಯ ಹೊರಗಿನ ಎಲ್ಲ ಧಾರ್ಮಿಕ ಕರ್ತವ್ಯಗಳಿಂದಲೂ ಸ್ತ್ರೀಯನ್ನು ಮುಕ್ತ ಾಳಿಸಲಾಗಿದೆ. ಕಡ್ಡಾಯ ನಮಾಝ್‌ಗಳನ್ನು ಆಕೆ ಮನೆಯಲ್ಲೇ ನಿರ್ವಹಿಸಿದರೆ ಸಾಕು, ಾತ್ರವಲ್ಲ ಮಸೀದಿಯಲ್ಲಿ ಅದಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಇರುವಾಗಲೂ ಆಕೆಗೆ ಮಸೀದಿಗೆ ೋಗಬೇಕೆಂಬ ನಿರ್ಬಂಧವಿಲ್ಲ. ಆಕೆಯ ಮಟ್ಟಿಗೆ ಮನೆಯೇ ಉತ್ತಮವೆಂದು ಸಾರಲಾಗಿದೆ. ುಕ್ರವಾರದ ಕಡ್ಡಾಯ ನಮಾಝ್‌ನಿಂದಲೂ ಆಕೆಗೆ ವಿನಾಯಿತಿ ನೀಡಲಾಗಿದೆ. ಧರ್ಮ ಯುದ್ಧದಲ್ಲಿಯೂ ಆಕೆಯು ಪಾಲ್ಗೊಳ್ಳಬೇಕಾಗಿಲ್ಲ. ಶವ ಸಂಸ್ಕಾರದಂತಹ ದುಃಖದ ಾರ್ಯಗಳಲ್ಲಿಯೂ ಭಾಗವಹಿಸಬೇಕಾಗಿಲ್ಲ. ಸ್ತ್ರೀಯು ಏಕಾಂಗಿಯಾಗಿ ಪ್ರಯಾಣಿಸುವುದನ್ನು ಸ್ಲಾಮ್ ನಿಷೇಧಿಸಿದೆ. ಹಜ್ಜ್ ಯಾತ್ರೆಯನ್ನು ಆಕೆ ತನ್ನ ಪತಿ ಅಥವಾ ವಿವಾಹ ಷಿದ್ಧವಾದ ರಕ್ತ ಸಂಬಂಧಿಯ ಜೊತೆಯೇ ಕೈಗೊಳ್ಳಬೇಕು. ಇದರಿಂದ ಅನಿವಾರ್ಯ ಗತ್ಯವಿಲ್ಲದೆ ಸ್ತ್ರೀಯು ತನ್ನ ನೈಜ ಕಾರ್ಯಕ್ಷೇತ್ರವಾದ ಕುಟುಂಬವನ್ನು ಬಿಟ್ಟು ಹೊರ ೋಗಬಾರದೆಂದು ಇಸ್ಲಾಮ್ ಬಯಸಿದೆ ಎಂಬುದು ಸ್ಪಷ್ಟವಾಗುತ್ತದೆ.

ಪುರುಷರು ಪರ ಸ್ತ್ರೀಯತ್ತ ದುರ್ನೋಟ ಬೀರುವುದನ್ನು ಮತ್ತು ಸ್ತ್ರೀಯು ತ ಪತಿಯ ಮತ್ತು ಆಪ್ತ ಬಂಧುಗಳ ಹೊರತು ಇತರರ ಮುಂದೆ ತನ್ನ ಸೌಂದಯ ಪ್ರದರ್ಶಿಸುವುದನ್ನು, ತನ್ನ ಸ್ವರ ಮಾಧುರ್ಯದ ಮೂಲಕ ಪರ ಪುರುಷರನ್ನು ಆಕರ್ಷಿಸ ವುದನ್ನು ಹಾಗೂ ಕಾಮ ಪ್ರಚೋದಕ ಗಾಯನ, ಸಂಗೀತಗಳನ್ನು ಇಸ್ಲಾಮ್ ನಿಷೇಧಿಸಿ ಸ್ತ್ರೀಯು ಪರ ಪುರುಷರೆದುರು ನೃತ್ಯ ಮಾಡುವುದಂತಿರಲಿ ಕೈಯ ಬಳೆ, ಕಾಲ ಗೆಜ್ಜೆ ಯಂತ ಆಭರಣಗಳಿಂದ ಸದ್ದು ಮಾಡಿ ನಡೆಯುವುದನ್ನು, ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡ ಮಾರ್ಗದಲ್ಲಿ ನಡೆದಾಡುವುದನ್ನು ಮತ್ತು ಪುರುಷ ಸಮೂಹದ ಮಧ್ಯೆ ಹೋಗುವುದನ ಇಸ್ಲಾಮ್ ಅನುಮತಿಸಿಲ್ಲ.

ಸ್ತ್ರೀ-ಪುರುಷರಿಗೆ ವಸ್ತ್ರಧಾರಣೆಯ ನಿಯಮಗಳು

ಬೇರಾವ ನಾಗರಿಕತೆಯೂ ಮಾನವನು ತನ್ನ ಗುಪ್ತಾಂಗಗಳನ್ನು ಮುಚ್ಚಿಕೊಂಡಿ ಬೇಕೆಂದು ಕಾನೂನು ಮೂಲಕ ಸ್ಪಷ್ಟಪಡಿಸದೆ ಇದ್ದಾಗಲೂ ತಾನು ಅದನ್ನು ಕಡ್ಡಾಯ ಗೊಳಿಸುವ ಮೂಲಕ ಇಸ್ಲಾಮ್ ಮಾನವ ಸಹಜ ಲಜ್ಜೆಗೆ ಮಾನ್ಯತೆ ನೀಡಿದೆ. ಅಂಗಾಂ ಪ್ರದರ್ಶನವನ್ನು ನಾಗರಿಕತೆಯ ಪ್ರತೀಕವೆಂದು ಪರಿಗಣಿಸುವ ಆಧುನಿಕತೆಯು ಮಾನವನನ್ ಈ ನಿಸರ್ಗ ಸಹಜ ಲಜ್ಜೆಯಿಂದ ಮುಕ್ತಗೊಳಿಸಿ ಪೂರ್ಣ ನಗ್ನತೆಯತ್ತ ಒಯ್ಯುತ್ತಿದೆ. ಬಟ್ ತೊಡುವುದು ಅಲಂಕಾರಕ್ಕಾಗಿಯೇ ಹೊರತು ನಗ್ನತೆಯನ್ನು ಮುಚ್ಚಲಿಕ್ಕಲ್ಲ ಎಂಬುದ ಅದರ ಧೋರಣೆಯಾಗಿದೆ. ಆದರೆ ಇಸ್ಲಾಮಿನ ದೃಷ್ಟಿಯಲ್ಲಿ ಅಲಂಕಾರಕ್ಕಿಂತಲೂ ಹೆಚ್ಚಿ ಮಹತ್ವ ನಗ್ನತೆಯನ್ನು ಮರೆಸುವುದಕ್ಕಿದೆ. ಸ್ತ್ರೀಯರನ್ನು ಆಕರ್ಷಿಸಬಹುದಾದ ಪುರುಷ ಅಂಗಾಂಗಗಳನ್ನೂ ಪುರುಷರಲ್ಲಿ ಚಿತ್ತ ಚಾಂಚಲ್ಯವನ್ನುಂಟು ಮಾಡಬಲ್ಲ ಸ್ತ್ರೀಯ ಅಂಗಾಂಗಗಳನ್ನೂ ಮುಚ್ಚಲೇಬೇಕೆಂದು ಇಸ್ಲಾಮ್ ತನ್ನ ಅನುಯಾಯಿಗಳಿಗೆ ಕಡ್ಡಾಯ ಗೊಳಿಸಿದೆ.

ಅಪರಿಚಿತರಾದ ಸ್ತ್ರೀ- ಪುರುಷರ ಮಿಲನಕ್ಕೆ ಮತ್ತು ಅವರು ಪರಸ್ಪರರನ್ ಆಕರ್ಷಿಸುವುದಕ್ಕೆ ಇಷ್ಟೆಲ್ಲಾ ಪ್ರತಿಬಂಧಗಳು ಸಮಾಜದಲ್ಲಿರುವಾಗಲೂ ಅವುಗಳನ್ನೆಲ್ಲಾ ಮುರಿದು ವಿವಾಹೇತರ ಲೈಂಗಿಕ ಕ್ರಿಯೆಯಲ್ಲಿ ಏರ್ಪಡುವ ಅಥವಾ ವ್ಯಭಿಚಾರವೆಸಗುವ ಸ್ತ್ರೀ-ಪುರುಷರಿಗೆ ಇಸ್ಲಾಮ್ ಅತ್ಯುಗ್ರವಾದ ಶಿಕ್ಷೆಯನ್ನೂ ವಿಧಿಸಿದೆ. ಅವಿವಾಹಿತರಾದ ವ್ಯಭಿಚಾರಿಗಳಿಗೆ ನೂರು ಛಡಿಯೇಟು ಬಾರಿಸಬೇಕೆಂದೂ ವಿವಾಹಿತ ವ್ಯಭಿಚಾರಿಗಳನ್ನು ಕಲ್ಲೇಟಿನಿಂದ ವಧಿಸಬೇಕೆಂದೂ ಇಸ್ಲಾಮ್ ಆಜ್ಞಾಪಿಸಿದೆ.

ಸ್ತ್ರೀ-ಪುರುಷರು ಕಡ್ಡಾಯವಾಗಿ ಮುಚ್ಚಿಕೊಳ್ಳಲೇಬೇಕಾದ ಅಂಗಾಂಗಗಳ ವಿವರ ಗಳನ್ನು ಇಸ್ಲಾಮ್ ಸ್ಪಷ್ಟವಾಗಿ ನೀಡಿದೆ. ಪುರುಷರು ಮೊಣಕಾಲಿನಿಂದ ಹೊಕ್ಕುಳದ ವರೆಗಿನ ದೇಹ ಭಾಗವನ್ನು ಸದಾ ಮುಚ್ಚಿರಬೇಕು. ತನ್ನ ಪತ್ನಿಯ ಹೊರತು ಯಾವುದೇ ಸ್ತ್ರೀ ಅಥವಾ

ರುಷರ ಮುಂದೆಯೂ ಅದನ್ನು ತೆರೆಯುವ ಅನುಮತಿ ಆತನಿಗಿಲ್ಲ. ಸ್ತ್ರೀಯು ಮುಖ ತ್ತು ಅಂಗೈಗಳನ್ನು ಹೊರತು ಪಡಿಸಿ ತನ್ನ ಸಂಪೂರ್ಣ ದೇಹವನ್ನು ಮುಚ್ಚಿಕೊಳ್ಳಬೇಕು. ದನ್ನು ಆಕೆ ತನ್ನ ಗಂಡನ ಹೊರತು ಇತರ ಯಾರಿಗೂ ಕಾಣದಂತೆ ಮುಚ್ಚಿಕೊಂಡಿರಬೇಕು. ಈ ನಿಯಮಗಳು ಸ್ತ್ರೀಯು ಪ್ರಬುದ್ಧಳಾದಂದಿನಿಂದ (ಋತುಮತಿಯಾದಂದಿನಿಂದ) ಆಕೆ ಲೈಂಗಿಕ ಆಕರ್ಷಣೆ ಕಳೆದುಕೊಳ್ಳುವ ಮುದಿ ಪ್ರಾಯಕ್ಕೆ ತಲುಪುವ ತನಕ ಕಡ್ಡಾಯವಾಗಿದೆ.

ವಿವಾಹ ನಿಷಿದ್ಧ ಸಂಬಂಧಿಗಳೆನಿಸಿದ ಸ್ತ್ರೀಯರು ತಮ್ಮ ಸಂಬಂಧಿಕ ಪುರುಷರ ಜೊತೆ ಹೇಗೆ ವ್ಯವಹರಿಸಬೇಕು ಮತ್ತು ಇತರ ಪುರುಷರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬ ನಿಯಮಗಳ ಸಮಾಹಾರವನ್ನೇ ಪರ್ದಾ ಅಥವಾ ಹಿಜಾಬ್ ಎನ್ನುತ್ತಾರೆ. ಈ ಬಗ್ಗೆ ಪವಿತ್ರ ಕುರ್‌ಆನಿನ ಆದೇಶ ಈ ರೀತಿ ಇದೆ:

"ಓ ಪ್ರವಾದಿಗಳೇ, ನಿಮ್ಮ ಪತ್ನಿಯರಿಗೂ ಪುತ್ರಿಯರಿಗೂ ಸತ್ಯವಿಶ್ವಾಸಿಗಳಾದ ಸ್ತ್ರೀಯರಿಗೂ ತಮ್ಮ ಚಾದರಗಳನ್ನು ಹೊದ್ದು ಕೊಳ್ಳುವಂತೆ ಆಜ್ಞಾಪಿಸಿರಿ. ಇದು ಅವರು ಗುರುತಿಸಲ್ಪ ಡಲು ಮತ್ತು ಸತಾಯಿಸಲ್ಪಡದಿರಲು ಉತ್ತಮ ವಿಧಾನವಾಗಿದೆ. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುವನು." (ಪವಿತ್ರ ಕುರ್‌ಆನ್: 33: 59)

ಸ್ತ್ರೀಯು ತನ್ನ ಅಲಂಕಾರವನ್ನು ಪತಿ, ವಿವಾಹ ನಿಷಿದ್ಧ ಬಂಧುಗಳು, ಸೇವಕರು, ಎಳೆಯ ಬಾಲಕರು ಮತ್ತು ಇತರ ಸ್ತ್ರೀಯರ ಮುಂದೆ ಮಾತ್ರ ಪ್ರದರ್ಶಿಸಬಹುದು. ಈ ಸೀಮಿತ ವಲಯದಿಂದ ಹೊರಗಿರುವ ಎಲ್ಲ ಪುರುಷರ ಮುಂದೆಯೂ ಸ್ತ್ರೀಯು ಪರ್ದಾ ನಿಯಮವನ್ನು ಪಾಲಿಸಲೇಬೇಕು. ಈ ನಿರ್ಬಂಧವು ಯಾವುದೇ ರೀತಿಯಲ್ಲಿ ಸ್ತ್ರೀ ಸ್ವಾತಂತ್ರ್ಯ ಹರಣವಾಗಿರದೆ ಆಕೆಯ ಮಾನ ಮರ್ಯಾದೆಯನ್ನು ರಕ್ಷಿಸಿ ಸಮಾಜವನ್ನು ಅಶ್ಲೀಲತೆ, ಅನೈತಿಕತೆ ಮತ್ತು ಕೆಡುಕುಗಳಿಂದ ರಕ್ಷಿಸುವ ಉತ್ತಮ ಮಾಧ್ಯಮವೆಂಬುದು ನಿಷ್ಪಕ್ಷಮತಿಗಳಿಗೆ ಮೇಲಿನ ವಿವರಣೆಗಳಿಂದ ಸ್ಪಷ್ಟವಾಗಬಹುದು.

❖ ❖ ❖ ❖

ಅಧ್ಯಾಯ: ಹನ್ನೆರಡು

ಸ್ತ್ರೀ: ಶಿಕ್ಷಣ ಮತ್ತು ಇತರ ಹಕ್ಕುಗಳ

ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಪಡೆಯಲು ಸ್ತ್ರೀಯರಿಗೆ ಅನುಮತಿ ನೀಡಲಾಗಿ ವುದು ಮಾತ್ರವಲ್ಲ, ಸ್ತ್ರೀ ಶಿಕ್ಷಣಕ್ಕೂ ಪುರುಷರ ಶಿಕ್ಷಣದಷ್ಟೆ ಮಹತ್ವವನ್ನು ಇಸ್ಲಾಮ ಕಲ್ಪಿಸಿದೆ. ಪುರುಷರಂತೆ ಸ್ತ್ರೀಯರೂ ಪ್ರವಾದಿಯವರಿಂದ(ಸ) ಧಾರ್ಮಿಕ ಮತ್ತು ನೈತಿ ಶಿಕ್ಷಣವನ್ನು ಪಡೆಯುತ್ತಿದ್ದರು. ಆದರೆ ಸ್ತ್ರೀಯರ ಶಿಕ್ಷಣಕ್ಕಾಗಿ ಪ್ರತ್ಯೇಕ ವ್ಯವಸ್ಥೆಯನ ಮಾಡಲಾಗಿತ್ತು. ಅದೇ ರೀತಿ ಪ್ರವಾದಿಯ ಪತ್ನಿಯರು ಅದರಲ್ಲಿಯೂ ವಿಶೇಷವಾಗಿ ಪ್ರವಾ ಪತ್ನಿ ಹ. ಆಯಿಶಾರವರು(ರ) ಸ್ತ್ರೀಯರಂತೆ ಪುರುಷರಿಗೂ ಕಲಿಸುತ್ತಿದ್ದರು. ಪ್ರವಾದಿಯವರ(ಸ ಅನೇಕ ಸಂಗಾತಿಗಳು ಮತ್ತು ಅವರ ನಂತರದ ಅನುಯಾಯಿಗಳೂ ಹ. ಆಯಿಶಾರಿಂದ(ರ ಕುರ್‌ಆನ್, ಹದೀಸ್, ಇಸ್ಲಾಮೀ ನ್ಯಾಯಶಾಸ್ತ್ರ ಮತ್ತು ಕರ್ಮಶಾಸ್ತ್ರಗಳನ್ನು ಕಲಿತಿದ್ದರು

ಶಿಕ್ಷಣ ತರಬೇತಿಗಳನ್ನು ನೀಡುವುದರಲ್ಲಿ ಸ್ತ್ರೀ-ಪುರುಷರಲ್ಲಿ ಭೇದಭಾವ ಮಾಡಬಾ ದೆಂದು ಇಸ್ಲಾಮ್ ಸ್ಪಷ್ಟಪಡಿಸುತ್ತದೆ. ಆದರೆ ಸ್ತ್ರೀ-ಪುರುಷರಿಗೆ ಒಂದೇ ರೀತಿಯ ಶಿಕ್ಷ ತರಬೇತಿಯನ್ನು ನೀಡಬೇಕೆಂದು ಮಾತ್ರ ಅದು ಬಯಸುವುದಿಲ್ಲ. ಇಸ್ಲಾಮಿನ ದೃಷ್ಟಿಯಲ ಸ್ತ್ರೀಯನ್ನು ಉತ್ತಮ ಮಗಳಾಗಿಯೂ, ಸೋದರಿಯಾಗಿಯೂ, ಗೃಹಿಣಿಯಾಗಿಯೂ, ಮಾ ಯಾಗಿಯೂ ಮಾರ್ಪಡಿಸುವ ಶಿಕ್ಷಣವೇ ಉತ್ಕೃಷ್ಟ ಶಿಕ್ಷಣವಾಗಿದೆ. ಅವಳ ಕಾರ್ಯ ಕ್ಷೇತ್ರ ಮನೆಯೇ ಎಂಬುದನ್ನು ಮರೆಯಬಾರದು. ಆದ್ದರಿಂದ ಆ ಕ್ಷೇತ್ರದಲ್ಲಿ ಆಕೆ ಹೆಚ ಉಪಯುಕ್ತ ಮತ್ತು ದಕ್ಷಳಾಗುವಂತೆ ಮಾಡುವ ಶಿಕ್ಷಣವೇ ಆಕೆಯ ಮಟ್ಟಿಗೆ ಹೆಚ ಪರಿಣಾಮಕಾರಿಯಾಗಿದೆ. ಮಾತ್ರವಲ್ಲ ಆಕೆ ನೈತಿಕತೆ, ಸಂಸ್ಕೃತಿ, ಇತಿಹಾಸ, ಆರೋಗ್ಯ ಜ್ಞಾನ, ವಿಜ್ಞಾನಗಳಲ್ಲಿಯೂ ಉತ್ತಮ ತಿಳುವಳಿಕೆ ಹೊಂದಿ ಉತ್ತಮ ಗೃಹಿಣಿಯ ಜೊತೆ ಉತ್ತಮ ಪ್ರಜೆಯೂ ಉತ್ತಮ ಮಾನವಳೂ ಆಗುವಂತೆ ಮಾಡುವ ಶಿಕ್ಷಣ ಆಕೆ ಅಗತ್ಯವಾಗಿದೆ. ಅವರವರಿಗೆ ಅಭಿರುಚಿ ಇರುವ ಇತರ ವಿಜ್ಞಾನ ಕ್ಷೇತ್ರದಲ್ಲಿಯೂ ಹೆಚ್ಚಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡಬೇಕು. ಆದರೆ ಶಿಕ್ಷಣ ಪಡೆಯುವಾಗ ಅವ ಇಸ್ಲಾಮಿನಲ್ಲಿ ಸ್ಪಷ್ಟಪಡಿಸಲಾಗಿರುವ ನೈತಿಕ ಮತ್ತು ಸಾಮಾಜಿಕ ನಿಯಮಗಳನ ಪಾಲಿಸಬೇಕಾದುದಗತ್ಯ.

ಪ್ರತ್ಯೇಕ ಶಿಕ್ಷಣ ವ್ಯವಸ್ಥೆ

ಪ್ರಾಥಮಿಕ ಮಟ್ಟದಲ್ಲೇ ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸ ಬೇಕಾದುದು ಇಸ್ಲಾಮಿನ ಬೇಡಿಕೆಯಾಗಿದೆ. ಕನಿಷ್ಠಪಕ್ಷ ಪ್ರೌಢಶಾಲಾ ಮಟ್ಟದಲ್ಲಾದರೂ ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣದ ಏರ್ಪಾಡು ಬೇಕೇ ಬೇಕು. ಆ ಮಟ್ಟದಲ್ಲಿ ಸಹ-ಶಿಕ್ಷಣದ ಸಂಪ್ರದಾಯವನ್ನು ಇಸ್ಲಾಮ್ ಒಪ್ಪುವುದೇ ಇಲ್ಲ. ಇಂದು ಮುಸ್ಲಿಮ್ ಸ್ತ್ರೀಯರು ಶಿಕ್ಷಣದ ಬಗ್ಗೆ ಅಲಕ್ಷ್ಯ ತೋರುತ್ತಿರುವುದಕ್ಕೆ ಇಸ್ಲಾಮಿನ ಬಗೆಗಿನ ಅವರ ಜ್ಞಾನದ ಕೊರತೆಯ ಜೊತೆಗೆ ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣದ ಏರ್ಪಾಟಿನ ಕೊರತೆಯೂ ಒಂದು ಪ್ರಮುಖ ಕಾರಣವಾಗಿದೆ.

ಸ್ತ್ರೀಯರನ್ನು ಅತ್ಯಂತ ಹೀನಾಯವಾಗಿ, ತುಚ್ಛವಾಗಿ, ಪಾಪದ ಪ್ರತೀಕವಾಗಿ, ಅಧರ್ಮ- ಅನೀತಿಯ ಪ್ರೇರಕವಾಗಿ ಕಾಣುತ್ತಿದ್ದ ಬಗ್ಗೆ ಇತಿಹಾಸದಲ್ಲಿ ಅನೇಕ ಆಧಾರ ಗಳಿವೆ. ಅನೇಕ ದೇಶಗಳಲ್ಲಂತೂ ತನಗೆ ಹೆಣ್ಣು ಮಗು ಹುಟ್ಟಿದ ಸುದ್ದಿ ತಿಳಿಯುತ್ತಲೇ ತಂದೆಯು ನಾಚಿಕೆಯಿಂದ ತಲೆ ತಗ್ಗಿಸುವ ಮತ್ತು ಅದನ್ನು ಜೀವಂತ ಹೂಳುವ ಮೂಲಕ ಅಥವಾ ಇನ್ನಾವುದೇ ವಿಧಾನದಿಂದ ಕೊಂದು ಹಾಕುವ ಮೂಲಕ ಆ ಅವಮಾನದಿಂದ ಪಾರಾಗುವ ಅಮಾನುಷ ರೂಢಿ ಸಾಮಾನ್ಯವಾಗಿತ್ತು. ನಿರಕ್ಷರಿ ಮತ್ತು ಅಜ್ಞಾನಿಗಳ ವಿಷಯ ವಂತಿರಲಿ, ಜ್ಞಾನಿಗಳೂ ಧರ್ಮ ಧುರೀಣರೂ ಅನೇಕ ಶತಮಾನಗಳ ತನಕ ಸ್ತ್ರೀಯರನ್ನು ಮಾನವಳಾಗಿ ಕಾಣಬೇಕೆ, ಆಕೆಗೂ ಆತ್ಮ ಇದೆಯೇ ಎಂಬುದನ್ನು ಕೂಡಾ ನಿಖರವಾಗಿ ಹೇಳುವ ಸ್ಥಿತಿಯಲ್ಲಿರಲಿಲ್ಲ.

ಸ್ತ್ರೀ ಪಾಪ ಜನನಿಯೇ?

ಸ್ತ್ರೀಯು ಶಿಕ್ಷಣಕ್ಕೆ ಅನರ್ಹಳೆಂದೂ ಸ್ತ್ರೀ ಸಂಪರ್ಕ ಪಡೆದವರಿಗೆ ಮೋಕ್ಷವಿಲ್ಲವೆಂದೂ ಎಲ್ಲಾ ಪಾಪಗಳಿಗೂ ಸ್ತ್ರೀಯೇ ಪ್ರೇರಕ ಶಕ್ತಿಯೆಂದೂ ಅನೇಕ ಧರ್ಮಗಳಲ್ಲಿ ನಂಬ ಲಾಗಿತ್ತು. ಎಲ್ಲಾ ರೀತಿಯ ಗೌರವ, ಅಧಿಕಾರಗಳಿಂದ ವಂಚಿತಳಾಗಿ ಗುಲಾಮಗಿರಿಯ ಜೀವನ ನಡೆಸಲು ಆಕೆ ನಿರ್ಬಂಧಿತಳಾಗಿದ್ದಳು. ತನ್ನ ಗಂಡನನ್ನೇ ದೇವರೆಂದು ಬಗೆದು ಆತನನ್ನು ಪೂಜಿಸುವುದು ಮತ್ತು ಆತನ ಸರ್ವಾಂಗೀಣ ಸೇವೆ ಮಾಡುತ್ತಿರುವುದು ತನ್ನ ಧರ್ಮವೆಂದು ಭಾವಿಸಿದ್ದಳು.

ಮಹಿಳೆಯ ಈ ದುಸ್ಥಿತಿಯನ್ನು ಅತ್ಯಂತ ಕ್ರಾಂತಿಕಾರಿ ರೀತಿಯಲ್ಲಿ ನ್ಯಾಯ ಸಮ್ಮತವೂ ವ್ಯಾವಹಾರಿಕವೂ ತರ್ಕಬದ್ಧವೂ ಎನಿಸುವಂತೆ ಬದಲಾಯಿಸಿದ ಶ್ರೇಯಸ್ಸು ಇಸ್ಲಾಮ್ ಧರ್ಮಕ್ಕೆ ಸಲ್ಲುತ್ತದೆ. ಇಸ್ಲಾಮ್ ಸ್ತ್ರೀ-ಪುರುಷ ಮನೋಭಾವವನ್ನೇ ಆಮೂಲಾಗ್ರವಾಗಿ ಬದಲಾಯಿಸಿದೆ. ಸ್ತ್ರೀಗೆ ಸಮಾಜದಲ್ಲಿ ಎಲ್ಲಾ ರೀತಿಯ ಹಕ್ಕು ಬಾಧ್ಯತೆ ಗಳನ್ನೂ ಗೌರವಾದರದ ಸ್ಥಾನಮಾನಗಳನ್ನೂ ನೀಡಬೇಕೆಂದು ಇಸ್ಲಾಮ್ ಆಜ್ಞಾಪಿಸಿದೆ.

ಆಧುನಿಕ ಯುಗದಲ್ಲಿ ಆಗಾಗ ಕೇಳಿಬರುತ್ತಿರುವ 'ಸ್ತ್ರೀ ಸ್ವಾತಂತ್ರ್ಯ', 'ಸ್ತ್ರೀ ಶಿಕ್ಷಣ', 'ಸ್ತ್ರೀ ಪುರುಷ ಸಮಾನತೆ', 'ಸ್ತ್ರೀ ವಿಮೋಚನೆ'ಯ ಕೂಗು ಪ್ರವಾದಿ ಮುಹಮ್ಮದ್(ಸ) ಹದಿನಾಲ್ಕು ಶತಮಾನಗಳ ಹಿಂದೆಯೇ ನೀಡಿದ ಕರೆಯ ಪ್ರತಿಧ್ವನಿಯಾಗಿದೆ. ಸ್ತ್ರೀಯೂ ಪುರುಷನಷ್ಟೆ ಮಾನವೀಯ ಅಂಶಗಳನ್ನು ಪಡೆದವಳೆಂಬುದನ್ನು ಅವರು ಜಗತ್ತಿಗೆ ಸಾರಿ ಹೇಳಿದರು

ಸ್ತ್ರೀ-ಪುರುಷ ಸಮಾನತೆ

"ಜನರೇ, ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀ-ಪುರುಷರನ್ನು ಲೋಕದಲ್ಲಿ ಹುಟ್ಟಿಸಿದನು.

(ಪವಿತ್ರ ಕುರ್‌ಆನ್: 4: 1

ದೇವನು ಸ್ತ್ರೀ-ಪುರುಷರಲ್ಲಿ ವ್ಯತ್ಯಾಸ ಕಾಣುವುದಿಲ್ಲವೆಂಬುದಕ್ಕೆ ಪವಿತ್ರ ಕುರ್‌ಆನಿನ ಈ ಕೆಳಗಿನ ಸೂಕ್ತವು ಸಾಕ್ಷಿಯಾಗಿದೆ-

"ಪುರುಷರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ, ಸ್ತ್ರೀಯರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ." (ಪವಿತ್ರ ಕುರ್‌ಆನ್: 4: 32)

ವಿಶ್ವಾಸ, ಶ್ರದ್ಧೆ, ಸತ್ಕಾರ್ಯ, ಸದ್ಗುಣಗಳ ಫಲವಾಗಿ ಪುರುಷರು ಉನ್ನತ ಸ್ಥಾನಮಾನಗಳನ್ನು ಪಡೆಯಬಹುದಾದರೆ ಸ್ತ್ರೀಯರೂ ಅದೇ ತೆರನಾಗಿ ಪಡೆಯಬಲ್ಲರು.

"ನಾನು ನಿಮ್ಮಲ್ಲಿ ಯಾರೊಬ್ಬನ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷರಾಗಲಿ, ಸ್ತ್ರೀಯರಾಗಲಿ ನೀವೆಲ್ಲಾ ಒಂದೇ ವರ್ಗದವರು. ಆದುದರಿಂದ ಯಾರು ನನಗಾಗಿ ದೇಶ ತ್ಯಾಗ ಮಾಡಿದರೋ ನನ್ನ ಮಾರ್ಗದಲ್ಲಿ ತಮ್ಮ ಮನೆಮಾರುಗಳಿಂದ ಹೊರಹಾಕಲ್ಪಟ್ಟರೋ ಸತಾಯಿಸಲ್ಪಟ್ಟರೋ ನನಗಾಗಿ ಹೋರಾಟ ನಡೆಸಿದರೋ ಮತ್ತು ವಧಿಸಲ್ಪಟ್ಟರೋ ಅವರೆಲ್ಲರ ಅಪರಾಧಗಳನ್ನು ನಾನು ಕ್ಷಮಿಸಿ ಬಿಡುವೆನು ಮತ್ತು ಅವರಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಲ್ಲಿ ಪ್ರವೇಶ ಕೊಡುವೆನು."

(ಪವಿತ್ರ ಕುರ್‌ಆನ್: 3: 195)

"ಪುರುಷನಿರಲಿ ಸ್ತ್ರೀ ಇರಲಿ ಸತ್ಕರ್ಮ ಮಾಡುವವರು ಸತ್ಯವಿಶ್ವಾಸಿಗಳಾಗಿದ್ದರೆ, ಇಂತಹವರೇ ಸ್ವರ್ಗದಲ್ಲಿ ಪ್ರವೇಶ ಪಡೆಯುವರು. ಕಿಂಚಿತ್ತೂ ಇವರ ಹಕ್ಕುಚ್ಯುತಿಯಾಗಲಾರದು." (ಪವಿತ್ರ ಕುರ್‌ಆನ್: 4: 124)

ಪ್ರವಾದಿ ಮುಹಮ್ಮದ್‌ರವರು(ಸ) ಹೀಗೆ ಹೇಳಿರುವರು: "ಪುರುಷರು ತಮ್ಮ ಸ್ತ್ರೀಯರ ಮೇಲೆ ಅಧಿಕಾರ ಹೊಂದಿರುವಂತೆಯೇ ಸ್ತ್ರೀಯರೂ ತಮ್ಮ ಪುರುಷರ ಮೇಲೆ ಅಧಿಕಾರ ಹೊಂದಿದ್ದಾರೆ."

ಪವಿತ್ರ ಕುರ್‌ಆನ್ ಕೂಡಾ ಈ ವಿಷಯವನ್ನು ಈ ರೀತಿ ಸ್ಪಷ್ಟಪಡಿಸಿದೆ: "ಪುರುಷರಿಗೆ ೀಯರ ಮೇಲೆ ಹಕ್ಕಿರುವ ಹಾಗೆಯೇ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಕ್ಕು ಇದೆ." (ಪವಿತ್ರ ಕುರ್‌ಆನ್: 2: 228)

ಸ್ತ್ರೀಯನ್ನು ಅವಮಾನ, ಅವಹೇಳನಗಳ ಸ್ಥಿತಿಯಿಂದ ಮೇಲೆತ್ತಿ ಅವಳಿಗೆ ಘನತೆ-ರವಗಳ ಸ್ಥಾನವನ್ನು ಪ್ರವಾದಿ ಮುಹಮ್ಮದ್(ಸ) ದೊರಕಿಸಿ ಕೊಟ್ಟರು. ಹೆಣ್ಣು ಮಗುವಿನ ನನ ಅವಮಾನಕರವಲ್ಲವೆಂದೂ ಅದನ್ನು ಬೆಳೆಸಿ ವಿದ್ಯಾಭ್ಯಾಸ, ತರಬೇತಿ ನೀಡಿ ಮದುವೆ ಾಡಿಕೊಡುವುದು ತಂದೆಯ ಮೋಕ್ಷಕ್ಕೆ ಮಾರ್ಗವೆಂದೂ ಅವರು ತಿಳಿಸಿದರು. ಅಲ್ಲಾಹನ ಳಿಕ ಮನುಷ್ಯನ ಪಾಲಿಗೆ ತನ್ನ ತಾಯಿಯೇ ಅತ್ಯಧಿಕ ಗೌರವಾದರ ಗಳಿಗೆ ಪಾತ್ರಳು ಎಂದು ವಾದಿ ಮುಹಮ್ಮದ್(ಸ) ಬಹಳ ಒತ್ತುಕೊಟ್ಟು ಹೇಳಿರುವರು. "ತಾಯಿಯ ಪಾದದಡಿ ರ್ಗ ವಿದೆಯೆಂದೂ ಈ ಜಗತ್ತಿನ ಅತ್ಯುತ್ತಮ ಅನುಗ್ರಹ ಓರ್ವ ಗುಣವತಿಯಾದ ತ್ನಿಯೆಂದೂ" ಹೇಳುವ ಮೂಲಕ ಪ್ರವಾದಿ ಮುಹಮ್ಮದ್(ಸ) ಸ್ತ್ರೀಗೆ ಅತ್ಯುನ್ನತ ್ಥಾನಮಾನವನ್ನು ಒದಗಿಸಿ ಕೊಟ್ಟರು.

ಇಸ್ಲಾಮಿನಲ್ಲಿ ಸ್ತ್ರೀಯರಿಗೆ ಆಸ್ತಿಯ ಹಕ್ಕು; ತನ್ನ ತಂದೆ, ಪತಿ ಹಾಗೂ ಮಕ್ಕಳ ಂತ್ತಿನಲ್ಲಿ ವಾರೀಸು ಹಕ್ಕು; ಸ್ವತಂತ್ರವಾಗಿ ಸಂಪತ್ತನ್ನು ಹೊಂದುವ, ವಿನಿಯೋಗಿಸುವ ುತ್ತು ಅದನ್ನು ಲಾಭದಾಯಕ ವ್ಯಾಪಾರದಲ್ಲಿ ತೊಡಗಿಸುವ ಹಕ್ಕನ್ನೂ ನೀಡಲಾಗಿದೆ.

❖ ❖ ❖ ❖

ಅಧ್ಯಾಯ: ಹದಿಮೂರು

ತಲಾಕ್‌ನ ಸರಿಯಾದ ಕ್ರಮ

ತಲಾಕ್ ಅಥವಾ ವಿವಾಹ ವಿಚ್ಛೇದನವು ಒಂದು ಅರೋಚಕ ಮತ್ತು ಅಪ್ರಿಯ ಕ್ರಿಂ ಎಂಬುದು ನಿರ್ವಿವಾದ. ಆದರೂ ಅದು ಮನುಷ್ಯ ಸಮಾಜದ ಒಂದು ಅನಿವಾರ್ಯತ ತಲಾಕ್‌ನ ದ್ವಾರವು ಮುಚ್ಚಲ್ಪಟ್ಟರೆ ಪತಿಯು ತನಗೆ ಒಲ್ಲದ ಪತ್ನಿಯಿಂದ ಮುಕ್ತಿ ಪಡೆಯಲ ಅವಳನ್ನು ವಿಷ ಹಾಕಿ, ಕತ್ತು ಹಿಸುಕಿ, ಸುಟ್ಟು ಹಾಕಿ ಅಥವಾ ಇನ್ನಾವುದೇ ವಿಧಾನದಿಂ ಸಾಯಿಸುತ್ತಾನೆ. ಇಲ್ಲವೆ ಅವಳ ಹಕ್ಕು ಬಾಧ್ಯತೆಗಳನ್ನು ಪೂರೈಸದೆ ಆಕೆಯನ್ನು ಜೀವನದಾದ್ಯಂ ತ್ರಿಶಂಕು ಸ್ಥಿತಿಯಲ್ಲಿ ಹಾಕಿಡುತ್ತಾನೆ. ಹೀಗೆ ಆ ಬಡಪಾಯಿ ಮರಣಕ್ಕಿಂತಲೂ ಅಸಹ್ಯವಾ ಜೀವನ ಸಾಗಿಸಲು ನಿರ್ಬಂಧಿತಳಾಗುತ್ತಾಳೆ. ಈ ಅನಾಹುತಗಳಿಂದ ಆಕೆಯನ್ನು ರಕ್ಷಿಸು ಸಲುವಾಗಿ ಇಸ್ಲಾಮ್ ತಲಾಕ್‌ನ ವ್ಯವಸ್ಥೆಯನ್ನು ಇರಿಸಿದೆ. ಅದು ಪತಿ-ಪತ್ನಿಯರು ಕೊ ತನಕವೂ ಪರಸ್ಪರ ಸಾಮರಸ್ಯದಿಂದ ಹಾಲು-ಜೇನಿನಂತೆ ಬಾಳಲು ಬೇಕಾದ ಬೋಧನೆಗಳನ ನೀಡಿದೆ. ಆದರೂ ಒಂದು ವೇಳೆ ಪತಿಗೆ ತನ್ನ ಪತ್ನಿಯೊಂದಿಗೆ ದಾಂಪತ್ಯ ಜೀವ ಮುಂದುವರಿಸುವುದು ಸಾಧ್ಯವೇ ಇಲ್ಲ ಎಂದು ಮನಗಂಡಾಗ ಆಕೆಯನ್ನು ಅತ್ಯುತ್ತಮ ರೀತಿಯಲ್ಲಿ ಬಿಡುಗಡೆಗೊಳಿಸುವಂತಾಗಲು ಇಸ್ಲಾಮ್ ತೋರಿಸಿರುವ ವಿಧಾನವೇ ತಲಾಕ್

ತಲಾಕ್‌ನ ನಿಯಮಗಳು

ತಲಾಕ್ ಯಾವಾಗ ನೀಡಬಹುದು? ಹೇಗೆ ನೀಡಬೇಕು? ಅದಕ್ಕಿರುವ ನಿಬಂಧ ಗಳೇನು? ಅದರಿಂದುಂಟಾಗುವ ಸಮಸ್ಯೆಗಳನ್ನು ಹೇಗೆ ನಿವಾರಿಸಬಹುದು? ಎಂಬಿತ್ಯಾ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲು ಪ್ರಯತ್ನಿಸಲಾಗಿದೆ:

ಪವಿತ್ರ ಕುರ್‌ಆನ್ ತಲಾಕ್‌ನ ಕುರಿತು ಈ ರೀತಿ ಹೇಳುತ್ತದೆ:

"ತಲಾಕ್ ಎರಡು ಸಲ, ಅನಂತರ ನ್ಯಾಯೋಚಿತವಾಗಿ ಸ್ತ್ರೀಯನ್ನು ತಡೆದಿರಿ ಕೊಳ್ಳಬೇಕು ಅಥವಾ ಯೋಗ್ಯ ರೀತಿಯಲ್ಲಿ ಅವಳನ್ನು ಬಿಡುಗಡೆಗೊಳಿಸಬೇಕು. ಬಿಡುಗ ಗೊಳಿಸುವಾಗ ನೀವು ಈ ಹಿಂದೆ ಪತ್ನಿಯರಿಗೆ ಕೊಟ್ಟಿದ್ದ ಸಾಧನಗಳ ಪೈಕಿ ಏನನ್ನೂ ಮರ ಪಡೆಯುವುದು ನಿಮಗೆ ಧರ್ಮಸಮ್ಮತವಲ್ಲ. ದಂಪತಿಗಳಿಗೆ, ತಾವು ಅಲ್ಲಾಹನ ಮೇರೆಗಳಲ್ಲಿ

ನಿಲ್ಲಲು ಅಸಾಧ್ಯವಾದೀತೆಂಬ ಸಂದೇಹವುಂಟಾಗುವ ಸ್ಥಿತಿಯು ಇದಕ್ಕೆ ಹೊರತಾಗಿದೆ. ತಹ ಸ್ಥಿತಿಯಲ್ಲಿ ಅವರಿಬ್ಬರೂ ಅಲ್ಲಾಹನ ಮೇರೆಗಳಲ್ಲೇ ನೆಲೆ ನಿಲ್ಲಲಾರರೆಂದು ನಿಮಗೆ ಕಿಯುಂಟಾದಾಗ ಸ್ತ್ರೀಯು ತನ್ನ ಪತಿಗೆ ಏನಾದರೂ ಪರಿಹಾರ ಕೊಟ್ಟು ಬಿಡುಗಡೆ ಂದುವುದರಲ್ಲಿ ದೋಷವಿಲ್ಲ. ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಮೇರೆಗಳಿವು. ಇವುಗಳನ್ನು ಲ್ಲಂಘಿಸಬೇಡಿರಿ. ಅಲ್ಲಾಹನ ಮೇರೆಗಳನ್ನು ಯಾರಾದರೂ ಮೀರಿದರೆ ಅವರೇ ಅಕ್ರಮಿಗಳು."

"ಮತ್ತು (ಪತಿಯು ಎರಡು ಸಲ ತಲಾಕ್ ಕೊಟ್ಟ ಬಳಿಕ ಮೂರನೇ ಸಲವೂ) ತಲಾಕ್ ಟ್ಟು ಬಿಟ್ಟರೆ ಆ ಸ್ತ್ರೀಯ ನಿಕಾಹ್ ಇನ್ನೊಬ್ಬನೊಂದಿಗೆ ಆಗಿ ಅವನು ತಲಾಕ್ ಕೊಡುವ ; ಅವಳು ಪುನಃ ಮೊದಲಿನ ಪತಿಗೆ ಹಲಾಲ್ ಆಗಲಾರಳು. ಆಗ (ದ್ವಿತೀಯ ಪತಿ ಕ್ ಕೊಟ್ಟಾಗ) ಮೊದಲಿನ ಪತಿಯೂ ಈ ಸ್ತ್ರೀಯೂ ತಾವು ಅಲ್ಲಾಹನ ಮೇರೆಯೊಳಗೆ ವೆವೆಂದು ಭಾವಿಸುವುದಾದರೆ, ಅವರು ಪರಸ್ಪರ ಒಲಿದುಕೊಳ್ಳುವುದರಲ್ಲಿ ದೋಷವಿಲ್ಲ. ಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಮೇರೆಗಳಿವು. (ಅವನ ಮೇರೆಗಳನ್ನು ಮೀರುವುದರ ಣಾಮವನ್ನು) ತಿಳಿದಿರುವವರ ಮಾರ್ಗದರ್ಶನಕ್ಕಾಗಿ ಅವನು ಇವುಗಳನ್ನು ಅಭಿವ್ಯಕ್ತ ಳಿಸುತ್ತಾನೆ."

"ನೀವು ಸ್ತ್ರೀಯರಿಗೆ ತಲಾಕ್ ಕೊಟ್ಟು ಅವರ 'ಇದ್ದತ್' ಪೂರ್ಣಗೊಳ್ಳಲು ಸಮೀಪಿಸಿದಾಗ ರನ್ನು ನ್ಯಾಯೋಚಿತ ರೀತಿಯಲ್ಲಿ ಇರಿಸಿಕೊಳ್ಳಿರಿ ಇಲ್ಲವೇ ನ್ಯಾಯೋಚಿತ ರೀತಿಯಿಂದ ಗಡೆಗೊಳಿಸಿರಿ. ಕೇವಲ ಸತಾಯಿಸಲಿಕ್ಕಾಗಿ ಅವರನ್ನು ತಡೆದಿರಿಸಿಕೊಂಡರೆ ಅದು ಕ್ರಮವಾಗುವುದು. ಹೀಗೆ ಮಾಡಿದಾತನು ವಾಸ್ತವದಲ್ಲಿ ತನ್ನ ಮೇಲೆ ತಾನೇ ಮವೆಸಗುವನು. ಅಲ್ಲಾಹನ ಸೂಕ್ತಗಳನ್ನು ಅಪಹಾಸ್ಯ ಮಾಡಬೇಡಿರಿ. ಅಲ್ಲಾಹನು ್ಮ ಮೇಲೆ ಎಷ್ಟು ದೊಡ್ಡ ಅನುಗ್ರಹ ಮಾಡಿರುತ್ತಾನೆಂಬುದನ್ನು ಮರೆಯದಿರಿ. ನಿಮ್ಮ ಲೆ ಇಳಿಸಿದ ಗ್ರಂಥ ಮತ್ತು ಸದ್ವಿವೇಕಗಳ ಗೌರವವನ್ನು ಕಾಪಾಡಬೇಕೆಂದು ಅವನು ಗೆ ಉಪದೇಶಿಸುತ್ತಾನೆ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನಿಗೆ ಸರ್ವ ವಿಷಯಗಳ ವಿದೆ ಎಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ."

"ನೀವು ನಿಮ್ಮ ಪತ್ನಿಯರಿಗೆ ತಲಾಕ್ ಕೊಟ್ಟ ಬಳಿಕ ಅವರು ತಮ್ಮ ಇದ್ದತ್ ಪೂರ್ತಿ ಳಿಸಿಕೊಂಡಾಗ ತಮಗಿಷ್ಟ ಬಂದ ಪುರುಷರೊಂದಿಗೆ ವಿವಾಹ ಮಾಡಿಕೊಳ್ಳಲು ನ್ಯಾಯೋಚಿತ ಯಲ್ಲಿ ಒಪ್ಪಿಕೊಂಡರೆ ಅವರು ಪರಸ್ಪರ ನಿಕಾಹ್ ಮಾಡಿಕೊಳ್ಳುವುದನ್ನು ಅಡ್ಡಿಪಡಿಸ ದು. ನೀವು ಅಲ್ಲಾಹನ ಮೇಲೂ ಪರಲೋಕದ ಮೇಲೂ ವಿಶ್ವಾಸವಿಡುವವರಾಗಿದ್ದರೆ ೆ ಮಾಡಬಾರದೆಂದು ನಿಮಗೆ ಉಪದೇಶ ನೀಡಲಾಗುತ್ತಿದೆ. ನಿಮಗೆ ಸಭ್ಯವೂ ಶುದ್ಧವೂ ಆಗಿರುವ ನಡವಳಿಕೆ ಇದೇ ಆಗಿರುತ್ತದೆ. ಅಲ್ಲಾಹ್ ಬಲ್ಲವನು. ನೀವು ್ಲವರಲ್ಲ." (ಪವಿತ್ರ ಕುರ್‌ಆನ್: 2: 229-232)

ಪವಿತ್ರ ಕುರ್‌ಆನಿನ ಈ ಸೂಕ್ತಗಳ ಮೂಲಕ ಅಜ್ಞಾನ ಕಾಲದ ಅರಬರಲ್ಲಿದ್ದ ಒಂದು

ದುಷ್ಟ ಪದ್ಧತಿಯನ್ನು ಸುಧಾರಿಸಲು ಪ್ರಯತ್ನಿಸಲಾಗಿದೆ. ಆ ಪದ್ಧತಿಯ ಪ್ರಕಾರ ಅರ ತಮ್ಮ ಪತ್ನಿಯರಿಗೆ ಲೆಕ್ಕಮಿತಿ ಇಲ್ಲದಷ್ಟು ಸಲ ತಲಾಕ್ ಕೊಡುವ ಅಧಿಕಾರ ಹೊಂದಿದ್ದ ಪತ್ನಿಯೊಂದಿಗೆ ಏನಾದರೂ ವಿರಸವಾದೊಡನೆ ಪತಿಯು ಅವಳಿಗೆ ಆಗಾಗ ತಲಾಕ್ ಕೊ ಆ ಬಳಿಕ ಆಕೆಯನ್ನು ಮರಳಿ ಸ್ವೀಕರಿಸುತ್ತಿದ್ದನು. ಆ ಬಡಪಾಯಿ ಅವನೊಂ ಸಹಬಾಳುವೆ ನಡೆಸಲೂ ಬಾರದು ಮತ್ತು ಅವನಿಂದ ಮುಕ್ತವಾಗಿ ಇನ್ನೊಬ್ಬನೊಂ ವಿವಾಹ ಮಾಡಿಕೊಳ್ಳಲೂ ಸಾಧ್ಯವಾಗಬಾರದು ಎಂಬುದೇ ಇದರ ಉದ್ದೇಶವಾಗಿರುತ್ತಿ ಮೇಲೆ ಪ್ರಸ್ತಾಪಿಸಿದ ಪ್ರಥಮ ಸೂಕ್ತವು ಈ ಅಕ್ರಮದ ದ್ವಾರವನ್ನು ಮುಚ್ಚುತ್ತದೆ. ಅ ಪ್ರಕಾರ ಒಬ್ಬ ಪುರುಷನು ತನ್ನ ಪತ್ನಿಗೆ ಎರಡು ಸಲ ಮಾತ್ರ 'ಮರಳಿ ಸ್ವೀಕರಿಸಬಹು ತಲಾಕ್' ಕೊಡಬಹುದು. ಹಾಗೆ ಎರಡು ಸಲ ತಲಾಕ್ ಕೊಟ್ಟು ಮರಳಿ ಸ್ವೀಕರಿಸಿಕೊಂಡಾ ಅನಂತರ ತನ್ನ ಜೀವಮಾನದಲ್ಲಿ ಎಂದಾದರೂ ಮೂರನೆಯ ಸಲ ತಲಾಕ್ ಕೊಟ್ಟು ಬಿ ಆ ಸ್ತ್ರೀಯು ಅವನಿಂದ ಶಾಶ್ವತವಾಗಿ ಅಗಲುವಳು.

ಕುರ್‌ಆನ್ ಮತ್ತು ಪ್ರವಾದಿ ವಚನಗಳಿಂದ ತಿಳಿದುಬರುವಂತೆ ತಲಾಕ್‌ನ ಸರಿಯ ವಿಧಾನವೇನೆಂದರೆ ಸ್ತ್ರೀಗೆ ಅವಳು ಆರ್ತವದಲ್ಲಿಲ್ಲದ ಶುದ್ಧಾವಸ್ಥೆಯಲ್ಲಿ ಒಂದು ತಲಾಕ್ ಕೊಡಬೇಕು. ಅನಂತರ ತಲಾಕ್ ಕೊಡಬೇಕೆಂದಾದರೆ ಆರ್ತವದ ನಂತರ ಇನ್ನೊಂದು ತಲಾಕನ್ನು ಕೊಡಬಹುದು. ಅಲ್ಲವಾದರೆ ಮೊದಲನೆಯ ಒಂದೇ ತಲ ಸಾಕಾಗುತ್ತದೆ. ಆಗ ಇದ್ದತ್‌ನ ಅವಧಿ ಮುಗಿಯುವುದಕ್ಕಿಂತ ಮುಂಚೆ ಯುಕ್ತ ಕಂ ಆಕೆಯನ್ನು ಮರಳಿ ಸ್ವೀಕರಿಸುವ ಹಕ್ಕು ಪತಿಗಿರುತ್ತದೆ. ಇದ್ದತ್‌ನ ಅವಧಿ ಮು ಹೋದರೂ ಉಭಯತ್ರರು ಪರಸ್ಪರ ಒಪ್ಪಿಗೆ ಯಿಂದ ಪುನಃ ನಿಕಾಹ್ ಮಾಡಿಕೊಳ್ಳಬಹು ಆದರೆ ಮೂರನೆ ಶುದ್ಧಾವಸ್ಥೆಯಲ್ಲಿ ತೃತೀಯ ತಲಾಕನ್ನೂ ಕೊಟ್ಟು ಬಿಟ್ಟಾಗ ಪ ಆಕೆಯನ್ನು ಮರಳಿ ಸ್ವೀಕರಿಸುವ ಅವಕಾಶವಿರುವುದಿಲ್ಲ. ಇಬ್ಬರಿಗೆ ಪುನಃ ವಿ ಮಾಡಿಕೊಳ್ಳಲೂ ಸಾಧ್ಯವಿಲ್ಲ. ಅಜ್ಞಾನದಿಂದಾಗಿ ಸಾಮಾನ್ಯವಾಗಿ ಇಂದು ಮುಸ್ಲಿಮ ರೂಢಿಯಲ್ಲಿರುವಂತೆ ಒಂದೇ ಸಲಕ್ಕೆ ಮೂರು ತಲಾಕ್‌ಗಳನ್ನು ಕೊಟ್ಟು ಬಿಡುವ ಇಸ್ಲಾಮಿನ ಪ್ರಕಾರ ಮಹಾ ಪಾಪ ಕಾರ್ಯವಾಗಿದೆ. ಪ್ರವಾದಿ(ಸ) ಅದನ್ನು ಕಟು ಖಂಡಿಸಿದ್ದಾರೆ. ಹ. ಉಮರ್(ರ) ಏಕಕಾಲದಲ್ಲಿ ಮೂರು ತಲಾಕ್ ಕೊಟ್ಟಾ ಛಡಿಯೇಟಿನ ಶಿಕ್ಷೆ ವಿಧಿಸುತ್ತಿದ್ದರು.

ಉತ್ತಮ ಬೀಳ್ಕೊಡುಗೆ

ಪತಿಯು ತನ್ನ ಪತ್ನಿಗೆ ಈ ಹಿಂದೆ ಕೊಟ್ಟ ಆಭರಣ, ಬಟ್ಟೆ ಬರೆ ಇತ್ಯಾದಿಗಳ ಏನನ್ನೂ ಮರಳಿ ಕೇಳುವ ಹಕ್ಕು ಪತಿಗಿಲ್ಲ. ಒಬ್ಬನು ಇನ್ನೊಬ್ಬನಿಗೆ ಪಾರಿತೋ ಉಡುಗೊರೆ ಅಥವಾ ಕಾಣಿಕೆಯ ರೂಪದಲ್ಲಿ ಕೊಟ್ಟ ಯಾವುದಾದರೂ ವಸ್ತುವನ್ನು ಮ ಪಡೆಯುವುದು ಇಸ್ಲಾಮಿನ ನೈತಿಕ ತತ್ವಗಳಿಗೆ ವಿರುದ್ಧವಾಗಿದೆ. ಪ್ರವಾದಿ ವಚನಗಳಲ್ಲಿ

ಕೃತ್ಯವನ್ನು ತಾನು ವಾಂತಿ ಮಾಡಿದುದನ್ನು ತಾನೇ ನೆಕ್ಕುವ ನಾಯಿಯ ಸ್ವಭಾವಕ್ಕೆ ಲಿಸಲಾಗಿದೆ. ಹೀಗಿರುವಾಗ ಪತ್ನಿಗೆ ತಲಾಕ್ ಕೊಟ್ಟು ಕಳುಹಿಸುವಾಗ ಅವಳಿಗೆ ಒಮ್ಮೆ ಪೂರ್ವಕವಾಗಿ ತಾನೇ ಕೊಟ್ಟಿದ್ದುದನ್ನೆಲ್ಲಾ ಹಿಂದಿರುಗಿ ಪಡೆದುಕೊಳ್ಳುವುದು ಪತಿಯ ಗೆ ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಪತ್ನಿಗೆ ತಲಾಕ್ ಟ್ಟಿ ಬೀಳ್ಕೊಡುವಾಗ ಸಾಧ್ಯವಿದ್ದಷ್ಟು ಕೊಟ್ಟು ಕಳುಹಿಸಿ ಕೊಡಬೇಕೆಂಬಂತಹ ಹೃದಯ ಲ್ಯ ನೀತಿಯನ್ನು ಇಸ್ಲಾಮ್ ಬೋಧಿಸುತ್ತದೆ.

ಸ್ವತಃ ಪತ್ನಿಯೇ ಪತಿಯಿಂದ ತಲಾಕನ್ನು ಅಪೇಕ್ಷಿಸಿದರೆ ಅದನ್ನು ಶರೀಅತ್‌ನ ಾಷಿಕದಲ್ಲಿ 'ಖುಲಾ' ಎನ್ನುತ್ತಾರೆ. ಇದು ಸ್ತ್ರೀಯ ಹಕ್ಕಾಗಿದೆ. 'ಖುಲಾ'ದಲ್ಲಿ ಸ್ತ್ರೀಯು ಪತಿಗೇನಾದರೂ ಕೊಟ್ಟು ಅವನಿಂದ ತಲಾಕ್ ಪಡೆಯುತ್ತಾಳೆ. ಈ ಬಗ್ಗೆ ದಂಪತಿಗಳೊಳಗೆ ನರೂ ನಿರ್ಣಯವಾದರೆ ಆ ನಿರ್ಣಯವೇ ಜಾರಿಯಾಗುವುದು. ಆದರೆ ಈ ಪ್ರಕರಣವು ಾಲಯಕ್ಕೆ ತಲುಪಿದರೆ ಆ ಸ್ತ್ರೀಯು ಅವನೊಂದಿಗೆ ಎಂದೆಂದಿಗೂ ಜೀವನ ಹಿಸಲಾರದಷ್ಟು ಜಿಗುಪ್ಸೆ ಹೊಂದಿರುತ್ತಾಳೆಯೇ ಎಂಬುದನ್ನು ಖಚಿತಪಡಿಸಿಕೊಳ್ಳ ುವುದು. ಹಾಗಾದರೆ ಸ್ತ್ರೀಯು 'ಖುಲಾ' ಪಡೆಯಲು ಎಷ್ಟು 'ಫಿದಿಯ' (ಪರಿಹಾರ) ಬೇಕೆಂಬುದನ್ನು ನ್ಯಾಯಾಲಯವು ತೀರ್ಮಾನಿಸುವುದು. ಅದನ್ನು ಸ್ವೀಕರಿಸಿ ಪತಿಯು ್ ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಪತಿಯು ಪತ್ನಿಗೆ ಕೊಟ್ಟಿದ್ದ ಸೊತ್ತಿಗಿಂತ ನ 'ಫಿದಿಯ' ಕೊಡಿಸಲಾಗುವುದಿಲ್ಲ.

ಖುಲಾದ ರೂಪದಲ್ಲಿ ನೀಡಲ್ಪಟ್ಟ ತಲಾಕ್‌ನಲ್ಲಿ ಪತಿಗೆ ಪತ್ನಿಯನ್ನು ಮರಳಿ ಿಸುವ ಅಧಿಕಾರವಿರುವುದಿಲ್ಲ. ಆದರೆ ಅವರು ಪರಸ್ಪರ ಒಲಿದು ಪುನರ್ವಿವಾಹ ಕಲು ನಿರ್ಧರಿಸಿದರೆ ಮಾಡಿಕೊಳ್ಳಬಹುದಾಗಿದೆ.

ಿಚಾರವೆನಿಸುವ ಪುನರ್ವಿವಾಹ!

ತಲಾಕ್‌ನ (ವಿವಾಹ ವಿಚ್ಛೇದನ) ಬಳಿಕ ಮಹಿಳೆಯು ಬೇರೆ ಯಾರಾದರೂ ಪುರುಷ ದಿಗೆ ವಿವಾಹ ಮಾಡಿಕೊಳ್ಳುವುದಾದರೆ, ತರುವಾಯ ಆ ಪತಿಯೂ ಆಕೆಗೆ ತಲಾಕ್ ನರೆ ಇದ್ದತ್ ಅವಧಿ ಕಳೆದ ಬಳಿಕ ಆ ಮಹಿಳೆ ಮತ್ತು ಆಕೆಯ ಪೂರ್ವ ಪತಿ ಇಬ್ಬರೂ ಸಿದರೆ ಅವರು ಪರಸ್ಪರ ವಿವಾಹವಾಗಬಹುದಾಗಿದೆ. ಆದರೆ ಒಬ್ಬನು ತನ್ನ ವಿಚ್ಛೇದಿತ ನೊಂದಿಗೆ ವಿವಾಹವನ್ನು ಧರ್ಮಬದ್ಧಗೊಳಿಸಲಿಕ್ಕಾಗಿ ಬೇರೊಬ್ಬನು ಅವಳನ್ನು ನಿಕಾಹ್ ು ತಲಾಕ್ ಕೊಡಬೇಕೆಂಬ ಕುತಂತ್ರದ ಒಪ್ಪಂದ ಮಾಡಿಕೊಂಡರೆ ಅದು ಧರ್ಮ ರ ಕೃತ್ಯವಾಗುತ್ತದೆ. ಅಂತಹ ವಿವಾಹವನ್ನು ಪ್ರವಾದಿವರ್ಯರು(ಸ) ವ್ಯಭಿಚಾರವೆಂದು ರುವರು. ಇಂತಹ ಒಪ್ಪಂದದ ವಿವಾಹ ಮತ್ತು ವಿಚ್ಛೇದನದಿಂದ ಆ ಸ್ತ್ರೀಯು ತನ್ನ ್ ಪತಿಗೆ ಧರ್ಮಸಮ್ಮತವಾಗಲಾರಳೆಂದು ಪ್ರವಾದಿ ವಚನಗಳಿಂದ ತಿಳಿದು ಬರುತ್ತದೆ. ರದ ವಿವಾಹ ಮಾಡುವುದನ್ನೂ ಮಾಡಿಸುವುದನ್ನೂ ಪ್ರವಾದಿವರ್ಯರು(ಸ) ಶಪಿಸಿದ್ದಾರೆ.

ಅಂತೆಯೇ ಪತ್ನಿಗೆ ತಲಾಕ್ ಕೊಟ್ಟು, ಕೇವಲ ಅವಳನ್ನು ಸತಾಯಿಸಲು ಇನ್ನೊ ಅವಕಾಶ ಸಿಗಲೆಂದು ಇದ್ದತ್ ಅವಧಿ ಮುಗಿಯುವುದಕ್ಕಿಂತ ಮುಂಚೆ ಆಕೆಯನ್ನು ಸ್ವೀಕರಿಸುವುದೂ ಧರ್ಮಸಮ್ಮತವಲ್ಲ. ಮರಳಿ ಸ್ವೀಕರಿಸುವುದಿದ್ದರೆ ಮುಂದೆ ಸದ್ವ ಯೊಂದಿಗೆ ಬಾಳುವೆ ನಡೆಸುವೆನೆಂಬ ಸತ್ಸಂಕಲ್ಪದೊಂದಿಗೆ ಮಾಡಬೇಕು, ಅ ಆಕೆಯನ್ನು ಉತ್ತಮ ರೀತಿಯಲ್ಲಿ ಬೀಳ್ಕೊಡುವುದೇ ಲೇಸು.

ವಿಚ್ಛೇದಿತ ಮಹಿಳೆಯು 'ಇದ್ದತ್' ಕಾಲಾವಧಿ ಮುಗಿದ ಬಳಿಕ ನಿಯಮಬದ್ಧ ಪೂರ್ವ ಪತಿಯೊಂದಿಗೆ ನಿಕಾಹ್ ಮಾಡಿಕೊಳ್ಳಲು ಒಪ್ಪಿಕೊಂಡರೆ ಮಹಿಳೆಯ ಸಂಬಂಧಿ ಇದಕ್ಕೆ ಅಡ್ಡಿಪಡಿಸುವಂತಿಲ್ಲ. ಅಂತೆಯೇ ಆಕೆ ಬೇರೊಬ್ಬನೊಂದಿಗೆ ನಿಕ ಮಾಡಿಕೊಳ್ಳಬಯಸಿದರೆ, ಅವಳ ಮೊದಲಿನ ಪತಿಯು ಆ ವಿವಾಹವಾಗುವುದನ್ನು ತಡೆ ಅಥವಾ ಆಕೆಯನ್ನು ಬೇರೆ ಯಾರೂ ವಿವಾಹ ಮಾಡಲು ಒಪ್ಪದಂತೆ ಮಾಡುವ ಕೃತ್ಯಗಳಲ್ಲಿ ತೊಡಗುವುದನ್ನು ಕುರ್‌ಆನ್ ನಿಷೇಧಿಸಿದೆ.

ಇವು ತಲಾಕ್‌ನ ಕುರಿತು ಇಸ್ಲಾಮಿನ ಸ್ಪಷ್ಟವಾದ ವಿಧಿ ನಿಯಮಗಳು. ದಾಂ ಜೀವನವನ್ನು ಮುಂದುವರಿಸಲಸಾಧ್ಯವಾದ ದಂಪತಿಗಳು ಈ ನಿಯಮಗಳನ್ನು ಪ ಪರಸ್ಪರ ಬೇರ್ಪಡುವುದು ಕೇವಲ ಅವರಿಬ್ಬರ ಹಿತದೃಷ್ಟಿಯಿಂದ ಮಾತ್ರವಲ್ಲ ಸಮಾ ಒಟ್ಟು ಹಿತಕ್ಕೂ ಅನಿವಾರ್ಯವಾಗಿದೆ. ಇಂದು ಈ ನಿಯಮಗಳನ್ನು ಮುಸ್ಲಿಮ್ ಸಮಾಜ ಪೂರ್ಣವಾಗಿ ಪಾಲಿಸಲಾಗುತ್ತಿಲ್ಲವೆಂಬುದು ಒಂದು ವಾಸ್ತವಿಕತೆ. ತಲಾ ದುರುಪಯೋಗದಿಂದ ಅನೇಕ ಮಹಿಳೆಯರಿಗೆ ಅನೇಕ ಕಷ್ಟನಷ್ಟಗಳು ಎದುರಾಗು ಎಂಬುದೂ ನಿಜವೇ. ಆದರೆ ಅದಕ್ಕೆ ಹೊಣೆಗಾರರು ಇಸ್ಲಾಮಿನ ವಿಧಿ ನಿಯಮ ತಿಳುವಳಿಕೆಯಿಲ್ಲದ ಜನಸಾಮಾನ್ಯರು, ಅದನ್ನು ಜನರಿಗೆ ಸರಿಯಾಗಿ ತಿಳಿಹೇಳದ ಧ ಪಂಡಿತರು ಮತ್ತು ಅದನ್ನು ದುರುಪಯೋಗಿಸಲು ಪ್ರೇರೇಪಿಸುವ ನ್ಯಾಯವಾದಿಗಳೇ ಹೊ ಇಸ್ಲಾಮಿನ ತಲಾಕ್ ನಿಯಮವಲ್ಲವೆಂದು ಮೇಲಿನ ವಿವರಣೆಯಿಂದ ವ್ಯಕ್ತವಾಗುತ್ತ

❖ ❖ ❖ ❖

್ಯಯ: ಹದಿನಾಲ್ಕು

ಬಹುಪತ್ನಿತ್ವ

ಇಂದು ಬಹುಪತ್ನಿತ್ವವನ್ನು ಮಹಿಳೆಯ ಅಪಮಾನವೆಂದು ಪರಿಗಣಿಸಲಾಗುತ್ತದೆ. ಮಿನ ವಿಧಿ ನಿಯಮಗಳ ಪೈಕಿ ಪುರುಷರಿಗೆ ನಾಲ್ಕು ವಿವಾಹವಾಗುವ ಅನುಮತಿಯು ಿಕ ಟೀಕೆಗೆ ಗುರಿಯಾಗಿದೆ. ಇದು ಮಹಿಳಾ ಸ್ವಾತಂತ್ರ್ಯ ಮತ್ತು ಸ್ತ್ರೀ-ಪುರುಷ ನತೆಗೆ ವಿರುದ್ಧವಾಗಿದೆಯೆಂದು ಹೇಳಲಾಗುತ್ತದೆ. ಇದರಿಂದ ಇಸ್ಲಾಮೀ ಸಮಾಜದಲ್ಲಿ ಯನ್ನು ಕೇವಲ ಭೋಗ ವಸ್ತುವೆಂದು ಪರಿಗಣಿಸಲಾಗಿದೆಯೆಂದು ಸಾಬೀತುಪಡಿಸಲು ್ನಿಸಲಾಗುತ್ತದೆ. ಆದರೆ ವಸ್ತುಸ್ಥಿತಿಯು ಇದಕ್ಕೆ ತೀರಾ ಭಿನ್ನವಾಗಿದೆ.

ಇಸ್ಲಾಮ್ ಸ್ತ್ರೀಯನ್ನು ತಾಯಿ, ಮಗಳು, ಸೋದರಿ, ಪತ್ನಿ ಮತ್ತು ಸೊಸೆಯ ಗಳಲ್ಲಿ ಕಾಣುತ್ತದೆ. ಈ ಎಲ್ಲ ರೂಪಗಳಲ್ಲಿಯೂ ಆಕೆ ಸನ್ಮಾನಿತ, ಸುರಕ್ಷಿತ ಮತ್ತು ಳಾಗಿದ್ದಾಳೆ. ಆದರೆ ಅಜ್ಞಾನ ಕಾಲದ ಅನಾಗರಿಕರಂತೆ ಇಂದಿನ ಪ್ರಗತಿಪರರೆನಿಸಿದವರು ಸ್ವಾವಲಂಬನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಹೆಸರಲ್ಲಿ ಆಕೆಯ ಸ್ಥಿತಿಯನ್ನು ಾಯಿಸಿ ಆಕೆಯನ್ನು 'ಭೋಗದ ವಸ್ತು' ಮತ್ತು 'ಜಾಹೀರಾತಿನ ಮಾಧ್ಯಮ'ವಾಗಿ ಡಿಸಿದ್ದಾರೆ. ಇಂದು ಪ್ರಗತಿಯ ಹೆಸರಲ್ಲಿ ಆಕೆಗೆ ಆಗುವಷ್ಟು ಅಗೌರವ, ಅವಮಾನ ಅನ್ಯಾಯ ಹಿಂದೆಂದೂ ಆಗಿರಲಾರದು. 'ಭೋಗದ ವಸ್ತು' ವೆಂಬ ಹೊರತು ಆಕೆಯ ಲ್ಲ ಗೌರವಾರ್ಹ ಪಾತ್ರಗಳು ಗೌಣವಾಗಿದೆ. ಈ ಪರಿಸ್ಥಿತಿಗೆ ಎರಡು ಕಾರಣಗಳಿರಲು . ಒಂದೋ ಪುರುಷನು ಅಧಿಕ ಕಾಮುಕನಾಗುತ್ತಿದ್ದಾನೆ ಅಥವಾ ಆತನ ಲೈಂಗಿಕ ಕೆಯ ಈಡೇರಿಕೆಗಿರುವ ಧರ್ಮಸಮ್ಮತ ಮಾರ್ಗಗಳು ಕಡಿಮೆಯಾಗುತ್ತಿವೆ. ಆದ್ದರಿಂದ ರನ್ನು ಸ್ವೇಚ್ಛಾವಿಹಾರಿಗಳಾಗಿ ಮಾಡಿ ಅದರಿಂದ ಪುರುಷನು ತನ್ನ ಕಾಮಾಸಕ್ತಿಯನ್ನು ತ್ತಿದ್ದಾನೆ.

್ಯಾವಾಟಿಕೆ

ವೇಶ್ಯಾವಾಟಿಕೆಯು ಇಂದು ಸಾಮಾನ್ಯವಾಗಿದೆ. ಎಲ್ಲ ನಗರಗಳಲ್ಲೂ ಕೆಂಪು ದೀಪ ಶಗಳು ಬೆಳೆಯುತ್ತಿವೆ. ಹೆಚ್ಚಿನ ವಸತಿ ಗೃಹಗಳು, ಹೋಟೆಲ್‌ಗಳು, ನೈಟ್ ಕ್ಲಬ್‌ಗಳು

ಕೂಡಾ ವ್ಯಭಿಚಾರದ ಕೇಂದ್ರಗಳಾಗಿ ಮಾರ್ಪಟ್ಟಿವೆ. ಹಿಂದೊಮ್ಮೆ ಕೇವಲ ವ ನಗರಗಳಿಗೆ ಸೀಮಿತವಾಗಿದ್ದ ಈ ಪಿಡುಗು ಇಂದು ಹಳ್ಳಿ ಪಟ್ಟಣವೆಂಬ ಭೇದವಿ ಸಾರ್ವತ್ರಿಕವಾಗಿದೆ. ಲಕ್ಷಾಂತರ ಯುವತಿಯರು ಈ ನೀಚ ಕೃತ್ಯವನ್ನು ಕಸುಬಾಗಿ ವ ಕೊಂಡಿದ್ದಾರೆ. ಯುವಕರಿಂದ ಮುದುಕರ ವರೆಗೆ ಎಲ್ಲ ಪ್ರಾಯದ ಲಕ್ಷಾಂತರ ಮ ದಿನನಿತ್ಯ ಈ ಮಾರುಕಟ್ಟೆಯ ಗ್ರಾಹಕರಾಗುತ್ತಿದ್ದಾರೆ.

ಈ ನಗ್ನಸತ್ಯವು ನಮ್ಮ ಮಟ್ಟಿಗೆ ಅಪಮಾನಕರ. ಸಮಾಜಕ್ಕೆ ಕಳಂಕ ಮತ್ತು ಕುಲಕ್ಕೆ ಶಾಪವಾಗಿದೆ. ಸಾಮಾನ್ಯವಾಗಿ ಬಡತನವೇ ಸ್ತ್ರೀಯರು ವೇಶ್ಯಾವಾಟಿಕೆಗೆ ಇಳಿ ವುದಕ್ಕೆ ಕಾರಣವೆನ್ನಲಾಗುತ್ತದೆ. ಆದರೆ ಓರ್ವ 'ಕಾಲ್ ಗರ್ಲ್' ಪತ್ರಕರ್ತರೊಬ್ಬರಿಗೆ ಕುರಿತು ನೀಡಿದ ಕಾರಣ ಗಮನಾರ್ಹವಾಗಿದೆ: "ನಾವು ಈ ವೃತ್ತಿಯಲ್ಲಿಲ್ಲದಿರುತ್ತಿ ಹಾಡುಹಗಲಲ್ಲೇ ನಿಮ್ಮ ಸೋದರಿಯರ ಮತ್ತು ಹೆಣ್ಣು ಮಕ್ಕಳ ಮಾನಹರಣ ಆಗುತ್ತಿತ ಇದು ಇಂದಿನ ವಾತಾವರಣದ ಕಟು ವಾಸ್ತವಿಕತೆಯಾಗಿದೆ.

ಈ ಪರಿಸ್ಥಿತಿಗೆ ಒಂದು ಕಾರಣ ಪುರುಷರು ಸ್ತ್ರೀಯರಿಗಿಂತ ಹೆಚ್ಚು ಕಾಮಾಸಕ್ತಿಯ ಹೊಂದಿರುವುದಾಗಿದೆ. ಇಂದಿನ ಸ್ತ್ರೀಯರಲ್ಲಿ ವ್ಯಾಪಕವಾಗಿರುವ ಸ್ವಚ್ಛಂದತೆ, ನಗ್ನತೆ ಮ ಅಶ್ಲೀಲತೆಯು ಈ ಸುಪ್ತ ಲೈಂಗಿಕ ತೃಷೆಯನ್ನು ಇನ್ನಷ್ಟು ಕೆರಳಿಸುತ್ತದೆ. ಇದರಿಂದ ಆ ಲಾಭ ಪಡೆಯುವ ಮಾಧ್ಯಮಗಳು ಕಾಲೇಜು ಹುಡುಗಿಯರನ್ನೂ ನೌಕರಿಯಲ್ಲಿ ತರುಣಿಯರನ್ನೂ ಹೆಚ್ಚಿನ ಸಂಖ್ಯೆಯಲ್ಲಿ 'ಕಾಲ್ ಗರ್ಲ್'ಗಳಾಗಿ ಮಾರ್ಪಡಿಸುತ್ತಿವೆ. ಆಧ ಟಿ.ವಿ., ಸಿನೆಮಾ ಮತ್ತು ಜಾಹೀರಾತುಗಳಲ್ಲಿ ಸ್ತ್ರೀಯನ್ನು ಕೇವಲ ಭೋಗದ ವಸ್ತು ಪ್ರದರ್ಶಿಸಲಾಗುತ್ತಿದೆ. ಅರೆನಗ್ನ ನೃತ್ಯಗಳ ಕಾಮಕೇಳಿಯ ದೃಶ್ಯಗಳು, ಮಾನಭಂಗ ಮ ಅತ್ಯಾಚಾರದ ಸನ್ನಿವೇಶಗಳನ್ನು ಅತ್ಯಧಿಕ ಪ್ರದರ್ಶಿಸಲಾಗುತ್ತದೆ. ಜೊತೆಗೆ ಮಾದಕ ದ್ರವ್ ವ್ಯಾಪಕತೆಯು ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಿದೆ. ಮಾನಭಂಗದ ಪ್ರಕರಣಗಳು ದಿನೇ ಏರುತ್ತಿವೆ.

ಎರಡು ಮಾರ್ಗಗಳು

ಪರಸ್ತ್ರೀಯರ ಕಡೆಗೆ ಪುರುಷರ ಆಕರ್ಷಣೆಗೆ ಇನ್ನೊಂದು ಮುಖ್ಯ ಕಾರಣ ಅ ಸಂದರ್ಭಗಳಲ್ಲಿ ಪತ್ನಿಯರು ತಮ್ಮ ಪತಿಯಂದಿರ ಲೈಂಗಿಕ ಬಯಕೆಯನ್ನು ಪೂರ್ತಿಗೊಳಿ ಸ್ಥಿತಿಯಲ್ಲಿಲ್ಲದಿರುವುದಾಗಿದೆ. ಉದಾ: ಅನಾರೋಗ್ಯ, ಬಲಹೀನತೆ, ಸಾಂಕ್ರಾಮಿಕ ರೋ ಆರ್ತವ, ಗರ್ಭಧಾರಣೆ, ಪ್ರಸವ ಇತ್ಯಾದಿ. ಇಂತಹ ಸಂದರ್ಭಗಳಲ್ಲಿ ಅನೇಕ ಪುರುಷ ತಮ್ಮ ಕಾಮಾಸಕ್ತಿಯನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಆಗ ಆತನಿಗೆ ಇ ಮಾರ್ಗ ಕೇವಲ ಎರಡು. ಒಂದೋ ತನ್ನ ಕಾಮಾಪೇಕ್ಷೆಯನ್ನು ಧರ್ಮಸಮ್ಮತ ತೀರಿಸಲು ಇನ್ನೊಂದು ಮದುವೆ ಮಾಡಿಕೊಂಡು ಆ ಸ್ತ್ರೀಯ ಎಲ್ಲ ಹೊಣೆಗಾರಿಕೆಗ ವಹಿಸುವುದು ಅಥವಾ ವ್ಯಭಿಚಾರವೆಸಗಿ ತನ್ನ ಮತ್ತು ಓರ್ವ ಸ್ತ್ರೀಯ ನೈತಿಕತೆಯನ್ನು ಹ

ಡುವುದು, ಜೊತೆಗೆ ಸಮಾಜಕ್ಕೆ ತುಂಬಲಾರದಷ್ಟು ಹಾನಿ ಮುಟ್ಟಿಸುವುದು. ವ್ಯಭಿಚಾರದ ಲಕ ಓರ್ವ ಪುರುಷನು ತನ್ನ ಮತ್ತು ಆ ಸ್ತ್ರೀಯ ಮಾನ ಕೆಡಿಸುವುದು ಮಾತ್ರವಲ್ಲ, ಪ್ತತ ಲೈಂಗಿಕ ಕ್ರಿಯೆಯಿಂದ ಸ್ತ್ರೀಗೆ ಆಗುವ ಯಾವುದೇ ಪರಿಣಾಮದ ಹೊಣೆಯಿಂದಲೂ ನು ಮುಕ್ತನಾಗಿರುತ್ತಾನೆ. ಈ ಎರಡು ಮಾರ್ಗಗಳ ಪೈಕಿ ಧಾರ್ಮಿಕ ಮತ್ತು ನೈತಿಕ ಕ್ಷೆಯಿರುವ ಸಭ್ಯ ನಾಗರಿಕನು ಯಾವುದನ್ನು ಆರಿಸಬೇಕೆಂಬುದು ಸಾಮಾನ್ಯ ಬುದ್ಧಿಗೂ ಕುವ ವಿಷಯವಾಗಿದೆ.

ಸ್ತ್ರೀಯರ ಜೀವನದಲ್ಲಿ ಅವರ ಕಾಮಾಸಕ್ತಿಯು ಕ್ಷಯಿಸುವ ಒಂದು ಕಾಲ ಬರುತ್ತದೆ. ವಾ: ಮಕ್ಕಳ ಪಾಲನೆ ಪೋಷಣೆಯಲ್ಲಿ ನಿರತರಾಗಿರುವುದು. ಸಾಮಾನ್ಯವಾಗಿ ಧಾರ್ಮಿಕ ಕ್ಷೆ ಇರುವ ಮಹಿಳೆಯರು ಮಧ್ಯ ವಯಸ್ಸಿಗೆ ತಲುಪಿದಾಗ ಅವರ ಒಲವು ಆಧ್ಯಾತ್ಮಿಕತೆಯತ್ತ ಗ್ಗಾಗುತ್ತದೆ. ಹಲವು ಸಲ ಗರ್ಭಧಾರಣೆ ಮತ್ತು ಹೆರಿಗೆಯಾಗುವುದ ರಿಂದಲೂ ಅವರಲ್ಲಿ ಮಾಸಕ್ತಿಯನ್ನು ಕಡಿಮೆ ಮಾಡುವಂತಹ ಬಲಹೀನತೆ ತಲೆದೋರುತ್ತದೆ. ಪತ್ನಿಯ ತಿಯು ಮಕ್ಕಳಲ್ಲಿ ಹಂಚಿ ಹೋಗುವ ಕಾರಣದಿಂದಲೂ ತನ್ನನ್ನು ಉಪೇಕ್ಷಿಸ ಲಾಗುತ್ತಿದೆ ದು ಪತಿಯು ಭಾವಿಸತೊಡಗುತ್ತಾನೆ. ಮಧ್ಯ ವಯಸ್ಸಿನಲ್ಲಿ ಪುರುಷರು ತಮ್ಮ ಪರ್ಕಕ್ಕೆ ಬರುವ ಮಹಿಳೆಯರಿಂದ ಅತ್ಯಧಿಕ ಆಕರ್ಷಿತರಾಗುತ್ತಾರೆಂದು ಒಂದು ಕ್ಷೆಯಿಂದ ತಿಳಿದು ಬಂದಿದೆ. ಈ ಅನೈತಿಕ ಸಂಪರ್ಕವನ್ನು ಪೋಷಿಸುವ ಬದಲು ರ್ಕ ಸಾಮರ್ಥ್ಯವಿರುವ ಪುರುಷರಿಗೆ ದ್ವಿತೀಯ ವಿವಾಹದ ಅನುಮತಿ ನೀಡುವುದೇ ರ್ಮಿಕ, ನೈತಿಕ ಮತ್ತು ಸಾಮಾಜಿಕ ಹಿತದೃಷ್ಟಿಯಿಂದ ಹೆಚ್ಚು ಸಮಂಜಸವಲ್ಲವೇ?

ತಾನ ಭಾಗ್ಯ

ಎಲ್ಲ ದಂಪತಿಗಳೂ ಸಂತಾನ ಭಾಗ್ಯ ಬಯಸುವುದು ಸ್ವಾಭಾವಿಕ. ಆದರೆ ಸ್ತ್ರೀಯು ಜೆಯಾಗಿದ್ದರೆ ಪತಿ-ಪತ್ನಿಯರಿಬ್ಬರೂ ಸಂತಾನ ಭಾಗ್ಯದಿಂದ ವಂಚಿತರಾಗಿ ಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆ ಬಡಪಾಯಿ ಸ್ತ್ರೀಯನ್ನು ಆಕೆಯದ್ದಲ್ಲದ ೀಷಕ್ಕಾಗಿ ವಿಚ್ಛೇದನ ಮಾಡಿ ಬಿಡುವುದು ನ್ಯಾಯಸಮ್ಮತವಲ್ಲ. ದ್ವಿತೀಯ ವಿವಾಹದ ಮತಿಯು ಇಂತಹ ದಂಪತಿಗಳಿಗೆ ಒಂದು ದೊಡ್ಡ ವರವಾಗಿ ಮಾರ್ಪಡುತ್ತದೆ. ತಹ ಅನೇಕ ಸಂದರ್ಭಗಳಲ್ಲಿ ಪ್ರಥಮ ಪತ್ನಿ ಸ್ವಯಂ ತನ್ನ ಪತಿಯನ್ನು ದ್ವಿತೀಯ ಹವೆಗೆ ಪ್ರೇರೇಪಿಸುತ್ತಾಳೆ. ಪತಿಯ ಅಸಾಮರ್ಥ್ಯವು ಗರ್ಭಧಾರಣೆಗೆ ಅಡ್ಡಿಯಾಗಿದ್ದರೆ ತಹ ಪತಿಯಿಂದ ವಿಚ್ಛೇದನ ಪಡೆದು ಬೇರೆ ವಿವಾಹವಾಗಲು ಸ್ತ್ರೀಗೂ ಅನುಮತಿ ಇದೆ.

ಯುದ್ಧ, ಮಾರಕ ಸಾಂಕ್ರಾಮಿಕ ರೋಗ ಅಥವಾ ಇನ್ನಾವುದೇ ಕಾರಣಕ್ಕಾಗಿ ಸ್ತ್ರೀಯರ ಪಾತವು ಪುರುಷರಿಗಿಂತ ಹೆಚ್ಚಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಪುರುಷರಿಗೆ ದಕ್ಕಿಂತ ಅಧಿಕ ವಿವಾಹ ಮಾಡುವ ಅನುಮತಿ ನೀಡದೆ ಹೋದರೆ ಅನೇಕ ಮಹಿಳೆಯರು ಹವೆಯಿಂದಲೇ ವಂಚಿತರಾಗುವರು. ವಿಧವಾ ವಿವಾಹ ಮತ್ತು ವಿಚ್ಛೇದಿತೆಯ ಪುನರ್

ವಿವಾಹವನ್ನು ಸಮಾಜದಲ್ಲಿ ರೂಢಿಗೆ ತರಬೇಕಾದರೂ ಬಹುಪತ್ನಿತ್ವಕ್ಕೆ ಅನುಮತಿಸು
ಅನಿವಾರ್ಯವಾಗುತ್ತದೆ. ಇಸ್ಲಾಮ್ ಧರ್ಮ ವಿಧವಾ ವಿವಾಹವನ್ನು ಮತ್ತು ವಿಚ್ಛೇದಿತೆ
ಪುನರ್ವಿವಾಹವನ್ನು ಪ್ರೋತ್ಸಾಹಿಸುತ್ತದೆ. ಬಹುಪತ್ನಿತ್ವಕ್ಕಿರುವ ಅನುಮತಿಯು ಹೆಚ್ಚಿನ
ಯರು ಮತ್ತು ವಿಚ್ಛೇದಿತೆಯರ ಗೌರವಪೂರ್ಣ ಪುನರ್ವಸತಿಗೆ ಕಾರಣವಾಗುತ್ತದೆ. ಅ
ಇಂತಹ ಸ್ತ್ರೀಯರನ್ನು ತಮ್ಮ ಉಪಜೀವನಕ್ಕಾಗಿ ಅಥವಾ ಕಾಮಾಪೇಕ್ಷೆಯ ಈಡೇರಿ
ಪರ ಪುರುಷರೊಂದಿಗೆ ಅನೈತಿಕ ಸಂಬಂಧ ಸ್ಥಾಪಿಸಲು ನಿರ್ಬಂಧಿಸಿದಂತಾಗುತ್ತದೆ

ಮೇಲಿನ ಚರ್ಚೆಯಿಂದ ಸ್ಪಷ್ಟವಾಗುವುದೇನೆಂದರೆ ಸಮಾಜದಲ್ಲಿ ಬೆಳೆಯುತ್ತಿ
ಲೈಂಗಿಕ ಅರಾಜಕತೆಗೆ ಪುರುಷರ ಸಹಜ ಬಯಕೆ ಮತ್ತು ಸ್ತ್ರೀಯರ ವಿವಶತೆ ಪ್ರ
ಕಾರಣವಾಗಿದೆ. ಈ ಅಸಭ್ಯ, ನೀಚ ಮತ್ತು ಲಜ್ಜಾಸ್ಪದ ಸ್ಥಿತಿಯಿಂದ ಮಹಿಳೆ
ವಿಮುಕ್ತಿಯ ನಿಟ್ಟಿನಲ್ಲಿ ಇಸ್ಲಾಮೀ ಜೀವನ ವ್ಯವಸ್ಥೆಯಲ್ಲಿರುವ ಬಹುಪತ್ನಿತ್ವದ ಅವಕ
ಒಂದು ಮಹತ್ತರ ಕೊಡುಗೆಯಾಗಿದೆ. ಆದರೆ ಈ ವ್ಯವಸ್ಥೆಯು ಒಂದು ನೈಜ ಇಸ್ಲಾ
ಸಮಾಜದಲ್ಲಿ ಬಹಳಷ್ಟು ಉಪಯುಕ್ತವಾಗಿರುತ್ತದೆ. ಸಮಾಜದಲ್ಲಿ ಇಸ್ಲಾಮೀ ಮೌಲ
ಇಲ್ಲದಾಗಿ ಕೇವಲ ಬಹುಪತ್ನಿತ್ವವನ್ನು ಮಾತ್ರ ಅಳವಡಿಸಿಕೊಂಡರೆ ಅದರಿಂದ
ಅನ್ಯಾಯಗಳಾಗುವ ಸಾಧ್ಯತೆಯೂ ಇದೆ.

ಪತ್ನಿಯರ ಮಧ್ಯೆ ನ್ಯಾಯ

ಅಲ್ಲಾಹನ ಮೇಲೆ ವಿಶ್ವಾಸ ಮತ್ತು ಅವನ ಮುಂದೆ ಜವಾಬ್ದಾರಿಕೆಯ
ಪ್ರವಾದಿಗಳ ಅನುಸರಣೆ ಮತ್ತು ಪರಲೋಕದ ಶಾಶ್ವತ ಜೀವನದ ಸಫಲತೆಯನ್ನು ಉ
ವಾಗಿಡುವುದೇ ಇಸ್ಲಾಮಿನ ಪ್ರಾಥಮಿಕ ಮೌಲ್ಯಗಳಾಗಿವೆ. ಈ ಮೌಲ್ಯಗಳಿಂದ ವಿರಹಿತ
ಸಮಾಜದಲ್ಲಿ ಬಹುಪತ್ನಿತ್ವವು ಕೇವಲ ಭೋಗವಿಲಾಸದ ಹೇತುವಾದೀತು. ಆದರೆ ಅಲ್ಲಾ
ಮತ್ತು ಪರಲೋಕದಲ್ಲಿ ವಿಶ್ವಾಸವಿರಿಸುವ ಮನುಷ್ಯನು ಅಲ್ಲಾಹನ ಮೇರೆ
ಉಲ್ಲಂಘಿಸಲಾರ. ಆದ್ದರಿಂದ ಅವನಿಂದ ಸ್ತ್ರೀಯ ಶೋಷಣೆಯಾಗುವ ಸಂಭವ

ಬಹುಪತ್ನಿತ್ವ ವ್ಯವಸ್ಥೆಯಲ್ಲಿ ಒಂದಕ್ಕಿಂತ ಹೆಚ್ಚಿನ ಪತ್ನಿಯರ ಮಧ್ಯೆ ಪಕ್ಷ
ವಾಗುವ ಸಂಭವವಿದೆ ಎಂಬುದು ಈ ಬಗ್ಗೆ ಏಳುವ ಒಂದು ಸಹಜ ಸಂಶಯವ
ಪವಿತ್ರ ಕುರ್‌ಆನ್ ಬಹುಪತ್ನಿತ್ವಕ್ಕೆ ಅನುಮತಿ ನೀಡಿರುವುದರ ಜೊತೆಗೇ ಪತ್ನಿಯರ
ನ್ಯಾಯ ಪಾಲಿಸಬೇಕೆಂಬ ನಿರ್ಬಂಧವನ್ನೂ ಹೇರಿದೆ. ಒಬ್ಬ ವ್ಯಕ್ತಿಯು ನ್ಯಾಯ ಪಾ
ಶರತ್ತನ್ನು ಪೂರೈಸದೇ ಬಹುಪತ್ನಿತ್ವದ ಅನುಮತಿಯನ್ನು ಬಳಸಿಕೊಳ್ಳುತ್ತಾನಾದರೆ
ನಿಜವಾಗಿ ಅಲ್ಲಾಹನ ಆಜ್ಞೆಗೆ ದ್ರೋಹ ಬಗೆಯುತ್ತಾನೆ. ಇಸ್ಲಾಮೀ ನ್ಯಾಯ
ವ್ಯವಸ್ಥೆಯು ಈ ರೀತಿ ಅನ್ಯಾಯಕ್ಕೊಳಗಾದ ಪತ್ನಿಯರ ಫಿರ್ಯಾದಿಯನ್ನು ಆಲಿಸಿ
ತೀರ್ಪು ನೀಡಬಹುದಾಗಿದೆ. ಇನ್ನೊಂದು ವಿಷಯವೂ ಈ ಬಗ್ಗೆ ಪ್ರಸ್ತಾಪನೀಯವ
ಒಬ್ಬ ಮನುಷ್ಯನಿಗೆ ತನ್ನ ಮಕ್ಕಳ ಮಧ್ಯೆ ತಾರತಮ್ಯ ಮಾಡದೆ ಇರಲು ಸಾಧ್ಯವೆಂ

ವನಿಗೆ ತನ್ನ ಪತ್ನಿಯರ ಮಧ್ಯೆ ತಾರತಮ್ಯ ಮಾಡದೆ ಇರಲು ಮತ್ತು ಅವರ ಮಧ್ಯೆ ್ಯಯ ಪಾಲಿಸಲು ಅಸಾಧ್ಯವೆಂದು ಬಗೆಯುವುದು ಹೇಗೆ? ಒಂದು ವೇಳೆ ಒಬ್ಬ ವ್ಯಕ್ತಿಗೆ, ನ್ನ ಒಬ್ಬ ಪತ್ನಿಯ ಸೌಂದರ್ಯ, ಗುಣನಡತೆ, ವಿದ್ಯಾರ್ಹತೆ ಇತ್ಯಾದಿಗಳ ಕಾರಣದಿಂದ ಕೆಯೊಂದಿಗೆ ಭಾವನಾತ್ಮಕ ಸಂಬಂಧ ಹೆಚ್ಚಾಗಿರ ಬಹುದು. ಅದು ಸ್ವಾಭಾವಿಕ. ಪತ್ನಿಯರ ುಧ್ಯೆ ಪೂರ್ಣ ಸಮಾನತೆ ಪಾಲಿಸುವುದು ಮನುಷ್ಯನಿಂದ ಸಾಧ್ಯವಿಲ್ಲದ ವಿಚಾರ. ಆದ್ದರಿಂದ ಸ್ಲಾಮ್ ಈ ಬಗ್ಗೆ ಪುರುಷನನ್ನು ಅಸಾಧ್ಯ ನಿರ್ಬಂಧಗಳಿಗೆ ಗುರಿಪಡಿಸಿಲ್ಲ. ಆದರೆ ಈ ಾವನಾತ್ಮಕ ಸಂಬಂಧವು ಇತರ ಪತ್ನಿಯರ ಲೈಂಗಿಕ ಬಯಕೆಯ ಈಡೇರಿಕೆ, ಅವರ ೀವನಾಂಶ ನೀಡಿಕೆ, ಅವರ ಲೌಕಿಕ ಅವಶ್ಯಕತೆಗಳ ಪೂರೈಕೆ, ಅವರ ಸಂರಕ್ಷಣೆ ಇತ್ಯಾದಿ ಷಯಗಳಲ್ಲಿ ಪತ್ನಿಯರ ಮಧ್ಯೆ ಪೂರ್ಣ ಸಮಾನತೆಯನ್ನು ಪಾಲಿಸುವುದಕ್ಕೆ ಯಾವ ೀತಿಯಲ್ಲೂ ತಡೆಯಾಗಬಾರದೆಂದು ಇಸ್ಲಾಮ್ ಆದೇಶಿಸುತ್ತದೆ. ಇಸ್ಲಾಮೀ ವಾರೀಸು ಯಮದಂತೆ ಎಲ್ಲ ಪತ್ನಿಯರಿಗೂ ಪತಿಯ ಸಂಪತ್ತಿನಲ್ಲಿ ಸಮಾನ ಪಾಲು ಇದೆ. ಈ ಯಮಗಳನ್ನು ಪಾಲಿಸಲು ಸಾಧ್ಯವಿಲ್ಲದವನು ಬಹುಪತ್ನಿತ್ವದ ಹಕ್ಕನ್ನು ಕಳೆದುಕೊಳ್ಳುತ್ತಾನೆ.

ಇನ್ನೊಂದು ಪ್ರಮುಖ ವಿಷಯವನ್ನೂ ಈ ಬಗ್ಗೆ ತಿಳಿದಿರಬೇಕಾದುದು ಅತ್ಯಗತ್ಯ. ್ರವಾದಿವರ್ಯರ(ಸ) ಕಾಲದಲ್ಲಿ ಅನಿಯಂತ್ರಿತವಾಗಿದ್ದ ಬಹುಪತ್ನಿತ್ವವನ್ನು ಇಸ್ಲಾಮ್ ಾಲ್ಕು ಮಂದಿ ಪತ್ನಿಯರಿಗೆ ಮಿತಿಗೊಳಿಸಿತೇ ವಿನಾ ಏಕಪತ್ನಿತ್ವ ಇದ್ದುದನ್ನು ಬಹುಪತ್ನಿತ್ವವಾಗಿ ಾರ್ಪಡಿಸಲಿಲ್ಲ. ಪವಿತ್ರ ಕುರ್‌ಆನ್ ಮಾಡಿದ ಕಾರ್ಯವು ನಿಜವಾಗಿ ಏಕಕಾಲದಲ್ಲಿ ನಾಲ್ಕು ಂದಿಗಿಂತ ಹೆಚ್ಚಿನ ಪತ್ನಿಯರನ್ನಿರಿಸುವುದನ್ನು ನಿಷೇಧಿಸಿದುದಾಗಿದೆ.

ಇತಿಹಾಸದಿಂದಲೂ ಈ ವಿಷಯವು ಸ್ಪಷ್ಟವಾಗುತ್ತದೆ. ತಾಯಿಫ್‌ನ ಓರ್ವ ಸರದಾರನು ಸ್ಲಾಮ್ ಸ್ವೀಕರಿಸಿದಾಗ ಅವನಿಗೆ ಒಂಭತ್ತು ಮಂದಿ ಪತ್ನಿಯರಿದ್ದರು. ಪ್ರವಾದಿ ಯವರು(ಸ) ಆತನಿಗೆ ನಾಲ್ಕು ಮಂದಿ ಪತ್ನಿಯರನ್ನು ಉಳಿಸಿಕೊಂಡು ಉಳಿದವರನ್ನು ುಚ್ಛೇದಿಸಬೇಕೆಂದು ಆಜ್ಞಾಪಿಸಿದರು. ನೌಫಲ್ ಬಿನ್ ಮುಆವಿಯಾ ಎಂಬೋರ್ವ ವ್ಯಕ್ತಿಗೆ ದು ಮಂದಿ ಪತ್ನಿಯರಿದ್ದರು. ಪ್ರವಾದಿವರ್ಯರು(ಸ) ಆ ಪೈಕಿ ಒಬ್ಬಳನ್ನು ತೊರೆಯ ೇಕೆಂದು ಅವರಿಗೆ ಆಜ್ಞಾಪಿಸಿದರು.

❖ ❖ ❖ ❖

ಅಧ್ಯಾಯ: ಹದಿನೈದು

ಮಹಿಳೆಯರು: ಮಸೀದಿ, ಹಜ್
ಧರ್ಮಯುದ್ಧ ಇತ್ಯಾ

ಮಹಿಳೆಯರ ನೈಸರ್ಗಿಕವಾದ ಕೆಲವು ಅಡೆ-ತಡೆ, ಇತಿ-ಮಿತಿಗಳು, ಕರ್ತವ್ಯಗ ಮತ್ತು ಹೊಣೆಗಾರಿಕೆಗಳಿಂದಾಗಿ ಇಸ್ಲಾಮ್ ಆಕೆಗೆ ಅನೇಕ ಧಾರ್ಮಿಕ, ವಿಧಿ-ಕರ್ತವ್ಯ ಗಳಿಂ ವಿನಾಯಿತಿ ನೀಡಿದೆ.

ಮಹಿಳೆಯರಿಗೆ ಆಗುವ ಮಾಸಿಕ ಆರ್ತವ, ಪ್ರಸವಾನಂತರದ ರಕ್ತಸ್ರಾವಗಳ ವೇ ನಮಾಝ್ ಮತ್ತು ಉಪವಾಸ ವ್ರತಗಳಂತಹ ಕಡ್ಡಾಯ ಕರ್ತವ್ಯಗಳಿಂದ ಆಕೆಗೆ ವಿನಾಯಿ ಇದೆ. ಆರ್ತವ ಕಾಲದಲ್ಲಿ ಆಕೆಯ ಮೇಲೆ ನಮಾಝ್ ಕಡ್ಡಾಯವಲ್ಲವೆಂಬು ಮಾತ್ರವಲ್ಲ, ಆ ಕಾಲಾವಧಿಯಲ್ಲಿ ಆಕೆ ನಮಾಝ್ ಮಾಡಬಾರದೆಂದೇ ವಿಧಿಸಲಾಗಿ ಹಾಗೆ ಬಿಟ್ಟು ಹೋದ ನಮಾಝ್‌ಗಳನ್ನು ಆಕೆ ಮತ್ತೆ ಆಚರಿಸಿ ಸಾಲ ತೀರಿಸಬೇಕಾಗಿಯ ಇಲ್ಲ. ಅಂತೆಯೇ ಪ್ರಸವಾನಂತರದ ಅಶುದ್ಧಿಯ ಕಾಲದಲ್ಲಿಯೂ ಆಕೆಗೆ ನಮಾಝ್ ನಿಂ ವಿನಾಯಿತಿ ಇದೆ. ಪ್ರಸ್ತುತ ಅಶುದ್ಧಿಯ ಅವಧಿಗಳಲ್ಲಿ ರಮಝಾನ್ ತಿಂಗಳು ಬಂದ ಆ ದಿನಗಳ ಉಪವಾಸ ವ್ರತವನ್ನು ಆಕೆ ಆಚರಿಸಬೇಕಾಗಿಲ್ಲ. ಆದರೆ ಹಾಗೆ ಬಿಟ್ಟು ಹೋ ಉಪವಾಸ ವ್ರತದ ಸಂಖ್ಯೆಯನ್ನು ಮಹಿಳೆಯರು ಇತರ ಹನ್ನೊಂದು ತಿಂಗಳಲ್ಲಿ ಮುಂದಿ ರಮಝಾನ್ ತಿಂಗಳಿಗೆ ಮುಂಚಿತವಾಗಿ ಪೂರ್ತಿಗೊಳಿಸಬೇಕು. ಇದೇ ರೀತಿ ಆ ಅವಧಿಯ ಪವಿತ್ರ ಕುರ್‌ಆನಿನ ಪಾರಾಯಣವನ್ನೂ ಆಕೆಗೆ ನಿಷೇಧಿಸಲಾಗಿದೆ.

ಆದರೆ ಇದರರ್ಥ ಆರ್ತವ ಕಾಲದಲ್ಲಿ ಕೆಲವು ಧರ್ಮ ಮತ್ತು ಜಾತಿಗಳ ರೂಢಿಯಲ್ಲಿರುವಂತೆ ಮಹಿಳೆಯರನ್ನು ಅಸ್ಪೃಶ್ಯಳೆಂದು ತಿಳಿದುಕೊಳ್ಳಬೇಕೆಂದು ಖಂಡಿತ ಅ ಪ್ರವಾದಿವರ್ಯರು(ಸ) ವಿವರಿಸಿದ ಪ್ರಕಾರ ಆರ್ತವಾವಸ್ಥೆಯಲ್ಲಿ ಅವರ ಜೊತೆ ಸಂಭೋ ಮಾತ್ರ ಮಾಡಬಾರದೆಂದೂ ಇತರ ಎಲ್ಲ ವ್ಯವಹಾರಗಳನ್ನು ಎಂದಿನಂತೆ ಉ ಕೊಂಡಿರಬೇಕೆಂದೂ ತಿಳಿದುಬರುತ್ತದೆ.

ಪುರುಷರಿಗೆ ಧರ್ಮಯುದ್ಧವು ಕಡ್ಡಾಯವಾಗಿರುವ ಸಂದರ್ಭಗಳಲ್ಲಿಯೂ ಸ್ತ್ರೀಯರಿಗೆ ಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಹಾಗೆಯೇ ಪತಿ ಅಥವಾ ವಿವಾಹನಿಷಿದ್ಧ ಧು ಒಬ್ಬರು ಜೊತೆಯಲ್ಲಿಲ್ಲದೆ ಹಜ್ಜ್ ಯಾತ್ರೆಯನ್ನು ಆಕೆ ಕೈಗೊಳ್ಳಬೇಕಾಗಿಲ್ಲ.

ಪ್ರವಾದಿವರ್ಯರು(ಸ) ಸಾಮಾನ್ಯವಾಗಿ ಮಧ್ಯಾಹ್ನದ ನಮಾಝ್‌ನ ಬಳಿಕದ ಸಮಯವನ್ನು ಹಿಳೆಯರಿಗೆ ಧರ್ಮದ ಬಗ್ಗೆ ತಿಳುವಳಿಕೆ ನೀಡುವುದಕ್ಕಾಗಿ ಮೀಸಲಿರಿಸುತ್ತಿದ್ದರು. ಈ ದರ್ಭದಲ್ಲಿ ಅವರ(ಸ) ಪತ್ನಿಯರ ಪೈಕಿ ಯಾರಾದರೊಬ್ಬರು ಅವರ ಜೊತೆಗಿರುತ್ತಿದ್ದರು.

ಹಿಳೆಯರ ಪ್ರವಾದಿ!

ಒಮ್ಮೆ ಮದೀನಾದ ಮಹಿಳೆಯರು ಪರಸ್ಪರ ಸಮಾಲೋಚಿಸಿ ತಮ್ಮ ಸಮಸ್ಯೆಗಳ ಬಗ್ಗೆ ರ್ಕಿಸಲು ಹ. ಅಸ್ಮಾ ಬಿಂತ್ ಯಝೀದ್ ಅನ್ಸಾರಿಯಾ ಅವರನ್ನು ಪ್ರವಾದಿವರ್ಯರ(ಸ) ಗೆ ರವಾನಿಸಿದರು. ಹ. ಅಸ್ಮಾರವರು ಮಾತುಕತೆಯಲ್ಲಿ ಬಹಳ ನಿಪುಣೆಯಾಗಿದ್ದು ಯಾರ ಂದೆಯೂ ತಮ್ಮ ವಾದವನ್ನು ಸಮರ್ಥವಾಗಿ ಇಡುತ್ತಿದ್ದರು. ಅವರು ಪ್ರವಾದಿವರ್ಯರ(ಸ) ಧಿಯಲ್ಲಿ, "ಪ್ರವಾದಿವರ್ಯರೇ ತಾವು ಸ್ತ್ರೀ-ಪುರುಷರಿಬ್ಬರಿಗೂ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿ ಲ್ಲವೇ?" ಎಂದು ಪ್ರಶ್ನಿಸಿದರು. ಪ್ರವಾದಿ(ಸ) "ಹೌದು, ಖಂಡಿತವಾಗಿಯೂ" ಎಂದುತ್ತರಿಸಿದರು.

ಆಗ ಹ. ಅಸ್ಮಾ(ರ) ಈ ರೀತಿ ನಿವೇದಿಸಿಕೊಂಡರು: "ಹಾಗಾದರೆ ಪುರುಷರಿಗೆ ಮಾನವಾಗಿ ಪುಣ್ಯ ಸಂಪಾದಿಸುವ ಅವಕಾಶ ಸ್ತ್ರೀಯರಿಗೆ ಏಕಿಲ್ಲ?" ಅದಕ್ಕೆ ಪ್ರವಾದಿ(ಸ) ಮಾವ ಪುಣ್ಯ ಸಂಪಾದನೆಯ ಅವಕಾಶವಿಲ್ಲದುದಕ್ಕಾಗಿ ನೀವು ವಿಷಾದಿಸುತ್ತಿರುವಿರಿ?" ದು ಮರುಪ್ರಶ್ನಿಸಿದರು. ಆಗ ಹ. ಅಸ್ಮಾ(ರ), "ಪ್ರವಾದಿವರ್ಯರೇ! ಪುರುಷರಿಗೆ ಜುಮಾ ಮಾಝ್ (ಶುಕ್ರವಾರದ ಸಾಮೂಹಿಕ ಪ್ರಾರ್ಥನೆ) ಇದೆ. ಜೊತೆಗೆ ಈದುಲ್ ಫಿತ್ರ್ ಮತ್ತು ದುಲ್ ಅಝ್‌ಹಾ ಹಬ್ಬಗಳ ನಮಾಝ್ ಕೂಡಾ ಇದೆ. ನಮಗೆ ಇವುಗಳ ಪೈಕಿ ಾವುದಕ್ಕೂ ಅವಕಾಶವಿಲ್ಲ. ಮುಸ್ಲಿಮನೊಬ್ಬ ಮೃತಪಟ್ಟರೆ ನಾವು ಆತನ ಪಾರ್ಥಿವ ೀರವನ್ನು ಹೊತ್ತುಕೊಂಡು ಹೋಗುವಂತಿಲ್ಲ. ದಫನ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ೀಗಿಗಳ ಸಂದರ್ಶನಕ್ಕೆ ಕೂಡಾ ಕೇವಲ ಪುರುಷರೇ ಹೋಗುತ್ತಾರೆ. ನಾವಾಗಿ ಹೋದರೆ ು ಬೇರೆ ಮಾತು (ಆದರೆ ಪುರುಷರಂತೆ ನಮ್ಮನ್ನು ರೋಗಿಗಳ ಸಂದರ್ಶನಕ್ಕೆ ಹೋಗಲು ್ರೋತ್ಸಾಹಿಸಲಿಲ್ಲ.) ಪುರುಷರಾದರೆ ತಾವಾಗಿಯೇ ಹಜ್ಜ್ ಯಾತ್ರೆಗೆ ಹೋಗಬಹುದು. ದರೆ ನಾವು ವಿವಾಹನಿಷಿದ್ಧವಾದ ಆಪ್ತ ಬಂಧುಗಳ ಜೊತೆಗಲ್ಲದೆ ಹೋಗುವಂತಿಲ್ಲ" ದು ತಮ್ಮ ದೂರುಗಳನ್ನು ನಿವೇದಿಸಿಕೊಂಡರು.

ತ್ಯುತ್ತಮ ಪ್ರಶ್ನೆಗಳು

ಪ್ರವಾದಿ(ಸ) ಹ. ಅಸ್ಮಾರವರ(ರ) ಮಾತುಗಳನ್ನು ಮಂದಸ್ಮಿತರಾಗಿ ಮೌನವಾಗಿ ಲಿಸುತ್ತಿದ್ದರು. ಪುಣ್ಯ ಸಂಪಾದನೆಯ ಬಗ್ಗೆ ಹ. ಅಸ್ಮಾರಿಗಿರುವ(ರ) ಕಳಕಳಿಯ ಬಗ್ಗೆ

ಅವರು ಸಂತೋಷಗೊಂಡಿದ್ದರೆಂಬುದು ಅವರ ಮುಖಭಾವದಿಂದ ಸ್ಪಷ್ಟವಾಗುತ್ತಿತ್ತ ಅಸ್ಮಾ(ರ) ತಮ್ಮ ಮಾತನ್ನು ಮುಂದುವರಿಸುತ್ತಾ "ಅಲ್ಲಾಹನ ಪ್ರವಾದಿಗಳೇ! ಎಲ್ಲಕ್ಕಿಂತಲ ಮಿಗಿಲಾಗಿ ಪುರುಷರಿಗೆ ಧರ್ಮಯುದ್ಧದಲ್ಲಿ ಭಾಗವಹಿಸಿ ಪುಣ್ಯ ಸಂಪಾದಿಸುವ ಅವಕಾಶವಿ ಆದರೆ ನಾವು ಶಸ್ತ್ರ ಹಿಡಿದು ರಣರಂಗಕ್ಕೆ ಹೋಗುವಂತಿಲ್ಲ" ಎನ್ನುತ್ತಾ ತಮ್ಮ ಮಾತ ಮುಗಿಸಿದರು. ಆಗ ಪ್ರವಾದಿವರ್ಯರು ಅಲ್ಲಿದ್ದವರೊಡನೆ, "ನೀವು ಧರ್ಮದ ಬ ಯಾರಾದರೂ ಇವರಿಗಿಂತ ಉತ್ತಮ ಪ್ರಶ್ನೆಗಳನ್ನು ಕೇಳಿದ್ದನ್ನು ಆಲಿಸಿದ್ದೀರಾ?" ಎನ್ನುತ ತಮ್ಮ ಪ್ರಸನ್ನತೆಯನ್ನು ವ್ಯಕ್ತಪಡಿಸಿ, ಹ. ಅಸ್ಮಾ ಬಿಂತ್ ಯಝೀದ್ ಅನ್ಸಾರಿಯಾರ(ಪ್ರಶ್ನೆಗಳಿಗೆ ಉತ್ತರಿಸಿದರು. ಅದರ ತಾತ್ಪರ್ಯ ಹೀಗಿದೆ:

"ಮಹಿಳೆಯರು ಮನೆಯಲ್ಲಿ ನಮಾಝ್ ಮಾಡಿದರೆ ಅದು ಪುರುಷರು ಮಸೀ ಯಲ್ಲಿ ಸಾಮೂಹಿಕವಾಗಿ ಮಾಡುವ ನಮಾಝ್‌ಗೆ ಸಮಾನವಾದ ಪುಣ್ಯಕ್ಕೆ ಅರ್ಹವಾಗಿ ಮನೆಯಲ್ಲೇ ಅವರಿಗೆ ಜುಮಾ ನಮಾಝ್‌ನ ಪುಣ್ಯವೂ ದೊರೆಯುತ್ತದೆ. ಈದ್ ನಮಾಝಿ ನಿಂದಲೂ ಅವರಿಗೆ ವಿನಾಯಿತಿ ನೀಡಲಾಗಿದೆ. ಮಹಿಳೆ ತನ್ನ ಮನೆಯ ವಾತಾವರಣವನ ಹರ್ಷದಾಯಕವಾಗಿರಿಸಿದರೆ, ತನ್ನ ಪತಿಯ ಆದೇಶಗಳನ್ನು ಪಾಲಿಸುತ್ತಿದ್ದರೆ ಮತ್ತು ಮಕ್ಕ ಪಾಲನೆ ಪೋಷಣೆ ಹಾಗೂ ತರಬೇತಿ ಮಾಡುತ್ತಿದ್ದರೆ ಆಕೆಗೆ ಮನೆಯಲ್ಲಿದ್ದುಕೊಂಡ ಜಿಹಾದ್ (ಧರ್ಮಯುದ್ಧ) ಮತ್ತು ಹಜ್ಜ್ ಮಾಡಿದ ಪುಣ್ಯ ಲಭಿಸುತ್ತದೆ. ಜಿಹಾದ್‌ನ ಸ್ವತಃ ಭಾಗವಹಿಸಲಸಾಧ್ಯವಾದವರು ಜಿಹಾದ್‌ಗೆ ಬೇಕಾದ ಸಾಧನಗಳನ್ನು ಒದಗಿಸಿದ ಜಿಹಾದ್ ಮಾಡುವವರಿಗೆ ನೆರವಾದರೆ ಅಥವಾ ಅವರ ಗೈರು ಹಾಜರಿಯಲ್ಲಿ ಅವರ ಮ ಮಂದಿಯ ಅವಶ್ಯಕತೆಗಳನ್ನು ಪೂರೈಸಿದರೆ ಅವರಿಗೂ ಜಿಹಾದ್‌ನ ಪುಣ್ಯ ದೊರೆಯುತ್ತ ಮಹಿಳೆಯು ಜಿಹಾದ್ ಮಾಡುವವನ ತಾಯಿ, ಸೋದರಿ ಅಥವಾ ಪತ್ನಿಯಾಗಿದ್ದರೆ ಆ ಜಿಹಾದ್‌ನ ಪುಣ್ಯಕ್ಕೆ ಇನ್ನೂ ಹೆಚ್ಚು ಅರ್ಹಳಾಗುತ್ತಾಳೆ."

ವಿನಾಯಿತಿಯ ಕಾರಣಗಳು

ಒಮ್ಮೆ ಪ್ರವಾದಿ(ಸ) ಹೀಗೆ ಹೇಳಿದ್ದರು: "ಮಹಿಳೆಯರ ಹಜ್ಜ್ ಅವರ ಮಟ್ಟ ಜಿಹಾದ್ ಆಗಿದೆ."

ಮಹಿಳೆಯರಿಗೆ ಮನೆಯಲ್ಲಿದ್ದುಕೊಂಡೇ ಪುರುಷರಿಗೆ ಸಮಾನವಾದ ಪುಣ್ಯ ಸಿಗುವುದ ಅಲ್ಲಾಹನ ಒಂದು ಅನುಗ್ರಹವಾಗಿದೆ. ಜನಾಝಾ(ಮೃತ ಶರೀರ)ವನ್ನು ಹೊರುವುದ ಸ್ತ್ರೀಯರಿಗೆ ಭೂಷಣವಾದ ಕೆಲಸವಲ್ಲದುದರಿಂದ ಅವರಿಗೆ ಅದರಿಂದ ಪೂರ್ಣ ವಿನಾಯಿ ನೀಡಲಾಗಿದೆ. ಜನಾಝಾ ಯಾತ್ರೆಯಲ್ಲಿ ಭಾಗವಹಿಸುವುದರಿಂದ ಪರ್ದಾದ ನಿಯಮವನ ಪೂರ್ಣವಾಗಿ ಪಾಲಿಸಲು ಸಾಧ್ಯವಾಗದೆ ಇರಬಹುದು. ಅಪರಿಚಿತ ಸ್ತ್ರೀ-ಪುರುಷರ ಮಧ

ಾಕುನುಗ್ಗಲಾಗಬಹುದು. ಮೃತರ ಆಪ್ತರಾದ ಸ್ತ್ರೀಯರು ದುಃಖ ತಾಳಲಾರದೆ ಬಹಿರಂಗವಾಗಿ ೋದಿಸಬಹುದು. ಈ ಎಲ್ಲ ಕಾರಣಗಳಿಗಾಗಿ ಮಹಿಳೆಯರು ಜನಾಝಾ ಯಾತ್ರೆಯಲ್ಲಿ ಾಲ್ಗೊಳ್ಳುವುದನ್ನು ನಿಷೇಧಿಸಲಾಗಿದೆ.

ಸ್ತ್ರೀಯರಿಗೆ ಮಸೀದಿಗೆ ಹೋಗುವುದರಿಂದ ವಿನಾಯಿತಿ ನೀಡಲು ಇನ್ನೊಂದು ್ರಮುಖ ಕಾರಣವೂ ಇದೆ. ಯಾವ ಸ್ತ್ರೀಯೂ ತನ್ನ ಮಾಸಿಕ ಆರ್ತವ ಇತ್ಯಾದಿ ಸ್ತ್ರೀ ಹಜ ಪ್ರಕ್ರಿಯೆಗಳನ್ನು ತಮ್ಮಂತಹ ಇತರ ಸ್ತ್ರೀಯರ ಮುಂದೆಯೂ ಬಹಿರಂಗಪಡಿಸಲು ಷ್ಟಪಡುವುದಿಲ್ಲ. ಮಹಿಳೆಯರಿಗೆ ಸಾಮೂಹಿಕ ನಮಾಝ್ ಮತ್ತು ಜುಮಾ ಕಡ್ಡಾಯ ಾದರೆ ಈ ವಿಷಯಗಳು ಇತರ ಮಹಿಳೆಯರ ಗಮನಕ್ಕೆ ಬಾರದೆ ಇರುವುದಿಲ್ಲ. ುದುದರಿಂದ ಇಸ್ಲಾಮ್‌ನಲ್ಲಿ ಸ್ತ್ರೀ-ಪುರುಷರಿಗೆ ಅವರವರ ಶಾರೀರಿಕ ಮತ್ತು ಮಾನಸಿಕ ್ವಭಾವ-ಪ್ರಕೃತಿಗಳಿಗೆ ಅನುಗುಣವಾದ ಹಕ್ಕು ಬಾಧ್ಯತೆಗಳನ್ನು ಹಾಗೂ ಕರ್ತವ್ಯಗಳನ್ನು ಾತ್ರ ನಿಶ್ಚಯಿಸಲಾಗಿದೆ.

❖ ❖ ❖ ❖

ಅಧ್ಯಾಯ: ಹದಿನಾರು

ಇಸ್ಲಾಮ್ ಬಡ್ಡಿಯನ್ನು ನಿಷೇಧಿಸಿರುವುದೇಕೆ

ಸಾಲ ಕೊಟ್ಟವನು ಸಾಲ ಪಡೆದವನಿಂದ ಒಂದು ನಿಶ್ಚಿತ ದರದಲ್ಲಿ ವಸೂ ಮಾಡುವ ಹೆಚ್ಚಿನ ಹಣಕ್ಕೆ ಬಡ್ಡಿ ಎನ್ನುತ್ತಾರೆ. ಇಸ್ಲಾಮ್ ಬಡ್ಡಿಯನ್ನು ಸಂಪೂರ್ಣವ ನಿಷೇಧಿಸಿದೆ. ಪ್ರವಾದಿ ಮುಹಮ್ಮದ್‌ರವರ(ಸ) ಕಾಲದಲ್ಲಿ ಬಡ್ಡಿಯ ವ್ಯವಹಾರಗಳು ಕೆಳಗಿನ ರೂಪದಲ್ಲಿ ಚಾರಿಯಲ್ಲಿದ್ದವು.

1. ಒಂದು ವಸ್ತುವನ್ನು ಒಬ್ಬನು ಇನ್ನೊಬ್ಬನಿಗೆ ಸಾಲ ಕೊಡುತ್ತಿದ್ದ. ಸ ಮರುಪಾವತಿಗೆ ಒಂದು ಕಾಲಾವಧಿಯನ್ನು ನಿರ್ಣಯಿಸಲಾಗುತ್ತಿತ್ತು. ಆ ಕಾಲಾವಧಿಯ ಸಾಲ ಮರುಪಾವತಿ ಯಾಗದಿದ್ದಾಗ ಅವನಿಗೆ ಮತ್ತಷ್ಟು ಅವಧಿಯನ್ನು ಕೊಟ್ಟು ಆ ವಸ್ತು ಕ್ರಯವನ್ನು ಹೆಚ್ಚಿಸಲಾಗುತ್ತಿತ್ತು.

2. ಒಬ್ಬನು ಇನ್ನೊಬ್ಬನಿಗೆ ಹಣ ಸಾಲ ಕೊಡುವಾಗ ಇಂತಿಷ್ಟು ಅವಧಿಗೆ ಇಂತಿ ಹಣವನ್ನು ಅಸಲಿಗಿಂತ ಹೆಚ್ಚು ಕೊಡಬೇಕೆಂದು ನಿಶ್ಚಯಿಸಲಾಗುತ್ತಿತ್ತು.

3. ಸಾಲ ಕೊಟ್ಟವನ ಮತ್ತು ಪಡೆದವನ ಮಧ್ಯೆ ನಿಶ್ಚಿತ ಅವಧಿಗೆ ನಿಶ್ಚಿತ ದ ನಿರ್ಣಯವಾಗುತ್ತಿತ್ತು. ಆ ಅವಧಿಯೊಳಗೆ ಸಾಲ ನಿಶ್ಚಿತ ದರದೊಂದಿಗೆ ಮರು ಪಾವತಿಯ ದಿದ್ದರೆ ಮೊದಲಿಗಿಂತ ಹೆಚ್ಚಿನ ದರದಲ್ಲಿ ಮತ್ತಷ್ಟು ಅವಧಿಯನ್ನು ಕೊಡಲಾಗುತ್ತಿ

ವಾಸ್ತವದಲ್ಲಿ ಬಡ್ಡಿಕೋರರು ಹಣದಾಸೆಯಲ್ಲಿ ಮರುಳರಂತಾಗುತ್ತಾರೆ. ತಮ್ಮ ಸ್ವಾರ್ಥದ ಹುಚ್ಚಿನಲ್ಲಿ ಅವರಿಗೆ ಅದರಿಂದ ವ್ಯಕ್ತಿ ಮತ್ತು ಸಮಾಜದ ಮೇಲೆ ಆಗ ಭೀಕರ ದುಷ್ಪರಿಣಾಮಗಳ ಪರಿವೆಯೇ ಇರುವುದಿಲ್ಲ. ಬಡ್ಡಿಯಿಂದ ಮಾನವಪ್ರೇ ಮಾನವ ಸೋದರತೆ ಮತ್ತು ಮಾನವೀಯ ಅನುಕಂಪವು ಬೇರು ಸಹಿತ ಕೀಳಲ್ಪಡುತ್ತ ಇದರಿಂದ ಸಮಾಜ ಕಲ್ಯಾಣದ ಕಲ್ಪನೆಗೇ ಕೊಡಲಿಯೇಟು ಬೀಳುತ್ತದೆ. ಅಸಂಖ ಜನರನ್ನು ದುಸ್ಥಿತಿಗೆ ತಳ್ಳಿ ಬಡ್ಡಿಕೋರನು ತಾನು ಸುಖ ಸಂತೋಷದಿಂದಿರಲು ಬಯಸುತ್ತಾ ಆದ್ದರಿಂದಲೇ ಪವಿತ್ರ ಕುರ್‌ಆನ್ ಬಡ್ಡಿಕೋರರನ್ನು ಹುಚ್ಚರಿಗೆ ಹೋಲಿಸಿದೆ. "ಬ

ನವವರ ಅವಸ್ಥೆಯು ಶೈತಾನನ ಸೋಂಕಿನಿಂದ ಹುಚ್ಚನಾದವನಂತಿದೆ."

(ಪವಿತ್ರ ಕುರ್‌ಆನ್: 2: 275)

ಷಿದ್ಧ ಏಕೆ?

ಬಡ್ಡಿಯೂ ವ್ಯಾಪಾರದಂತಲ್ಲವೆ, ವ್ಯಾಪಾರದಲ್ಲಿ ಹಣ ತೊಡಗಿಸಿ ಒಬ್ಬ ವ್ಯಕ್ತಿಯು ಭ ಗಳಿಸುವುದು ಧರ್ಮಸಮ್ಮತವಾಗಿದ್ದರೆ ಅದೇ ಹಣವನ್ನು ಬ್ಯಾಂಕಿನಲ್ಲಿಟ್ಟು ಅಥವಾ ಗತ್ಯವಿದ್ದವನಿಗೆ ಸಾಲ ಕೊಟ್ಟು, ಅವನು ಅದನ್ನು ವ್ಯಾಪಾರದಲ್ಲಿ ತೊಡಗಿಸಿದರೆ ಅದಕ್ಕೆ ಡ್ಡಿ ಪಡೆಯುವುದು ನಿಷಿದ್ಧವಾಗುವುದು ಹೇಗೆ ಎಂಬಿತ್ಯಾದಿ ಪ್ರಶ್ನೆಗಳನ್ನು ಬಡ್ಡಿಯಾಧಾರಿತ ರ್ಥಿಕ ವ್ಯವಸ್ಥೆಯನ್ನು ಪ್ರತಿಪಾದಿಸುವವರು ಸಹಜವಾಗಿಯೇ ಮುಂದಿಡುತ್ತಾರೆ. ಈ ಪ್ರಶ್ನೆ ಗೆ ಅವರು ನೆಚ್ಚಿಕೊಂಡಿರುವ ಸಿದ್ಧಾಂತದ ದೋಷವೇ ಕಾರಣವಾಗಿದೆ. ವ್ಯಾಪಾರದಲ್ಲಿ ೊಡಗಿಸಿದ ಬಂಡವಾಳದ ಮೇಲೆ ಪಡೆಯುವ ಲಾಭ ಮತ್ತು ಸಾಲಕೊಟ್ಟ ಅಸಲಿನ ಮೇಲೆ ಡೆಯುವ ಬಡ್ಡಿಯ ವ್ಯತ್ಯಾಸವನ್ನು ಅವರು ತಿಳಿಯುವುದಿಲ್ಲ. ಜನರು ತಮ್ಮ ಶ್ರಮದಿಂದ ಥವಾ ಶ್ರಮ ಮತ್ತು ಬಂಡವಾಳಗಳೆರಡರಿಂದಲೂ ನಡೆಸುತ್ತಿರುವ ವ್ಯಾಪಾರ, ವಹಿವಾಟು, ಷಿ ಮತ್ತು ಕೈಗಾರಿಕೋದ್ಯಮಗಳಲ್ಲಿ ಲಾಭದಂತೆಯೇ ನಷ್ಟದ ಭೀತಿಯೂ ಇರುತ್ತದೆ. ಗಿರುವಾಗ ಬಂಡವಾಳ ಹೂಡುವವನು ಮಾತ್ರ ನಷ್ಟದ ಭೀತಿಯಿಲ್ಲದೆ ಖಾತ್ರಿಯಾದ ಭಕ್ಕೆ ಹಕ್ಕುದಾರನಾಗುವುದು ಸರಿಯೇ? ವ್ಯಾಪಾರ, ಕೃಷಿ ಮತ್ತು ಕೈಗಾರಿಕೋದ್ಯಮಗಳಲ್ಲಿ ವರು ತಮ್ಮ ಪರಿಶ್ರಮ, ಸಮಯ, ಸಾಮರ್ಥ್ಯ, ಬಂಡವಾಳಗಳನ್ನೆಲ್ಲಾ ತೊಡಗಿಸುತ್ತಾರೆ. ವರ ಅವಿರತ ಪರಿಶ್ರಮಗಳನ್ನು ಅವಲಂಬಿಸಿಯೇ ಅದು ಲಾಭದಾಯಕವಾಗುತ್ತದೆ. ವರೂ ನಷ್ಟದ ಭೀತಿ ಇದ್ದೇ ಇರುತ್ತದೆ. ಆದರೆ ಅವರಿಗೆ ಬಂಡವಾಳವನ್ನು ಸಾಲವಾಗಿ ೊಟ್ಟವನು ಯಾವುದೇ ನಷ್ಟದ ಭೀತಿಯಿಲ್ಲದೆ ನಿಶ್ಚಿತ ದರದಲ್ಲಿ ಲಾಭವನ್ನು ಪಡೆಯುತ್ತಿರು ನೆ. ಇದು ತರ್ಕಬದ್ಧವೇ? ಬುದ್ಧಿ ಮತ್ತು ವಿವೇಕ ಇದನ್ನು ಸರಿಯೆನ್ನುತ್ತದೆಯೇ? ಮಾನವ ಹಜ ನ್ಯಾಯ ಪ್ರಜ್ಞೆಯಾಗಲಿ ನೈತಿಕ ಮೌಲ್ಯಗಳಾಗಲೀ ಇದನ್ನು ಅನುಮತಿಸಲು ಸಾಧ್ಯವೇ?

ಡ್ಡಿ ಮತ್ತು ಲಾಭ?

ಅರ್ಥಶಾಸ್ತ್ರ ಮತ್ತು ನೈತಿಕತೆಯ ದೃಷ್ಟಿಯಿಂದ ವ್ಯಾಪಾರ-ವಹಿವಾಟುಗಳಿಂದ ಬರುವ ಭ ಮತ್ತು ಬಡ್ಡಿಗಳ ಮಧ್ಯೆ ಇರುವ ಮೂಲಭೂತ ವ್ಯತ್ಯಾಸಗಳನ್ನು ನಾಲ್ಕು ಅಂಶಗಳಲ್ಲಿ ಕ್ಷೇಪಿಸಬಹುದು.

1. ಬಡ್ಡಿಯ ವ್ಯವಹಾರವು ಒಬ್ಬನಿಗೆ ಲಾಭ ಮತ್ತು ಇನ್ನೊಬ್ಬನಿಗೆ ನಷ್ಟವನ್ನುಂಟು ಾಡುತ್ತದೆ ಅಥವಾ ಒಬ್ಬನಿಗೆ ನಿರ್ದಿಷ್ಟ ಲಾಭವನ್ನು ಖಾತ್ರಿಪಡಿಸಿ ಇನ್ನೊಬ್ಬನಿಗೆ ನಿರ್ದಿಷ್ಟ ಲಾಭವನ್ನೊದಗಿಸುತ್ತದೆ. ವ್ಯಾಪಾರದಲ್ಲಿ ಮಾರಾಟಗಾರ ಮತ್ತು ಗ್ರಾಹಕರ ಧ್ಯೆ ಲಾಭದ ಸರಿಸಮಾನ ವಿನಿಮಯವಾಗುತ್ತದೆ. ಗ್ರಾಹಕನು ತಾನು ಖರೀದಿಸಿದ

ವಸ್ತುವಿನಿಂದ ಪ್ರಯೋಜನ ಪಡೆಯುತ್ತಾನೆ. ವ್ಯಾಪಾರಿಯು ಅದಕ್ಕಾಗಿ ವ್ಯಯಿಸಿದ ಶ್ರಮ ಬುದ್ಧಿ, ಸಾಮರ್ಥ್ಯ ಮತ್ತು ಸಮಯದ ಪ್ರತಿಫಲ ಪಡೆಯುತ್ತಾನೆ.

2. ವ್ಯಾಪಾರದಲ್ಲಿ ಎಷ್ಟು ಲಾಭ ಬಂದರೂ ಅದು ಒಂದು ಸಲ ಮಾತ್ರ. ಆದ ಬಡ್ಡಿಗೆ ಹಣ ಕೊಟ್ಟವನು ಅದನ್ನು ನಿರಂತರವಾಗಿ ಪಡೆಯುತ್ತಿರುತ್ತಾನೆ. ಕಾಲ ಕಳೆದಂ ಅವನ ಬಡ್ಡಿಯೂ ಹೆಚ್ಚುತ್ತಲೇ ಹೋಗುತ್ತದೆ. ಸಾಲಗಾರನು ತಾನು ಪಡೆದ ಸಾಲದಿಂ ಪ್ರಯೋಜನ ಪಡೆಯುವುದಕ್ಕೆ ಒಂದು ನಿರ್ದಿಷ್ಟ ಮಿತಿಯಿದೆ. ಆದರೆ ಸಾಲ ಕೊಟ್ಟಾತನಿ ಅವನು ಅದರ ಬದಲಿಗೆ ಪಡೆಯುವ ಲಾಭಕ್ಕೆ ಮಿತಿಯೇ ಇಲ್ಲ. ಕೆಲವೊಮ್ಮೆ ಸಾಲಗಾರ ಸಂಪೂರ್ಣ ಜೀವನದ ಸಂಪಾದನೆ, ಅವನ ಸಾಧನಗಳು ಮಾತ್ರವಲ್ಲ ಉಡುವ ಬಟ್ಟೆ ಮತ ಮನೆಯ ಪಾತ್ರೆಗಳನ್ನು ಮಾರಿದರೂ ಸಾಲ ಕೊಟ್ಟಾತನ ಸಾಲ ಹಾಗೇ ಉಳಿದಿರುತ್ತ

3. ವ್ಯಾಪಾರದಲ್ಲಿ ವಸ್ತು ಮತ್ತದರ ಬೆಲೆಯ ವಿನಿಮಯದೊಂದಿಗೆ ವ್ಯವಹಾ ಮುಗಿದು ಹೋಗುತ್ತದೆ. ಭೂ ಸೊತ್ತಿನ ಗೇಣಿ, ಮನೆ ಮತ್ತಿತರ ಸಾಧನಗಳ ಬಾಡಿಗೆಂ ವ್ಯವಹಾರದಲ್ಲಿ ಆ ವಸ್ತುಗಳು ಖರ್ಚಾಗಿ ಹೋಗುವುದಿಲ್ಲ. ಅವು ಬಾಡಿಗೆಯ ಅವ ಮುಗಿದ ಬಳಿಕ ಹಾಗೆಯೇ ಹಿಂತಿರುಗಿಸಲ್ಪಡುತ್ತವೆ. ಆದರೆ ಸಾಲ ಪಡೆದಾತನು ಅದನ ಖರ್ಚು ಮಾಡಿ ಬಿಡುತ್ತಾನೆ. ಅವನು ಆ ಹಣವನ್ನು ಮತ್ತೆ ಸಂಪಾದಿಸಿ ಬಡ್ಡಿ ಸಹಿ ಮರಳಿಸಬೇಕಾಗುತ್ತದೆ.

4. ವ್ಯಾಪಾರ, ಕೃಷಿ ಮತ್ತು ಕೈಗಾರಿಕೋದ್ಯಮಗಳಲ್ಲಿ ವ್ಯಕ್ತಿಯು ದೈಹಿಕ ಶ್ರಮ ಬೌದ್ಧಿಕ ಶಕ್ತಿ ಮತ್ತು ಸಮಯವನ್ನು ವ್ಯಯಿಸಿ ಅನಿಶ್ಚಿತವಾದ ಪ್ರತಿಫಲ ಪಡೆಯುತ್ತಾ ಆದರೆ ಬಡ್ಡಿ ವ್ಯವಹಾರದಲ್ಲಿ ಒಬ್ಬನು ತನ್ನ ಉಳಿತಾಯವನ್ನು ಮಾತ್ರ ಹೂಡಿ ಯಾ ಪರಿಶ್ರಮವೂ ಇಲ್ಲದೆ ಇತರರ ಸಂಪಾದನೆಯಲ್ಲಿ ಸಿಂಹಪಾಲನ್ನು ಪೂರ್ವ ನಿಶ್ಚಿತವಾಗಿ ವಂತೆಯೇ ಪಡೆಯುತ್ತಿರುತ್ತಾನೆ.

ಮಾನವೀಯ ಮೌಲ್ಯಗಳಿಗೆ ವ್ಯತಿರಿಕ್ತ

ಈ ಕಾರಣಗಳಿಂದಾಗಿ ವ್ಯಾಪಾರವು ಮಾನವ ನಾಗರಿಕತೆಯ ನಿರ್ಮಾಣಕ್ಕೆ ಪೂರ ವಾದರೆ ಬಡ್ಡಿಯ ವ್ಯವಹಾರವು ಅವರ ವಿನಾಶಕ್ಕೆ ಕಾರಣವಾಗುತ್ತದೆ. ನೈತಿಕವಾ ಬಡ್ಡಿಕೋರತನವು ಮನುಷ್ಯರಲ್ಲಿ ಲೋಭ, ಸ್ವಾರ್ಥ, ದೌರ್ಜನ್ಯ, ನಿರ್ದಯೆ, ಧನಪೂ ಯಂತಹ ದುರ್ಗುಣಗಳನ್ನುಂಟು ಮಾಡಿ ಪರಸ್ಪರ ಸಹಾಯ-ಸಹಕಾರ, ಸಹಾನುಭೂತಿಂ ಬೇರನ್ನೇ ಕಿತ್ತೊಗೆಯುತ್ತದೆ. ಇನ್ನೊಂದೆಡೆ ಬಡ್ಡಿ ಕೊಡುವವರಲ್ಲಿ ತಿರಸ್ಕಾರ, ಕ್ರೋಧ ಪ್ರತೀಕಾರ ಮನೋಭಾವ, ಮತ್ಸರಗಳಂತಹ ನೈತಿಕ ಜಾಡ್ಯಗಳುಂಟಾಗುತ್ತವೆ. ಇದುವ ಧನಿಕರಲ್ಲಿ ಬಂಡವಾಳಶಾಹೀ ಪ್ರವೃತ್ತಿ ಮತ್ತು ಬಡವರಲ್ಲಿ ಕಮ್ಯೂನಿಸ್ಟ್ ಮನೋವೃತ್ತಿಂ ಬೆಳವಣಿಗೆಗೆ ಕಾರಣವಾಗಿ ಅದು ವರ್ಗ ಸಂಘರ್ಷದಲ್ಲಿ ಪರ್ಯವಸಾನಗೊಳ್ಳುತ್ತದೆ.

ಪ್ರಕೃತಿ ನಿಯಮದಂತೆ ಸಂಪತ್ತಿನ ವಿತರಣೆಯಲ್ಲಿ ತನ್ನ ನೈಜ ಅವಶ್ಯಕತೆಗಳಿಗಿಂತ ಕ ಪಾಲು ಪಡೆದವನು ಮಾತ್ರ ಬಡ್ಡಿಗೆ ಸಾಲ ಕೊಡಬಲ್ಲ ಅಥವಾ ಬಡ್ಡಿ ಸಂಪಾದನೆಗಾಗಿ ನ್ನು ಠೇವಣಿ ಇಡಬಲ್ಲನೆಂಬುದು ಎಲ್ಲರಿಗೂ ತಿಳಿದ ವಿಷಯ. ಒಬ್ಬನಿಗೆ ಆತನ ನೈಜ ಶ್ಯಕತೆಗಳಿಗಿಂತ ಹೆಚ್ಚಿನ ಸಂಪತ್ತು ದೊರೆತಿದ್ದರೆ ಅದು ಅಲ್ಲಾಹನ ಅನುಗ್ರಹವೆಂದು ತ್ರ ಕುರ್‌ಆನ್ ಹೇಳುತ್ತದೆ. ಈ ಅನುಗ್ರಹದ ಕೃತಜ್ಞತೆಗಾಗಿ ಇತರರಿಗೆ ಝಕಾತ್, ಧರ್ಮ, ಬಡ್ಡಿ ರಹಿತ ಸಾಲಗಳ ರೂಪದಲ್ಲಿ ನೆರವಾಗಬೇಕೆಂದೂ ಅದು ಆದೇಶಿಸುತ್ತದೆ. ಕ್ಕೆ ವ್ಯತಿರಿಕ್ತವಾಗಿ ಸಂಪತ್ತಿನ ವಿತರಣೆಯಲ್ಲಿ ತನ್ನ ಆವಶ್ಯಕತೆಗಳಿ ಗಿಂತ ಕಡಿಮೆ ಪಾಲು ವವನಿಂದ ಅದರಿಂದಲೂ ಒಂದಂಶವನ್ನು ಕಸಿದುಕೊಳ್ಳುವುದು ಮಹಾ ಕೃತಘ್ನತೆ, ಮ, ಅನ್ಯಾಯ ಮತ್ತು ದುಷ್ಕರ್ಮವೆಂದು ಅದು ಪರಿಗಣಿಸುತ್ತದೆ.

ಆದುದರಿಂದ ಇಸ್ಲಾಮ್ ಬಡ್ಡಿಯ ಎಲ್ಲ ವ್ಯವಹಾರಗಳನ್ನು ಸಂಪೂರ್ಣವಾಗಿ ಧಿಸಿದೆ. ಇಸ್ಲಾಮೀ ರಾಷ್ಟ್ರದಲ್ಲಿ ಬಡ್ಡಿಯ ವ್ಯವಹಾರವು ಒಂದು ದಂಡನಾರ್ಹ ರಾಧವಾಗಿದೆ. ಬಡ್ಡಿ ಪಡೆಯುವುದು, ಕೊಡುವುದು, ಬಡ್ಡಿ ವ್ಯವಹಾರಗಳಿಗೆ ಸಾಕ್ಷಿ ಲ್ಲುವುದು, ಅದರ ಲೆಕ್ಕಪತ್ರಗಳನ್ನು ಬರೆಯುವುದು ಹಾಗೂ ಬಡ್ಡಿಯ ವ್ಯವಹಾರಕ್ಕೆ ನಾಗುವ ಎಲ್ಲ ಕಾರ್ಯಗಳೂ ಇಸ್ಲಾಮಿನಲ್ಲಿ ನಿಷಿದ್ಧವಾಗಿದೆ.

❖ ❖ ❖ ❖

ಅಧ್ಯಾಯ: ಹದಿನೇಳು

ಇಸ್ಲಾಮ್ ಮತ್ತು ಪರಧರ್ಮ ಸಹಿಷ್ಣು

ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ವ್ಯಾಪಕಗೊಳಿಸಲಾಗುತ್ತಿರುವ ಇನ್ನೊಂ
ಸಂಶಯ ಇಸ್ಲಾಮ್ ಪರಧರ್ಮ ಸಹಿಷ್ಣುತೆಯ ಧರ್ಮವಲ್ಲವೆಂಬುದೂ ಮುಸ್ಲಿಮ
ಅತ್ಯಧಿಕ ಅಸಹಿಷ್ಣುಗಳೆಂಬುದೂ ಆಗಿದೆ. ವಾಸ್ತವದಲ್ಲಿ ಇದು ಬ್ರಿಟಿಷ್ ಸಾಮ್ರಾಜ್ಯಶಾ
ಶಕ್ತಿಯು ಭಾರತದಲ್ಲಿ ತನ್ನ ಆಡಳಿತವನ್ನು ಭದ್ರಪಡಿಸಲು ಸೃಷ್ಟಿಸಿ ಪ್ರಚಾರಪಡಿಸಿದ ಮಿ
ಹಾಗೂ ಒಡೆದು ಆಳುವ ಕುಟಿಲ ತಂತ್ರವಾಗಿದೆ. ಬ್ರಿಟಿಷ್ ಆಧಿಪತ್ಯವು ಭಾರತದ
ಸ್ಥಾಪಿತವಾಗುವುದಕ್ಕೆ ಮುಂಚೆ ಸುಮಾರು ಒಂದು ಸಹಸ್ರ ವರ್ಷಗಳ ಕಾಲ ಇಲ್ಲಿ
ಬಹುದೊಡ್ಡ ಭಾಗದಲ್ಲಿ ಮುಸ್ಲಿಮ್ ಅರಸರ ಆಳ್ವಿಕೆ ಇತ್ತೆಂಬುದು ಸ್ಮರಣೀಯ
ಭಾರತದಲ್ಲಿ ಮಾತ್ರವಲ್ಲ ಇಂಡೋನೇಶ್ಯಾ, ಮಲೇಶ್ಯಾಗಳಿಂದ ಹಿಡಿದು ಟರ್ಕಿ, ಈಜಿಪ್
ಮತ್ತು ಮೊರೊಕ್ಕೊ ವರೆಗಿರುವ ಹತ್ತಾರು ಮುಸ್ಲಿಮ್ ರಾಷ್ಟ್ರಗಳಲ್ಲಿ ಮುಸ್ಲಿಮೇತ
ಅಲ್ಪಸಂಖ್ಯಾತರು ಅನೇಕ ಶತಮಾನಗಳಿಂದ ಜೀವಿಸುತ್ತಿದ್ದಾರೆ. ಆದರೆ ಇಂದಿನ ತ
ಅವರ ವಿರುದ್ಧ ಅಲ್ಲಿಯ ಮುಸ್ಲಿಮರು ಪಕ್ಷಪಾತವನ್ನಾಗಲೀ ಅಸಹಿಷ್ಣುತೆಯನ್ನಾಗ
ತೋರಿಸಿದ್ದಿಲ್ಲ. ಇಸ್ಲಾಮ್ ಸ್ವೀಕರಿಸಲು ನಿರಾಕರಿಸಿದುದಕ್ಕೆ ಯಾರನ್ನಾದರೂ ಕೊಂ
ಉದಾಹರಣೆ ಎಲ್ಲೂ ಸಿಗುವುದಿಲ್ಲ. ಮುಸ್ಲಿಮೇತರರ ಮಾನ, ಪ್ರಾಣ, ಸೊತ್ತು-ವಿತ್ತಗಳ
ನಾಶಪಡಿಸುವ ಯಾವ ಪ್ರಯತ್ನವೂ ಅಲ್ಲಿ ನಡೆಯಲಿಲ್ಲ. ಎಲ್ಲಿಯೂ ಅವರನ್ನು ಬಲಾತ್ಕಾ
ಮತ್ತು ಹಿಂಸೆಯ ಮೂಲಕ ಮತಾಂತರಿಸಲಾಗಿಲ್ಲ. ಅವರ ವಿರುದ್ಧ ಆರ್ಥಿಕ ಕ್ಷೇತ್ರಗಳ
ತಾರತಮ್ಯ ತೋರಿ ಅವರನ್ನು ಹಿಂದುಳಿದವರಾಗಿ ಮಾಡಲಾಗಿಲ್ಲ.

ಇಸ್ಲಾಮೀ ಸಮಾಜದಲ್ಲಿ ಮುಸ್ಲಿಮೇತರರಿಗೆ ಧಾರ್ಮಿಕ ವಿಶ್ವಾಸ, ನಂಬಿಕೆ
ಸ್ವಾತಂತ್ರ್ಯ, ಆರಾಧನೆ-ಆಚಾರಗಳ ಸ್ವಾತಂತ್ರ್ಯ ಮತ್ತು ತಂತಮ್ಮ ಪರ್ಸನಲ್ ಲಾ (ವ್ಯ
ನಿಯಮ)ದ ಪ್ರಕಾರ ನಡೆಯುವ ಸ್ವಾತಂತ್ರ್ಯವನ್ನು ಪರಿಪೂರ್ಣವಾಗಿ ನೀಡಲಾಗಿದೆ. ಒಂ
ಇಸ್ಲಾಮೀ ಸರಕಾರವು ಮುಸ್ಲಿಮರಂತೆ ಇತರೆಲ್ಲ ಧರ್ಮೀಯರ ವೈಯಕ್ತಿಕ ವ್ಯವಹಾ
ಗಳಲ್ಲಿಯೂ ಅವರ ಪರ್ಸನಲ್ ಲಾ ಅಥವಾ ಧಾರ್ಮಿಕ ವಿಧಿಗಳಂತೆಯೇ ತೀರ್ಮಾನಿಸುತ್ತ
ಇಸ್ಲಾಮೀ ಆಡಳಿತ ವ್ಯವಸ್ಥೆಗಳಲ್ಲಿ ನಾಗರಿಕ ಮತ್ತು ಆರ್ಥಿಕ ವ್ಯವಹಾರಗಳಿಗೆ ಸಂಬಂ

ಟ್ಟ ಕಾನೂನುಗಳ ಬುನಾದಿಯು ಎಲ್ಲ ಧರ್ಮಗಳೂ ಒಪ್ಪುವಂತಹ ಸರ್ವಸಮ್ಮತ ್ಯಗಳ ಮೇಲೆ ಆಧಾರಿತವಾಗಿರುತ್ತದೆ.

ಶ್ಲಾಮ್ ಖಡ್ಗದಿಂದ ಪಸರಿಸಿತೇ?

ವೈಯಕ್ತಿಕವಾಗಿಯಾಗಲೀ ಸರಕಾರೀ ಮಟ್ಟದಲ್ಲಾಗಲೀ ಇಸ್ಲಾಮ್ ಯಾರಿಗೂ ಇತರರ ೀಲೆ ತಮ್ಮ ಧರ್ಮವನ್ನು ಒತ್ತಾಯಪೂರ್ವಕ ಹೇರುವ ಅಥವಾ ಯಾರನ್ನೂ ಬಲಾತ್ಕಾರ, ೖಡ ಮತ್ತು ವಂಚನೆ-ಮೋಸಗಳ ಮೂಲಕ ಮತಾಂತರಿಸುವ ಹಕ್ಕನ್ನು ನೀಡುವುದಿಲ್ಲ. ಖ ಪವಿತ್ರ ಕುರ್‌ಆನಿನ ಈ ಕೆಳಗಿನ ವಚನಗಳಲ್ಲಿ ಸ್ಪಷ್ಟವಾಗಿ ಆದೇಶಿಸಲ್ಪಟ್ಟಿದೆ:

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ."

(ಪವಿತ್ರ ಕುರ್‌ಆನ್: 2: 256)

ವಾಸ್ತವದಲ್ಲಿ ಯಾವುದೇ ವಿಚಾರವನ್ನು ಮನುಷ್ಯನ ಮೇಲೆ ಬಲಾತ್ಕಾರವಾಗಿ ಹೇರಲು ಧ್ಯವಿಲ್ಲ. ಖಡ್ಗದ ಬಲದಿಂದ ಜನರ ಶರೀರವನ್ನು ಮಣಿಸಬಹುದೇ ವಿನಾ ಅವರ ಮನ ನ್ನು ಪರಿವರ್ತಿಸಲು ಮತ್ತು ಅದನ್ನು ಜಯಿಸಲು ಸಾಧ್ಯವಿಲ್ಲ. ಇಸ್ಲಾಮಿನ ವೈಚಾರಿಕ, ನೈತಿಕ ತ್ತು ಆಚಾರ ಪದ್ಧತಿಯನ್ನು ಯಾರ ಮೇಲೂ ಬಲಾತ್ಕಾರವಾಗಿ ಹೇರುವ ಪ್ರಶ್ನೆಯೇ ಇಲ್ಲ.

"ಹೇಳಿರಿ, ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ."

(ಪವಿತ್ರ ಕುರ್‌ಆನ್: 109: 6)

ನನ್ನ ಧರ್ಮವನ್ನು ನಾನು ನಿಮ್ಮ ಮೇಲೆ ಒತ್ತಾಯ-ಬಲಾತ್ಕಾರಗಳಿಂದ ಹೇರುವುದಿಲ್ಲ. ಂತೆಯೇ ನೀವೂ ನಿಮ್ಮ ಧರ್ಮವನ್ನು ಬಲಾತ್ಕಾರದಿಂದ ಹೇರಲು ಪ್ರಯತ್ನಿಸಬೇಡಿ. ಮ್ಮಿಂದ ಅದು ಸಾಧ್ಯವೂ ಅಲ್ಲ ಎಂಬುದನ್ನು ಅಲ್ಲಾಹನು ಮೇಲಿನ ಚಿಕ್ಕ ವಾಕ್ಯದ ೂಲಕ ಮಕ್ಕಾದ ಸತ್ಯನಿಷೇಧಿಗಳಿಗೆ ತಿಳಿಸುವಂತೆ ಆಜ್ಞಾಪಿಸಿದ್ದಾನೆ. ನಿಮ್ಮ ಯಾವುದೇ ದರಿಕೆ ಅಥವಾ ಆಮಿಷ ನಮ್ಮನ್ನು ನಮ್ಮ ಧರ್ಮದಿಂದ ಹಿಂಜರಿಸಲಾರದೆಂಬ ೋಷಣೆಯೂ ಈ ಸೂಕ್ತದಲ್ಲಿ ಅಡಕವಾಗಿದೆ.

ರ್ವ ಸಮಾನತೆ

ತೌಹೀದ್ ಅಥವಾ ಏಕದೇವಾರಾಧನೆಯು ಇಸ್ಲಾಮೀ ವಿಚಾರಧಾರೆಯ ತಿರುಳಾಗಿದೆ ಂಬುದನ್ನು ನಾವು ಈಗಾಗಲೇ ಕಂಡುಕೊಂಡಿದ್ದೇವೆ. ಇಸ್ಲಾಮೀ ಜೀವನ ವ್ಯವಸ್ಥೆಯ ಂಪೂರ್ಣ ಸೌಧವು ಏಕದೇವವಿಶ್ವಾಸದ ಬುನಾದಿಯ ಮೇಲೆ ನಿಂತಿದೆ. ಮಾನವೀಯ ಏಕತೆ ುತ್ತು ಸಮಾನತೆಯು ಈ ವಿಶ್ವಾಸದ ಅನಿವಾರ್ಯ ಬೇಡಿಕೆಯಾಗಿದೆ. ಅದು ಎಲ್ಲ ುನುಷ್ಯರನ್ನೂ ಏಕದೇವನ ಸೃಷ್ಟಿಯೆಂದೂ ಎಲ್ಲರೂ ಸಮಾನರೆಂದೂ ಪ್ರತಿಪಾದಿಸುತ್ತದೆ. ಾನವಕುಲವು ಅಲ್ಲಾಹನ ಏಕ ಕುಟುಂಬವಾಗಿದ್ದು ಬಡವ-ಬಲ್ಲಿದ, ಬಿಳಿಯ-ಕರಿಯ,

ಆರ್ಯ-ದ್ರಾವಿಡ, ಪಾಶ್ಚಾತ್ಯ-ಪೌರ್ವಾತ್ಯ ಎಂಬ ನೆಲೆಯಲ್ಲಿ ಆ ಕುಟುಂಬದ ಸ
ಮಧ್ಯೆ ತಾರತಮ್ಯಕ್ಕೆ ಅವಕಾಶವೇ ಇಲ್ಲ. ಮಾನವರನ್ನು ಮಾನವರೆಂಬ ನೆಲೆಯಲ್ಲಿ ಗೌರವಿಸಬೇಕೆಂದು ಪವಿತ್ರ ಕುರ್‌ಆನ್ ಆಜ್ಞಾಪಿಸುತ್ತದೆ: "ಖಂಡಿತವಾಗಿಯೂ ಆದಮರ ಸಂತತಿಯನ್ನು ಗೌರವಾನ್ವಿತಗೊಳಿಸಿದ್ದೇವೆ." **(ಪವಿತ್ರ ಕುರ್‌ಆನ್: 17: 70)**

ಇಸ್ಲಾಮಿನ ಮಾನವೀಯ ಏಕತೆ ಮತ್ತು ಸಮಾನತೆಯ ತತ್ವದ ಕುರಿತು ಪ್ರ
ಚಿಂತಕರಾದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಈ ರೀತಿ ಬರೆದಿರುವರು:

"ನಾನು ಮತ್ತು ಎಲ್ಲ ವಿಚಾರವಂತರು ಇಸ್ಲಾಮನ್ನು ಇಂದು ಜಗತ್ತಿನಲ್ಲಿ ಕಾ
ಪ್ರವೃತ್ತವಾಗಿರುವ ಏಕೈಕ ಪ್ರಜಾಸತ್ತಾತ್ಮಕ ಧರ್ಮವೆಂದು ಪರಿಗಣಿಸುತ್ತೇವೆ. ಓ
ನಿಷ್ಠಾವಂತ ಹಿಂದುವಾಗಿಯೂ ನಾನು ಇದನ್ನು ಧೈರ್ಯದಿಂದ ಹೇಳಬಲ್ಲೆ. ನನ್ನ ಧರ
ಅದರ ಮೂಲಭೂತ ಸಿದ್ಧಾಂತದ ಹೊರತಾಗಿಯೂ ಮಾನವ ಏಕತೆಯ ತತ್ವ
ಕಾರ್ಯರೂಪಕ್ಕೆ ತರುವಲ್ಲಿ ಸಫಲವಾಗಿಲ್ಲ. ಇಸ್ಲಾಮಿನ ಹೊರತು ಬೇರಾವ ಧರ್ಮ
ಅದರ ಸಿದ್ಧಾಂತ ಏನೇ ಆಗಿರಲಿ- ದೇವನ ಮುಂದೆ ಮನುಷ್ಯ ಸಮಾನತೆ ಮತ್ತು ಏಕ
ಮೂಲ ತತ್ವವನ್ನು ಕಾರ್ಯರೂಪಕ್ಕೆ ತಂದಿಲ್ಲ." **(Eastern Times 22:12-44)**

ಮಾನವ ಪ್ರಾಣದ ಪಾವಿತ್ರ್ಯ

ಮಾನವ ಪ್ರಾಣವನ್ನು ಇಸ್ಲಾಮ್ ಅತ್ಯಧಿಕ ಪವಿತ್ರವೆಂದು ಪರಿಗಣಿಸುತ್ತದೆ. ನಾ
ಸಮ್ಮತ ಕಾರಣವಿಲ್ಲದೆ ಯಾರ ಪ್ರಾಣ ಹರಣವನ್ನೂ ಅದು ಸಮ್ಮತಿಸುವುದಿಲ್ಲ.

"ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನು
ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅ
ಸಕಲ ಮಾನವ ಕೋಟಿಯನ್ನು ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವ
ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ."

(ಪವಿತ್ರ ಕುರ್‌ಆನ್: 5:

ಇನ್ನೊಂದೆಡೆ ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳ ವೈಶಿಷ್ಟ್ಯಗಳನ್ನು ವಿವರಿಸುತ್ತಾ
ರೀತಿ ಹೇಳಿದೆ: "ಅಲ್ಲಾಹನ ಜೊತೆ ಇನ್ನಾವ ಆರಾಧ್ಯರನ್ನೂ ಅವರು ಕರೆದು ಪ್ರಾರ್ಥಿಸುವುದಿ
ಅಲ್ಲಾಹನು ನಿಷಿದ್ಧಗೊಳಿಸಿದ ಯಾವ ಜೀವವನ್ನೂ ಅನ್ಯಾಯವಾಗಿ ವಧಿಸುವುದಿಲ್ಲ.

(ಪವಿತ್ರ ಕುರ್‌ಆನ್: 25:

ಪ್ರವಾದಿ(ಸ) ಈ ರೀತಿ ಹೇಳಿರುವರು: ಮಹಾ ಪಾಪಗಳಲ್ಲಿ ಅತಿದೊಡ್ಡದು ದ
ಸಹಭಾಗಿತ್ವವಾಗಿದೆ. ಅನಂತರ ಮಾನವ ಪ್ರಾಣಹರಣ, ಅನಂತರ ತಂದೆ ತಾಯಿಗ
ತೋರುವ ಅವಿಧೇಯತೆ, ಅನಂತರ ಸುಳ್ಳು ಹೇಳುವುದಾಗಿದೆ. (ಬುಖಾರಿ)

ಇಸ್ಲಾಮ್ ತನ್ನ ಅನುಯಾಯಿಗಳಿಗೆ ಎಲ್ಲ ಸಂದರ್ಭಗಳಲ್ಲಿಯೂ ಪೂರ್ಣ ನ್ಯಾಯವ

ಾಲಿಸುವಂತೆ ಆಜ್ಞಾಪಿಸುತ್ತದೆ. ಎಲ್ಲ ಸಮಸ್ಯೆಗಳನ್ನೂ ಅದರ ಪರಿಣಾಮವನ್ನು ಲೆಕ್ಕಿಸದೆ ್ಯಾಯಪೂರ್ಣವಾಗಿ ಬಗೆಹರಿಸಬೇಕೆಂದು ಆದೇಶಿಸುತ್ತದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಮಾನರು. ಇಸ್ಲಾಮ್ ನ್ಯಾಯದ ವಿಷಯದಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರರು ಂಬ ಯಾವುದೇ ತಾರತಮ್ಯ ಮಾಡುವುದಿಲ್ಲ.

"ಜನರ ಮಧ್ಯೆ ತೀರ್ಪು ನೀಡುವಾಗ ನ್ಯಾಯದೊಂದಿಗೆ ತೀರ್ಪು ನೀಡಿರಿ... ಎಂದು ಲ್ಲಾಹನು ನಿಮಗೆ ಆಜ್ಞಾಪಿಸುತ್ತಾನೆ." (ಪವಿತ್ರ ಕುರ್‌ಆನ್: 4: 58)

"ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ೀಡುತ್ತಾನೆ." (ಪವಿತ್ರ ಕುರ್‌ಆನ್: 16: 90)

"ನಮ್ಮ ಸಂದೇಶವಾಹಕರನ್ನು ನಾವು ಸುಸ್ಪಷ್ಟ ಪ್ರಮಾಣಗಳ ಸಹಿತ ಕಳುಹಿಸಿಕೊಟ್ಟೆವು. ಜನರು ನ್ಯಾಯದಲ್ಲಿ ಸ್ಥಿರಗೊಳ್ಳಲೆಂದು ಅವರ ಜೊತೆಯಲ್ಲಿ ಗ್ರಂಥವನ್ನೂ ನ್ಯಾಯದ ತಕ್ಕಡಿ ಯನ್ನೂ ಇಳಿಸಿದೆವು." (ಪವಿತ್ರ ಕುರ್‌ಆನ್: 57: 25)

"ಸತ್ಯವಿಶ್ವಾಸಿಗಳೇ! ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯ ವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೇ. ಕಕ್ಷಿಯು ಧನಿಕ ನಿರಲಿ ಬಡವನಿರಲಿ ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿರುತ್ತಾನೆ. ಆದುದರಿಂದ ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯಪಾಲನೆಯಿಂದ ಸರಿಯ ಬೇಡಿರಿ. ನೀವು ಗೂಢಾರ್ಥದ ಮಾತುಗಳನ್ನಾಡಿದರೆ ಅಥವಾ ಸತ್ಯದಿಂದ ನುಣುಚಿಕೊಂಡರೆ ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಕರ್ಮಗಳ ಅರಿವು ಅಲ್ಲಾಹನಿಗಿದೆ ಎಂಬುದು ಚೆನ್ನಾಗಿ ತಿಳಿದಿರಲಿ." (ಪವಿತ್ರ ಕುರ್‌ಆನ್: 4: 135)

ಸಾರ್ವತ್ರಿಕ ನ್ಯಾಯ

ತನ್ನವರು, ಪರರು, ಸ್ವಧರ್ಮೀಯರು, ಪರಧರ್ಮೀಯರು ಎಂಬ ಭೇದವಿಲ್ಲದೆ ಎಲ್ಲ ರೊಂದಿಗೂ ನ್ಯಾಯ ಪರಿಪಾಲಿಸುವಂತೆ ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಆಜ್ಞೆ ನೀಡಿದೆ. ಮಾತ್ರವಲ್ಲ ನಿಮ್ಮ ಶತ್ರುಗಳೊಂದಿಗೂ ನ್ಯಾಯ ಪಾಲಿಸಿರಿ ಎಂದು ಪವಿತ್ರ ಕುರ್‌ಆನ್ ಆಜ್ಞಾಪಿಸುತ್ತದೆ.

"ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ ನ್ಯಾಯದ ಸಾಕ್ಷ್ಯ ವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿದೆ. ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ ನೀವು ಮಾಡುತ್ತಿರುವುದನ್ನೆಲ್ಲಾ ಅಲ್ಲಾಹ್ ಚೆನ್ನಾಗಿ ಬಲ್ಲವನಾಗಿದ್ದಾನೆ." (ಪವಿತ್ರ ಕುರ್‌ಆನ್: 5: 8)

ಮುಸ್ಲಿಮರು ಈ ಆಜ್ಞೆಗಳನ್ನು ಸರಿಯಾಗಿ ಪಾಲಿಸುತ್ತಾ ಬಂದಿದ್ದಾರೆಂಬು ಇತಿಹಾಸ ಸಾಕ್ಷಿಯಾಗಿದೆ. ಪ್ರವಾದಿವರ್ಯರು(ಸ) ಕಳ್ಳತನದ ಒಂದು ಅಪರಾಧಕ ಫಾತಿಮಾ ಎಂಬ ಓರ್ವ ಅತ್ಯಂತ ಪ್ರಭಾವಶಾಲೀ ಮಹಿಳೆಯ ಕೈ ಕಡಿಯುವ ನೀಡಿದ್ದರು. ಕೆಲವು ಪುರ ಪ್ರಮುಖರು ಆಕೆಯನ್ನು ಕ್ಷಮಿಸಬೇಕೆಂದು ಪ್ರವಾದಿವರ್ಯರಲ್ಲಿ ವಿನಂತಿಸಿದಾಗ ಅವರು ಈ ರೀತಿ ಹೇಳಿದರು:

"ಸಾಕ್ಷಾತ್ ಮುಹಮ್ಮದ್‌ರ(ಸ) ಪುತ್ರಿ ಫಾತಿಮಾ ಕೂಡಾ ಈ ಅಪರಾಧವೆಸಗಿ ಅವಳಿಗೂ ತಪ್ಪದೆ ಇದೇ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು."

ಹಝ್ರತ್ ಉಮರ್‌ರವರ(ರ) ಆಡಳಿತ ಕಾಲದಲ್ಲಿ ಬಕ್ರ್ ಬಿನ್ ವಾಇಲ್ ಗೋತ್ರ ಒಬ್ಬ ವ್ಯಕ್ತಿ ಹಿರಾದ ಓರ್ವ ಮುಸ್ಲಿಮೇತರನನ್ನು ವಧಿಸಿದನು. ಹ. ಉಮರ್(ರ) ಮೃ ವಾರೀಸುದಾರರಿಗೆ ಆ ವ್ಯಕ್ತಿಯನ್ನು ಒಪ್ಪಿಸಿದರು ಮತ್ತು ಅವರು ಆ ಮುಸ್ಲಿಮನ ವಧಿಸಿದರು.

ಮೂರನೆಯ ಖಲೀಫ ಹ. ಉಸ್ಮಾನ್‌ರವರ(ರ) ಕಾಲದಲ್ಲಿ ಹ. ಉಮರ್‌ರ(ಓರ್ವ ಪುತ್ರನಿಗೆ ಓರ್ವ ಮುಸ್ಲಿಮೇತರ ಪ್ರಜೆಯ ಕೊಲೆಗಾಗಿ ಮರಣದಂಡನೆ ವಿ ಲಾಯಿತು.

ನಾಲ್ಕನೆಯ ಖಲೀಫ ಹ. ಅಲೀಯವರ(ರ) ಕಾಲದಲ್ಲಿಯೂ ಓರ್ವ ದಿ (ಇಸ್ಲಾಮೀ ರಾಷ್ಟ್ರದ ಮುಸ್ಲಿಮೇತರ ಪ್ರಜೆ)ಯನ್ನು ಕೊಂದ ಅಪರಾಧಕ್ಕಾಗಿ ಓ ಮುಸ್ಲಿಮನಿಗೆ ಮರಣ ದಂಡನೆಯನ್ನು ವಿಧಿಸಲಾಗಿತ್ತು. ಆದರೆ ಮೃತರ ವಾರೀಸುದಾರ ಆ ಮುಸ್ಲಿಮ್ ವ್ಯಕ್ತಿಯಿಂದ ಪರಿಹಾರ ಧನ ಪಡೆದು ಅವನನ್ನು ಕ್ಷಮಿಸಿದರು. ಆಗ ಅಲೀ(ರ) ಹೇಳಿದ ಮಾತು ಅತ್ಯಂತ ಗಮನಾರ್ಹವಾಗಿತ್ತು:

"ನಮ್ಮ ದಿಮ್ಮಿ (ಇಸ್ಲಾಮೀ ರಾಷ್ಟ್ರದ ಮುಸ್ಲಿಮೇತರ ಪ್ರಜೆ)ಯ ರಕ್ತ ನ ರಕ್ತದಷ್ಟೇ ಪವಿತ್ರವಾಗಿದೆ ಮತ್ತು ಆತನ ಸೊತ್ತು ನಮ್ಮ ಸೊತ್ತಿನಂತೆಯೇ ಅತಿಕ್ರಮಿಸಲಾ ಸೊತ್ತಾಗಿದೆ."

ಮುಸ್ಲಿಮರು ಧಾರ್ಮಿಕವಾಗಿ ಅವನತಿಯ ಪಥವನ್ನು ತುಳಿಯಲಾರಂಭಿಸಿದ ಬಳಿಕ ಈ ನ್ಯಾಯನಿಷ್ಠೆಯ ನಿದರ್ಶನಗಳು ಅಪರೂಪವಾಗಿರಲಿಲ್ಲ.

ಓರ್ವ ಹಿಂದೂ ಪ್ರಜೆಯ ದೂರಿನ ಮೇರೆಗೆ ನ್ಯಾಯಾಧೀಶರು ಮುಹಮ್ಮದ್ ಬಿ ತುಗ್‌ಲಕನಿಗೆ ಸಮನ್ಸ್ ಜಾರಿಗೊಳಿಸಿ, ಅವರು ನ್ಯಾಯಾಧೀಶರ ಮುಂದೆ ಹಾಜರಾ ಘಟನೆ, ಓರ್ವ ವರ್ತಕನ ಹೆಂಡತಿಯೊಡನೆ ಅಸಭ್ಯವಾಗಿ ವರ್ತಿಸಿದುದಕ್ಕೆ ಶೇರ್‌ಶಾ ಸೂ ತನ್ನ ಮಗನನ್ನೇ ದಂಡಿಸಿದ ಘಟನೆ, ಔರಂಗಝೇಬನು ತನ್ನ ಪ್ರಧಾನಿಯ ಪುತ್ರನಾ

ಝರ್ಾ ತಫಕ್ಕುರ್‌ನನ್ನು ಓರ್ವ ಮುಸ್ಲಿಮೇತರ ಮಹಿಳೆಯ ಮಾನಭಂಗ ಮಾಡಿದುದಕ್ಕೆ ್ಸಿದ ಘಟನೆ ನಮ್ಮ ದೇಶದ ಮುಸ್ಲಿಮ್ ರಾಜರ ಆಳ್ವಿಕೆಯ ಕಾಲದಲ್ಲಿದ್ದ ಇಸ್ಲಾಮಿೂ ಯನಿಷ್ಠೆಯ ಉಜ್ವಲ ನಿದರ್ಶನಗಳಾಗಿವೆ.

ೀಯುದಂತೆ ಮಾರ್ಗ

ಈ ವಿಷಯದಲ್ಲಿ ಇನ್ನೊಂದು ವಿಚಾರವೂ ಗಮನಾರ್ಹವಾಗಿದೆ. "ಧ್ಯೇಯ ತ್ತಮವಿದ್ದರೆ ಸಾಕು, ಅದನ್ನು ಸಾಧಿಸುವ ಮಾರ್ಗ ಯಾವುದಾದರೂ ಸರಿಯೆ" ಎನ್ನುವ ದವನ್ನು ಇಸ್ಲಾಮ್ ಅಂಗೀಕರಿಸುವುದಿಲ್ಲ. ಅದು ತನ್ನ ಅನುಯಾಯಿಗಳಿಗೆ ಧರ್ಮ ಚಾರದ ಆಜ್ಞೆ ನೀಡುತ್ತದೆ. ಆದರೆ ಅದಕ್ಕಾಗಿ ಹಿಂಸೆ, ಬಲಾತ್ಕಾರ, ಒತ್ತಾಯ, ಖಷಗಳಂತಹ ವಾಮ ಮಾರ್ಗಗಳನ್ನು ಅನುಸರಿಸಲು ಅನುಮತಿಸುವುದಿಲ್ಲ. ಬದಲಾಗಿ ವು ನೆಚ್ಚಿಕೊಂಡ ವಿಚಾರಧಾರೆ ಮತ್ತು ಜೀವನ ವ್ಯವಸ್ಥೆಯನ್ನು ಪ್ರಚಾರಪಡಿಸಲು ತ್ಯುತ್ತಮ, ನ್ಯಾಯಸಮ್ಮತ ಮತ್ತು ಗೌರವಾನ್ವಿತ ಮಾರ್ಗವನ್ನೇ ಅನುಸರಿಸಬೇಕೆಂದು ು ಆಜ್ಞಾಪಿಸುತ್ತದೆ. ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ:

"ಒಳಿತು- ಕೆಡುಕುಗಳು ಸರಿಸಮವಾಗಲಾರವು. ಕೆಡುಕನ್ನು ಅತ್ಯುತ್ತಮ ವಿಧಾನದಿಂದ ಿರೀಕರಿಸಿರಿ. ಆಗ ನಿಮ್ಮ ಜೊತೆ ವೈರ ಇರಿಸಿಕೊಂಡವನೂ ನಿಮ್ಮ ಆಪ್ತ ಮಿತ್ರನಾಗಿ ರ್ಪಡುವನು." (ಪವಿತ್ರ ಕುರ್‌ಆನ್: 41: 34)

ಪವಿತ್ರ ಕುರ್‌ಆನ್ ಒಳಿತನ್ನು ಪ್ರಚಾರಪಡಿಸುವ ಮತ್ತು ಕೆಡುಕಿನ ನಿರ್ಮೂಲನ ಡುವ ಕಾರ್ಯವನ್ನು ಸತ್ಯವಿಶ್ವಾಸಿಗಳಿಗೆ ವಹಿಸಿ ಕೊಟ್ಟಿದೆಯಾದರೂ ಅದಕ್ಕಾಗಿ ಂತಿಯುತ ಪ್ರಚಾರದ ಮಾರ್ಗವನ್ನು ಮಾತ್ರ ಅವಲಂಬಿಸಬೇಕೆಂದು ಅದು ಈ ಕ್ತದಲ್ಲಿ ಆಜ್ಞಾಪಿಸಿದೆ. ಅಲ್ಲಾಹನ ಧರ್ಮದ ಕಡೆಗೆ ಜನರನ್ನು ಯಾವ ರೀತಿ ಯಬೇಕೆಂದು ಪವಿತ್ರ ಕುರ್‌ಆನಿನ ಈ ಸೂಕ್ತದಲ್ಲಿ ಆದೇಶಿಸಲಾಗಿದೆ: "ಯುಕ್ತಿ ಮತ್ತು ುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ರರೊಂದಿಗೆ ಅತ್ಯುತ್ತಮ ರೀತಿಯಿಂದ ಚರ್ಚಿಸಿರಿ." (ಪವಿತ್ರ ಕುರ್‌ಆನ್: 16: 125)

ರಧರ್ಮ ದೂಷಣೆ

ಇತರರ ಧಾರ್ಮಿಕ ವಿಶ್ವಾಸ ಮತ್ತು ಆಚಾರಗಳು ನಮ್ಮ ದೃಷ್ಟಿಯಲ್ಲಿ ಎಷ್ಟೇ ಪ್ಪಾಗಿದ್ದರೂ ಅವರ ಆರಾಧ್ಯರನ್ನಾಗಲೀ ಅವರ ಪೂಜಾ ವಿಧಾನವನ್ನಾಗಲೀ ಅವರ ಆಚಾರ ಂಪ್ರದಾಯಗಳನ್ನಾಗಲೀ ಗೇಲಿ ಮಾಡುವುದನ್ನು ಇಸ್ಲಾಮ್ ನಿಷೇಧಿಸುತ್ತದೆ:

"ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರನ್ನು ಗಳಬೇಡಿರಿ. ಇದರಿಂದ ಅವರು ಶಿರ್ಕ್‌ಗಿಂತಲೂ ಮುಂದುವರಿದು ಅಜ್ಞಾನದಿಂದ

ಅಲ್ಲಾಹ ನನ್ನು ತೆಗಳತೊಡಗುವರು. ನಾವು ಇದೇ ರೀತಿಯಲ್ಲಿ ಪ್ರತಿಯೊಂದು ಸಮುದಾಯಕ್ಕೆ ಅದರ ಕರ್ಮವನ್ನು ಚೆಲುವಾಗಿಸಿದ್ದೇವೆ. ಅನಂತರ ಅವರಿಗೆ ತಮ್ಮ ಪ್ರಭುವಿನ ಕಡೆಗೆ ಮರಳಿ ಸಾಗಲಿಕ್ಕಿದೆ. ಆಗ ಅವನು, ಅವರೇನು ಮಾಡುತ್ತಿದ್ದರೆಂಬುದನ್ನು ಅವರಿಗೆ ತೋರಿಸಿ ಕೊಡುವನು." (ಪವಿತ್ರ ಕುರ್‌ಆನ್: 6: 108)

ಪ್ರವಾದಿ ಮುಹಮ್ಮದ್(ಸ) ಈ ಆದೇಶವನ್ನು ಕೃತಿಗಿಳಿಸಿ ತೋರಿಸಿದರು. ಅವರ ನಿಕಟ ಅನುಯಾಯಿಗಳು ಈ ವಿಷಯದಲ್ಲೂ ಅವರನ್ನು ಸಂಪೂರ್ಣವಾಗಿ ಅನುಸರಿಸಿದರು ಪ್ರವಾದಿ ಮುಹಮ್ಮದ್(ಸ) ಮದೀನಾದಲ್ಲಿ ಒಂದು ಇಸ್ಲಾಮೀ ರಾಷ್ಟ್ರದ ಬುನಾದಿ ಹಾಕಿದೊಡನೆಯೇ ಜನರಿಗೆ ನೀಡಿದ ಆಶ್ವಾಸನೆ ಈ ರೀತಿಯಿತ್ತು:

"ನಮ್ಮೊಂದಿಗೆ ಒಪ್ಪಂದ ಮಾಡಿಕೊಂಡಿರುವ ಎಲ್ಲ ಯಹೂದಿಗಳನ್ನು ಎಲ್ಲ ರೀತಿಯ ಅವಹೇಳನದಿಂದ ರಕ್ಷಿಸಲಾಗುವುದು. ನಮ್ಮ ಜನರಂತೆಯೇ ಅವರಿಗೂ ನಮ್ಮ ಸಹಾಯ ಸಹಕಾರಗಳು ಲಭಿಸುವುವು. ಅವರು ತಮ್ಮ ಧರ್ಮವನ್ನು ಮುಸ್ಲಿಮರಷ್ಟೇ ಸ್ವತಂತ್ರವಾಗಿ ಆಚರಿಸಬಹುದು. ಯಹೂದಿಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವವರು ಕೂಡಾ ಅದೇ ರಕ್ಷಣೆ ಮತ್ತು ಸ್ವಾತಂತ್ರ್ಯವನ್ನು ಪಡೆಯುವರು. ಅಪರಾಧಿಯು ಯಾರೇ ಆದರೂ ಅವನನ್ನು ಶಿಕ್ಷಿಸಲಾಗುವುದು. ಅಪರಾಧವೆಸಗಿದವನನ್ನು, ಅನ್ಯಾಯ ಅಕ್ರಮವೆಸಗಿದವನನ್ನು ಯಾವನೇ ನೈಜ ಮುಸ್ಲಿಮನು ಬೆಂಬಲಿಸಬಾರದು. ಅವರು ಎಷ್ಟೇ ನಿಕಟ ಬಂಧುಗಳಾದರೂ ಸರಿಯೆ."

ಪ್ರಥಮ ಖಲೀಫಾ ಹ. ಅಬೂಬಕರ್‌ರವರು(ರ) ಸಿರಿಯಾಕ್ಕೆ ಕಳುಹಿಸಿದ ಸೇನಾ ತುಕಡಿಗೆ ಹೇಳಿದ ಮಾತು ಈ ವಿಷಯದಲ್ಲಿರುವ ಇಸ್ಲಾಮೀ ಸ್ಫೂರ್ತಿಯನ್ನು ಪ್ರತಿಬಿಂಬಿಸುತ್ತದೆ

"ನಿಮ್ಮ ಪ್ರಭುವಿಗಾಗಿ ನೀವು ಹೋರಾಟ ನಿರತರಾದಾಗ ವೀರಾವೇಶದಿಂದ ಹೋರಾಡಿರಿ. ಬೆನ್ನು ತಿರುಗಿಸದಿರಿ. ಆದರೆ ನಿಮ್ಮ ವಿಜಯವು ಸ್ತ್ರೀಯರ ಮತ್ತು ಮಕ್ಕಳ ರಕ್ತದಿಂದ ಕಳಂಕಿತವಾಗದಿರಲಿ. ಮರಗಳನ್ನು ನಾಶ ಮಾಡದಿರಿ. ಹೊಲಗಳನ್ನು ಸುಡದಿರಿ. ಫಲಭರಿತ ಮರಗಳನ್ನು ಕಡಿಯದಿರಿ. ಸಾಕು ಪ್ರಾಣಿಗಳಿಗೆ ಕಿರುಕುಳ ಕೊಡಬೇಡಿರಿ. ಕೊಟ್ಟ ಮಾತಿಗೆ ಮತ್ತು ಆಶ್ವಾಸನೆಗೆ ಭಂಗ ತರಬೇಡಿರಿ. ಧಾರ್ಮಿಕ ವ್ಯಕ್ತಿಗಳು ತಮ್ಮದೇ ಆದ ವಿಧಾನದಲ್ಲಿ ದೇವಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರಬಹುದು. ಅವರನ್ನು ಅವರಷ್ಟಕ್ಕೇ ಬಿಟ್ಟು ಬಿಡಿ. ಅವರನ್ನು ವಧಿಸದಿರಿ. ಅವರ ಮಠ ಮಂದಿರಗಳನ್ನು ಹಾಳುಗೆಡಹದಿರಿ."

(The History of the Decline and fall of the Roman Empire 309 - 10)

ಈ ಮಾನವೀಯ ನಿಲುವಿನ ಬಗ್ಗೆ ಪ್ರೊ| ಟಿ. ಡಬ್ಲ್ಯೂ. ಅರ್ನಾಲ್ಡ್ ಈ ರೀತಿ ಬರೆದಿರುವರು:

"ದಿಗ್ವಿಜಯಿಗಳ ಈ ಆತ್ಮಸಂಯಮ ಮತ್ತು ತಮ್ಮ ದಂಡಯಾತ್ರೆಗಳಲ್ಲಿ ಅವರು

ರ್ಶಿಸಿದ ಮಾನವೀಯತೆಯಿಂದಾಗಿ ಅವರು ಜಯಿಸಿದ ಪ್ರದೇಶದ ನಿವಾಸಿಗಳಲ್ಲಿ ಅವರ ಗೌರವಾದರಗಳ ಭಾವನೆ ಬೆಳೆದು ಅವರು ಹ. ಅಬೂಬಕರ್(ರ) ಬೋಧಿಸಿದ ಇಂತಹ ತ ನ್ಯಾಯ ಮತ್ತು ಸಂಯಮಗಳಿಂದಾಗಿ ಆಕ್ರಮಣಕಾರಿ ಸೇನೆಯನ್ನು ಹಾರ್ದಿಕವಾಗಿ ತಿಸುವಂತಾಯಿತು."

ಪಮ ಸಹಿಷ್ಣುತೆ

ಜೆರೂಸಲೇಮ್ ನಗರವು ಖಲೀಫಾ ಉಮರ್‌ರವರಿಗೆ(ರ) ಶರಣಾದಾಗ ಈ ಕೆಳಗಿನ ಂದ ಏರ್ಪಟ್ಟಿತ್ತು:

"ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ. ನಾನು, ಲ್ಲಾಹನ ದಾಸನೂ ಸತ್ಯವಿಶ್ವಾಸಿಗಳ ನಾಯಕನೂ ಆದ ಉಮರ್ ಜೆರೂಸಲೇಮ್ ಸಿಗಳಿಗೆ ಕೊಡುವ ಆಶ್ವಾಸನೆಗಳು: ನಾನು ಅವರ ಪ್ರಾಣ, ಸೊತ್ತು, ಸಂತಾನ, ರ್ಜಿಗಳು, ಶಿಲುಬೆಗಳು ಮತ್ತು ಅವರಿಗೆ ಹಾಗೂ ಅವರ ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನೂ ಸಂರಕ್ಷಿಸುವ ಭರವಸೆ ನೀಡುತ್ತೇನೆ. ಅದರಲ್ಲಿರುವ ಅವರ ರ್ಜಿಗಳನ್ನು ಹಾಳುಗೆಡಹಲಾಗದು, ನಾಶ ಮಾಡಲಾಗದು, ಹಾನಿ ಮಾಡಲಾಗದು. ಗಳ ದತ್ತಿ ಸೊತ್ತುಗಳನ್ನಾಗಲೀ, ಘನತೆಯನ್ನಾಗಲೀ, ಇತರ ಸೊತ್ತುಗಳನ್ನಾಗಲೀ ನಾಶ ಡಲಾಗದು. ತಮ್ಮ ಧರ್ಮವನ್ನು ಅನುಸರಿಸಿದ ಕಾರಣಕ್ಕಾಗಿ ಜರೂಸಲೇಮ್‌ನ ಯಾವ ಸಿಯನ್ನೂ ಪೀಡಿಸಲಾಗದು, ಮರ್ದಿಸಲಾಗದು." **(The Preaching of Islam P. 57)**

ಹ. ಉಮರ್(ರ) ಜೆರೂಸಲೇಮ್‌ನಲ್ಲಿರುವ ಅನೇಕ ಪುಣ್ಯ ಕ್ಷೇತ್ರಗಳಿಗೆ ಸಂದರ್ಶನ ದರು. ಅವರು ಚರ್ಚ್ ಆಫ್ ರಿಸರ್ರೆಕ್ಷನ್‌ನಲ್ಲಿದ್ದಾಗ ನಮಾಝ್‌ನ ವೇಳೆಯಾಯಿತು. ರ ಪುರೋಹಿತರು ಅವರನ್ನು ಅಲ್ಲಿಯೇ ನಮಾಝ್ ಮಾಡುವಂತೆ ಕೇಳಿಕೊಂಡರು. ರೆ ಹ. ಉಮರ್(ರ) ಅದಕ್ಕೆ ಉತ್ತರವಾಗಿ, "ನನ್ನ ಅನುಯಾಯಿಗಳು ಅನಂತರ ಇದನ್ನು ಮ್ಮ ಖಲೀಫಾ ನಮಾಝ್ ಮಾಡಿದ ಸ್ಥಳವೆಂದು ಇದರ ಬಗ್ಗೆ ದಾವೆ ಹೂಡಬಹುದು" ದು ಹೇಳಿ ಅಲ್ಲಿ ನಮಾಝ್ ಮಾಡಲು ನಿರಾಕರಿಸಿದರು.

ಇದು ಇಸ್ಲಾಮ್ ಕಲಿಸಿದ ಉದಾತ್ತವಾದ ಪರಧರ್ಮ ಸಹಿಷ್ಣುತೆ. ಇದನ್ನು ರಿಸುವುದಂತಿರಲಿ, ಇದಕ್ಕೆ ಸರಿಸಾಟಿ ಎನಿಸಬಲ್ಲ ಪರಧರ್ಮ ಸಹಿಷ್ಣುತೆಯ ನಿದರ್ಶನವೂ ನವ ಇತಿಹಾಸದಲ್ಲಿ ಬೇರೆ ಸಿಗದು.

❖ ❖ ❖ ❖

ಅಧ್ಯಾಯ: ಹದಿನೆಂಟು

ಇಸ್ಲಾಮಿನ ಶಿಕ್ಷಾ ಪದ್ಧ

ಈಗ ಇಸ್ಲಾಮಿನ ಬಗ್ಗೆ ಪ್ರಚಾರಗೊಂಡಿರುವ ಸಂಶಯಗಳ ಪೈಕಿ ಒಂದು ಅದ ಶಿಕ್ಷಾ ಪದ್ಧತಿಯ ಕುರಿತಾಗಿದೆ. ಇಂದಿನ ಪ್ರಗತಿಪರ ಯುಗದಲ್ಲಿ ಇಸ್ಲಾಮಿನ 'ಪಾಶವೀ ಶಿ ಪದ್ಧತಿ'ಯನ್ನು ಜಾರಿಗೊಳಿಸುವುದು ಸಮಂಜಸವೇ? ಅದು ಕಾಲದ ಬೇಡಿಕೆಗಳಿ ಪೂರಕವಾಗಿದೆಯೇ? ಕೆಲವು ರೂಪಾಯಿಗಳ ಕಳ್ಳತನಕ್ಕೆ ಕೈ ಕಡಿಯುವ ಶಿಕ್ಷೆ, ಕಾಮೋನ್ಮಾದ ಒಂದು ವಿಷ ಘಳಿಗೆಯಲ್ಲಿ ನಡೆದ ವ್ಯಭಿಚಾರಕ್ಕೆ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ ಕೋಪೋದ್ರೇಕದಿಂದ ಮತಿಗೆಟ್ಟು ಮಾಡಿದ ಒಂದು ಕೊಲೆಗೆ ಮರಣ ದಂಡನೆ ಇತ್ಯಾದಿಗ ವೈಚಾರಿಕ ಮತ್ತು ಮಾನವೀಯ ಮಾನದಂಡಕ್ಕೆ ನಿಲುಕುವ ಶಿಕ್ಷಾ ಪದ್ಧತಿಯೇ? ಎಂಬು ಈ ಬಗ್ಗೆ ವ್ಯಾಪಕವಾಗಿ ಕೇಳಿ ಬರುವ ಆಕ್ಷೇಪಗಳಾಗಿವೆ.

ಸಮಗ್ರ ಜೀವನ ವ್ಯವಸ್ಥೆ

ಇಸ್ಲಾಮೀ ಶಿಕ್ಷಾ ಪದ್ಧತಿಯ ಬಗ್ಗೆ ಅವಲೋಕಿಸುವಾಗ ಪ್ರಪ್ರಥಮವಾಗಿ ಒಂದ ವಿಷಯ ತಿಳಿದಿರಬೇಕಾಗಿದೆ. ಇಸ್ಲಾಮಿನ ಶಿಕ್ಷಾ ಪದ್ಧತಿಯನ್ನು ಜಾರಿಗೊಳಿಸಬೇಕಾದ ಇಸ್ಲಾಮೀ ಆಡಳಿತ ವ್ಯವಸ್ಥೆ ಜಾರಿಯಲ್ಲಿರಬೇಕಾದುದು ಅತ್ಯಗತ್ಯ. ಇಸ್ಲಾಮ್ ಬಯಸು ರೀತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯೂ ಜಾರಿಯಲ್ಲಿರಬೇಕು. ಏಕೆಂದ ಇಸ್ಲಾಮ್ ಒಂದು ಸಮಗ್ರ ಜೀವನ ವ್ಯವಸ್ಥೆ. ಅದರ ತತ್ವಗಳು ಮತ್ತು ಕಾನೂನುಗ ಅದರ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ. ಆ ಪೈಕಿ ಕೆಲವು ತತ್ವಗಳನ್ನೂ ಕಾನೂ ಗಳನ್ನೂ ಬಿಟ್ಟು ಇನ್ನು ಕೆಲವನ್ನು ಮಾತ್ರ ಜಾರಿಗೊಳಿಸುವುದು ಸಾಧ್ಯವಿಲ್ಲ.

ಉದಾಹರಣೆಗೆ ವ್ಯಭಿಚಾರ ಮತ್ತು ವ್ಯಭಿಚಾರದ ಮಿಥ್ಯ ಅಪವಾದ ಹೊರಿಸು ವಿಷಯವನ್ನೇ ತೆಗೆದುಕೊಳ್ಳೋಣ. ಈ ಅಪರಾಧಗಳಿಗೆ ನೀಡಬೇಕಾದ ಶಿಕ್ಷೆಯು ವಿವಾಹ ವಿವಾಹ ವಿಚ್ಛೇದನ, ಪರ್ದಾ ಹಾಗೂ ಲೈಂಗಿಕ ಶಿಷ್ಟಾಚಾರಗಳ ಕುರಿತು ಇಸ್ಲಾಮಿನ ಶಿಕ್ಷ ಗಳೊಂದಿಗೆ ಅತ್ಯಂತ ಗಾಢ ಮತ್ತು ಅಭೇದ್ಯ ಸಂಬಂಧ ಹೊಂದಿದೆ. ಯಾವ ಸಮಾಜದ ಮಹಿಳೆಯರು ಪೂರ್ಣ ಶೃಂಗಾರಗಳೊಂದಿಗೆ ಪರ್ದಾರಹಿತರಾಗಿ ಪೇಟೆಗಳಲ

ಕರಿಸುವುದಿಲ್ಲವೋ ಯಾವ ಸಮಾಜದಲ್ಲಿ ನಗ್ನ ಮತ್ತು ಅರೆ ನಗ್ನ ಭಿತ್ತಿಪತ್ರಗಳು ಗೋಡೆ ಲ್ಲಿ ರಾರಾಜಿಸುವುದಿಲ್ಲವೋ ಯಾವ ಸಮಾಜದಲ್ಲಿ ವಿಷಯಾಸಕ್ತಿಯನ್ನು ಕೆರಳಿಸುತ್ತಿರು ತಹ ಪತ್ರಿಕೆಗಳು, ಸಾಹಿತ್ಯಗಳು, ಸಿನಿಮಾಗಳು, ರೇಡಿಯೋ ಮತ್ತು ಟಿ.ವಿ. ಕಾರ್ಯಕ್ರಮಗಳು ್ಯಪಕ ವಾಗಿಲ್ಲವೋ ಯಾವ ಸಮಾಜದಲ್ಲಿ ವಿವಾಹವು ಅತ್ಯಂತ ಸರಳವೂ ಸುಲಭವೂ ಿದೆಯೋ ಯಾವ ಸಮಾಜದಲ್ಲಿ ವಿವಾಹ ವಿಚ್ಛೇದನದ ಇಸ್ಲಾಮೀ ಕಾನೂನುಗಳನ್ನು ೂರ್ಣವಾಗಿ ಜಾರಿಗೊಳಿಸಲಾಗಿದೆಯೋ ಅಂತಹ ಸಮಾಜದಲ್ಲಿ ಮಾತ್ರ ಇಸ್ಲಾಮಿನ ಈ ಕ್ಷಾ ಪದ್ಧತಿಯನ್ನು ಜಾರಿಗೊಳಿಸಬಹುದಾಗಿದೆ. ಅದು ಆ ಸಮಾಜದ ಸಹಜ ಬೇಡಿಕೆಯೂ ಿದೆ. ಇಸ್ಲಾಮ್ ಸ್ಥಾಪಿಸಿದ ಈ ಸಂತುಲಿತ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸುವ ುವಾಗಿ ಇಂತಹ ಕಠಿಣ ಶಿಕ್ಷೆಗಳನ್ನು ಜಾರಿಗೊಳಿಸಲೇ ಬೇಕು. ಧರ್ಮಸಮ್ಮತ ವಿಧಾನ ಿಂದ ವ್ಯಕ್ತಿಗೆ ತನ್ನ ವಿಷಯಾಸಕ್ತಿಯನ್ನು ಪೂರ್ತಿಗೊಳಿಸುವ ಸುಲಭ ವ್ಯವಸ್ಥೆಯು ರಿಯಲ್ಲಿರುವಾಗ, ಲೈಂಗಿಕ ವಿಕಾರಗಳನ್ನು ಕೆರಳಿಸುವ ಅಸಾಮಾನ್ಯ ವಾತಾವರಣವು ಲ್ಲದಿರುವಾಗ ಹಾಗೂ ವ್ಯಭಿಚಾರವೆಸಗುವುದು ಅತ್ಯಂತ ಕಷ್ಟ ಸಾಧ್ಯವಾಗುವಂತಹ ತಾವರಣವು ನಿರ್ಮಿಸಲ್ಪಟ್ಟಾಗ ಲೈಂಗಿಕ ಅಪರಾಧಗಳಿಗೆ ಉಗ್ರ ಶಿಕ್ಷೆಯನ್ನು ವಿಧಿಸುವುದು ಂಡಿತ ನ್ಯಾಯ-ನೀತಿಯ ಅನಿವಾರ್ಯ ಬೇಡಿಕೆಯಾಗಿ ಮಾರ್ಪಡುತ್ತದೆ. ಅಂತಹ ತಾವರಣದಲ್ಲಿ ಅತ್ಯಂತ ನೀಚ ಮನೋವೃತ್ತಿಯ ಜನರು ಮಾತ್ರ ಈ ಅಪರಾಧಗಳನ್ನು ಸಗಬಲ್ಲರು. ಅಂತಹವರಿಗೆ ಅತ್ಯುಗ್ರ ಶಿಕ್ಷೆಯನ್ನು ವಿಧಿಸಿ ಸಮಾಜವನ್ನು ಅವರ ಕೇಡಿನಿಂದ ಕ್ಷಿಸುವುದು ಅನಿವಾರ್ಯವಾಗಿದೆ.

ಸಾಮಾನ್ಯ ಅಪರಾಧಿಯಲ್ಲ

ಆದರೆ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರುವ ಕಡೆಗಳಲ್ಲಿ, ಸ್ತ್ರೀ-ಪುರುಷರು ಶಾಲೆ, ಕಾಲೇಜು, ಬ್ ಮತ್ತು ಮನೋರಂಜನಾ ಕೇಂದ್ರಗಳಲ್ಲಿ ಸರ್ವಶೃಂಗಾರ ಭೂಷಿತರಾಗಿ ಪರಸ್ಪರ ಮುಕ್ತ ೇಟಿಯಾಗುವ ಅವಕಾಶವಿರುವ ಕಡೆಗಳಲ್ಲಿ, ವಿಷಯಾಸಕ್ತಿಯನ್ನು ಕೆರಳಿಸುವ ಎಲ್ಲ ಾಧ್ಯಮಗಳೂ ವ್ಯಾಪಕವಾಗಿರುವ ಕಡೆಗಳಲ್ಲಿ ವಿವಾಹವಿಲ್ಲದೆಯೇ ಕಾಮಾಸಕ್ತಿಯನ್ನು ತೀರಿಸುವ ೇರಳ ಅವಕಾಶ ಲಭ್ಯವಿರುವ ಕಡೆಗಳಲ್ಲಿ, ವಿವಾಹೇತರ ಲೈಂಗಿಕ ಸಂಬಂಧಗಳು ್ಯಪಕವಾಗಿರುವ ಕಡೆಗಳಲ್ಲಿ, ಪ್ರೀತಿ-ಪ್ರೇಮಗಳ ಹೆಸರಲ್ಲಿ ವಿವಾಹೇತರ ಲೈಂಗಿಕ ಸಂಬಂಧಗಳಿಗೆ ನ್ನಣೆ ಸಿಗುವ ಕಡೆಗಳಲ್ಲಿ ವ್ಯಭಿಚಾರ ಮತ್ತು ವ್ಯಭಿಚಾರದ ಆರೋಪಗಳಿಗೆ ಇಸ್ಲಾಮೀ ಕ್ಷೆಯನ್ನು ವಿಧಿಸುವುದು ಖಂಡಿತ ಅಕ್ರಮವೆನಿಸುವುದು. ಏಕೆಂದರೆ ಅಂತಹ ಸಮಾಜದಲ್ಲಿ ರ್ವ ಸಾಮಾನ್ಯ ಉತ್ತಮ ಚಾರಿತ್ರ್ಯದ ಮನುಷ್ಯನೂ ವ್ಯಭಿಚಾರದಿಂದ ದೂರವಿರುವುದು ಷ್ಟದ ಕೆಲಸ. ಆದ್ದರಿಂದ ಅಂತಹ ಪರಿಸ್ಥಿತಿಯಲ್ಲಿ ಯಾರಾದರೂ ವ್ಯಭಿಚಾರವೆಸಗಿದರೆ ವನು ಚಾರಿತ್ರ್ಯದ ದೃಷ್ಟಿಯಿಂದ ಅಸಾಮಾನ್ಯ ಅಪರಾಧಿ ಎನಿಸಲಾರ. ಛಡಿಯೇಟು ಅಥವಾ

ಕಲ್ಲೆಸೆದು ಕೊಲ್ಲುವ ಶಿಕ್ಷೆಯನ್ನು ವಾಸ್ತವದಲ್ಲಿ ಇಂತಹ ಪರಿಸ್ಥಿತಿಯಿರುವ ಸಮಾಜಕ್ಕೆ ಅಲ್ಲಾ
ನಿಶ್ಚಯಿಸಿಯೇ ಇಲ್ಲ.

ಅಕ್ರಮಿ ಸಮಾಜ

ಕದ್ದವನ ಕೈ ಕಡಿಯುವ ಶಿಕ್ಷೆಯನ್ನು ಇದೇ ರೀತಿ ಪರಿಗಣಿಸಬೇಕು. ಅ ಇಸ್ಲಾಮಿನ ಆರ್ಥಿಕ ತತ್ವಗಳು ಮತ್ತು ಅದರ ಕಾನೂನುಗಳನ್ನು ಒಳಗೊಂಡ ಪದ್ಧತಿ ಪೂರ್ಣವಾಗಿ ಜಾರಿಯಲ್ಲಿರುವ ಸಮಾಜಕ್ಕಾಗಿಯೇ ನಿರ್ಧರಿಸಲಾಗಿದೆ. ಕೈ ಕಡಿಯುವ ಮತ್ತು ಇಸ್ಲಾಮಿನ ಆರ್ಥಿಕ ವ್ಯವಸ್ಥೆಗೆ ಅಭೇದ್ಯವಾದ ಸಂಬಂಧವಿದೆ. ಈ ವ್ಯ ಜಾರಿಯಲ್ಲಿರುವ ಕಡೆ ಕಳ್ಳತನಕ್ಕೆ ಕೈ ಕಡಿಯುವ ಶಿಕ್ಷೆಯೇ ನ್ಯಾಯಪೂರ್ಣವೂ ಸಹಜ ಆಗಿದೆ. ಈ ವ್ಯವಸ್ಥೆ ಜಾರಿಯಲ್ಲಿಲ್ಲದ ಕಡೆಗಳಲ್ಲಿ ಕಳ್ಳತನಕ್ಕೆ ಕೈ ಕಡಿಯುವ ಶಿಕ್ಷೆ ವಿಧಿಸು ದ್ವಿಗುಣ ಅನ್ಯಾಯವಾಗಿದೆ. ಬಡ್ಡಿ ಧರ್ಮಸಮ್ಮತವಾಗಿರುವ, ಝಕಾತ್ ವ್ಯ ಜಾರಿಯಲ್ಲಿಲ್ಲದ, ನ್ಯಾಯವು ಹಣಕ್ಕಾಗಿ ಮಾರಲ್ಪಡುವ, ಕರಭಾರದಿಂದ ಪ್ರಜೆ ತತ್ತರಿಸುವ, ಜೀವನಾವಶ್ಯಕ ವಸ್ತುಗಳ ಬೆಲೆಯು ಅತ್ಯಂತ ದುಬಾರಿಯಾಗಿರುವ ಹಾಗೂ ತೆರಿಗೆಗಳೂ ಕೆಲವು ವಿಶಿಷ್ಟ ವರ್ಗಗಳ ಭೋಗ ವಿಲಾಸದ ಜೀವನಕ್ಕಾಗಿ ವ್ಯಯವಾಗುತ್ತಿ ಅಕ್ರಮಿ ಸಮಾಜಕ್ಕಾಗಿ ಈ ಶಿಕ್ಷೆಯನ್ನು ನಿಗದಿಪಡಿಸಲಾಗಿಲ್ಲ. ಇಂತಹ ಕಡೆಗಳಲ್ಲಿ ಕಳ್ಳತ ಕೈ ಕಡಿಯುವುದಂತಿರಲಿ ಜೈಲು ಶಿಕ್ಷೆ ಕೂಡಾ ಕೆಲವೊಮ್ಮೆ ಅನ್ಯಾಯವಾಗುತ್ತದೆ.

ಅನ್ಯಾಯದ ದಂಡ ಸಂಹಿತೆ?

ಸಾಮಾನ್ಯವಾಗಿ ಇಸ್ಲಾಮಿ ಶಿಕ್ಷಾ ಪದ್ಧತಿಯನ್ನು ತಿಳಿಯುವಲ್ಲಿ ಜನರಿಗೆ ಒಂದು ಪ ಉಂಟಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಅವರ ಮುಂದಿರುವುದು ಇಂದು ನಾ ರಾಷ್ಟ್ರಗಳೆಂದು ಪರಿಗಣಿಸಲ್ಪಡುವಂತಹ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಲಿತವಿರುವ ತ ಸಾಮಾಜಿಕ ವ್ಯವಸ್ಥೆ. ಅದನ್ನು ಮುಂದಿಟ್ಟುಕೊಂಡು ಅವರು ಕಳ್ಳತನ, ವ್ಯಭಿಚಾರ, ವ್ಯಭಿಚಾ ಸುಳ್ಳಾರೋಪ, ಮದ್ಯಪಾನ ಇತ್ಯಾದಿ ಸರ್ವಸಾಮಾನ್ಯ ಅಪರಾಧಗಳಿಗೆ ಕೈ ಕಡಿಯುವಿಕೆ, ಕ ಹೊಡೆದು ಕೊಲ್ಲುವುದು, ಛಡಿಯೇಟು ಬಾರಿಸುವುದು ಇತ್ಯಾದಿ ಶಿಕ್ಷೆ ವಿಧಿಸಿದರೆ ಹ ಎಂಬುದನ್ನು ತುಲನೆ ಮಾಡಿ ನೋಡುತ್ತಾರೆ. ಇಂತಹ ತುಲನಾತ್ಮಕ ಅಧ್ಯಯನದಿ ಇಸ್ಲಾಮಿನ ಶಿಕ್ಷಾ ಪದ್ಧತಿಯು ಅತ್ಯಂತ ಕಠಿಣ ಮತ್ತು ಭಯಾನಕವಾಗಿ ಕಾಣುವುದು ಸಹ ಅಂತಹ ಸಮಾಜದಲ್ಲಿ ಕಳ್ಳತನ ಸಾಮಾನ್ಯ ವಿಷಯ. ವ್ಯಭಿಚಾರದಲ್ಲಿ ಯುವಕ ಯುವತಿಯ ಮಾತ್ರವಲ್ಲ ಮಕ್ಕಳೂ ಮುದುಕರೂ ನಿರತರಾಗಿರುವುದು ಸಹಜ. ದಿನನಿತ್ಯ ಪ್ರಣ ಪ್ರಕರಣಗಳಲ್ಲಿ ನಿರತರಾಗುವ ಸ್ತ್ರೀ- ಪುರುಷರ, ಅನೈತಿಕ ಸಂಬಂಧದ ಜೋಡಿಗಳ ಸತ್ಯ, ಸತ್ಯ ಮತ್ತು ಸುಳ್ಳು ವಾರ್ತೆಗಳೂ ಆ ಸಮಾಜದ ಸರ್ವಸಾಮಾನ್ಯ ಲಕ್ಷಣ. ಕೆಟ್ಟ ಸಂಗದಿ ಅಂತಹ ಸಮಾಜದಲ್ಲಿ ಬಾಲಕ ಬಾಲಕಿಯರೂ ಕೆಟ್ಟ ಚಾಳಿಗೆ ಇಳಿಯುವುದು ಅಸಹಜವ

ುರುವಾಗ ಇಸ್ಲಾಮಿನ ದಂಡಸಂಹಿತೆಯನ್ನು ಜಾರಿಗೊಳಿಸಿದರೆ ಯಾರೂ ಶಿಕ್ಷೆಯಿಂದ ಾಗಲಾರರು. ದಿನನಿತ್ಯ ಸಹಸ್ರಾರು ಕರಚ್ಛೇದನ ಮತ್ತು ನೂರಾರು ಶಿರಚ್ಛೇದನಗಳು ುಬಹುದು ಎಂಬ ಕಲ್ಪನೆಯಿಂದಲೇ ಅವರು ಭಯವಿಹ್ವಲರಾಗುತ್ತಾರೆ.

ಅವರ ಈ ಭೀತಿ ಸಹಜವೇ ಆಗಿದೆ. ಈ ಅಸಂಬದ್ಧ ಸಾಮಾಜಿಕ ವ್ಯವಸ್ಥೆಯಲ್ಲಿ ಕೇವಲ ್ಲಾಮಿನ ದಂಡಸಂಹಿತೆಯನ್ನು ಜಾರಿಗೊಳಿಸುವುದು ಮಹಾ ಅನ್ಯಾಯವೇ ಸರಿ. ಇಸ್ಲಾಮಿನ ಪೂರ್ಣ ಜೀವನ ವ್ಯವಸ್ಥೆಯನ್ನು ಒಟ್ಟಾಗಿ ಜಾರಿಗೊಳಿಸಿದಾಗ ಮಾತ್ರ ಈ ಅನ್ಯಾಯದ ಸ್ಥೆಯು ಕೊನೆಗೊಂಡೀತು. ಆಗ ಅತ್ಯಂತ ಅಸಾಮಾನ್ಯ ಅಪರಾಧಿ ಮನೋವೃತ್ತಿಯ ಜನರು ತ್ರ ಇಂತಹ ನೀಚ ಕೃತ್ಯಗಳನ್ನು ಎಸಗುವರು. ಅಂತಹ ಮನೋವೃತ್ತಿಯ ಜನರನ್ನು ದಾರಿಗೆ ತರಲು ಇಸ್ಲಾಮ್ ನಿರ್ಣಯಿಸಿದ ಉಗ್ರ ಶಿಕ್ಷಾ ಕ್ರಮವೊಂದೇ ದಾರಿ.

ಇಸ್ಲಾಮ್ ಎಲ್ಲ ರಂಗಗಳಲ್ಲಿಯೂ ವೈಚಾರಿಕ ಮತ್ತು ಸಂತುಲಿತ ಮಾರ್ಗವನ್ನೇ ಲಂಬಿಸುತ್ತದೆ. ಅದರಲ್ಲಿ ಅಪರಾಧದ ಎಲ್ಲ ಮೂಲಗಳನ್ನೂ ಮಾಧ್ಯಮಗಳನ್ನೂ ಪಡಿಸಲಾಗುತ್ತದೆ. ವ್ಯಕ್ತಿಯು ಅಪರಾಧದಲ್ಲಿ ಸಿಲುಕುವ ಸನ್ನಿವೇಶವನ್ನೇ ಕೊನೆಗಾಣಿಸ ುತ್ತದೆ. ತಮ್ಮ ಪ್ರಕೃತಿ ಸಹಜ ಬೇಡಿಕೆಗಳ ಈಡೇರಿಕೆಗಾಗಿ ಯಾರೂ ವಾಮಮಾರ್ಗವನ್ನು ುಸರಿಸಬೇಕಾದ ಪ್ರಮೇಯವನ್ನೇ ಉಳಿಸಲಾಗುವುದಿಲ್ಲ. ಇಂತಹ ವಾತಾವರಣ ನಿರ್ಮಾಣ ದ ಬಳಿಕವೇ ಎಲ್ಲ ಮನುಷ್ಯರಿಗೂ ಎಚ್ಚರಿಕೆಯ ಪಾಠವಾಗಬಲ್ಲಂತಹ ಉಗ್ರ ಶಿಕ್ಷೆಯನ್ನು ಸಲಾಗುತ್ತದೆ.

ಪರಾಧಿಯ ಬಗ್ಗೆ ಕನಿಕರ

ಒಂದೆಡೆ ಇಸ್ಲಾಮ್ ಜನರನ್ನು ಆದಷ್ಟು ಈ ಶಿಕ್ಷೆಗಳಿಂದ ರಕ್ಷಿಸಲು ಪ್ರಯತ್ನಿಸುತ್ತದೆ. ಯಾಧೀಶನು ಶಿಕ್ಷೆ ಕೊಡುವುದರಲ್ಲಿ ತಪ್ಪು ಮಾಡುವುದಕ್ಕಿಂತ ಕ್ಷಮಿಸುವಲ್ಲಿ ತಪ್ಪು ಡುವುದು ಉತ್ತಮ ಎಂದು ಪ್ರವಾದಿ(ಸ) ಹೇಳಿರುವರು. ಸಾಧ್ಯವಿದ್ದಷ್ಟು ಜನರನ್ನು ಯಿಂದ ರಕ್ಷಿಸಲು ಪ್ರಯತ್ನಿಸಿ ಎಂದು ಪ್ರವಾದಿ(ಸ) ನ್ಯಾಯಾಧೀಶರುಗಳಿಗೆ ೀಶಿಸಿರುವರು.

ಇನ್ನೊಂದೆಡೆ ಅಪರಾಧವು ದಿನದ ಬೆಳಕಿನಂತೆ ಸ್ಪಷ್ಟವಾಗಿ ಸಾಬೀತಾದರೆ ಅಪರಾಧಿಯ ಕನಿಕರ ತೋರುವುದರಿಂದಲೂ ಇಸ್ಲಾಮ್ ತಡೆಯುತ್ತದೆ.

"ನೀವು ಅಲ್ಲಾಹನ ಹಾಗೂ ಅಂತಿಮ ದಿನದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಅಲ್ಲಾಹನ ರ್ಮದ ವಿಷಯದಲ್ಲಿ (ಆತನ ದಂಡ ಸಂಹಿತೆಯನ್ನು ಜಾರಿಗೊಳಿಸುವಲ್ಲಿ) ನಿಮಗೆ ಅವರ ಲೆ ಕನಿಕರವಿರಬಾರದು." **(ಪವಿತ್ರ ಕುರ್‌ಆನ್: 24: 2)**

ಬನೀ ಮಕ್‌ಝೂಮ್ ಎಂಬ ಪ್ರಸಿದ್ಧ ಕುರೈಶ್ ಗೋತ್ರದ ಫಾತಿಮಾ ಎಂಬ ಮಹಿಳೆಗೆ ಾದಿವರ್ಯರು(ಸ) ಕೈ ಕಡಿಯುವ ಶಿಕ್ಷೆ ವಿಧಿಸಿದ ಘಟನೆ ಇಲ್ಲಿ ಸ್ಮರಣಾರ್ಹ. ಆಕೆಯನ್ನು

ಕ್ಷಮಿಸಿ ಬಿಡಬೇಕೆಂಬ ಶಿಫಾರಸನ್ನು ತಿರಸ್ಕರಿಸುತ್ತಾ ಅವರು ಈ ರೀತಿ ಹೇಳಿದರು: "ಸಾಕ್ಷಾ ಮುಹಮ್ಮದ್‌ರ(ಸ) ಪುತ್ರಿ ಫಾತಿಮಾ ಈ ಅಪರಾಧವೆಸಗಿದ್ದರೆ ಅವಳಿಗೂ ತಪ್ಪದೆ ಇ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು."

ನೈಜ ಸ್ಫೂರ್ತಿ

ಈ ಎರಡು ವಿಷಯಗಳನ್ನು ತಿಳಿದುಕೊಂಡ ಬಳಿಕ ಇಸ್ಲಾಮಿನ ಶಿಕ್ಷಾ ಪದ್ಧತಿಯ ಸ ಸ್ಫೂರ್ತಿಯನ್ನೂ ತಿಳಿದುಕೊಳ್ಳಬೇಕು. ಅದುವೇ ಎಲ್ಲ ಇಸ್ಲಾಮಿ ಕಾನೂನುಗಳ ಜೀವಾಳವಾ

ಇಸ್ಲಾಮಿ ಶಿಕ್ಷೆಗಳ ಮೂಲ ಕಲ್ಪನೆಯೇ ಸಹಾನುಭೂತಿಯಿಂದ ಕೂಡಿದೆ. ಅ ಯಾರಿಗೂ ಕೋಪದಿಂದ ಶಿಕ್ಷೆ ಕೊಡುವುದಿಲ್ಲ. ವೈರತ್ವದ ಭಾವನೆ ಅದರ ಯಾವ ಕಾನೂನಿನಲ್ಲಿಲ್ಲ. ಇಲ್ಲಿ ಶಿಕ್ಷೆಯಿರುವುದು ವ್ಯಕ್ತಿಯ ಸಂಸ್ಕರಣೆ ಮತ್ತು ಪರಿಶುದ್ಧತೆ ಹಾ ಅಪರಾಧವೆಸಗುವುದರಿಂದ ಅವನ ಆತ್ಮಕ್ಕೆ ಆಗಿರುವ ಕಳಂಕವನ್ನು ತೊಳೆದು ಅವ ಪರಲೋಕದ ಶಿಕ್ಷೆಯಿಂದ ಮುಕ್ತವಾಗುವಂತೆ ಮಾಡುವುದಕ್ಕಾಗಿದೆ. ತನ್ನ ನೈಜ ಅಧಿ ಅಲ್ಲಾಹನಾಗಿರುವನು ಮತ್ತು ಅವನಿಂದ ಯಾವ ಅಪರಾಧವನ್ನೂ ಅಡಗಿಸಿಡಲಾಗ ನಿಜವಾದ ನ್ಯಾಯಾಲಯವು ಪರಲೋಕದ ನ್ಯಾಯಾಲಯವಾಗಿದೆ. ಅಲ್ಲಿ ತಾನು ಹಾಜರಾಗ ಬೇಕು. ಇಲ್ಲಿ ತಾನು ಸ್ವಯಂ ಸ್ಫೂರ್ತಿಯಿಂದ ತನ್ನ ಅಪರಾಧದ ಶಿಕ್ಷೆ ಪಡೆಯ ಮುಂದಾದರೆ ಆ ಶಿಕ್ಷೆಯು ತನ್ನನ್ನು ಶುದ್ಧ ಮಾಡೀತು ಮತ್ತು ನಿರ್ಣಾಯಕ ದಿನದ ನ ನ್ಯಾಯಾಲಯದಲ್ಲಿ ತಾನು ಯಾವ ಅಪರಾಧವನ್ನೂ ಮಾಡದವನಷ್ಟು ಪವಿತ್ರನ ಹಾಜರಾಗಬಲ್ಲೆನೆಂಬ ದೃಢ ವಿಶ್ವಾಸವನ್ನು ಅದು ಪ್ರತಿಯೊಬ್ಬ ಪೌರನಲ್ಲೂ ಮೂಡಿಸ ಪ್ರಯತ್ನಿಸುತ್ತದೆ.

ವ್ಯಕ್ತಿಗಳಲ್ಲಿ ಈ ತರದ ದೃಢ ವಿಶ್ವಾಸ ಮೂಡಿಬಂದಾಗ ಎಂತಹ ಸಂತುಲಿತ, ಸುಭ ಮತ್ತು ಅಪರಾಧ ಮುಕ್ತ ಸಮಾಜವು ಅಸ್ತಿತ್ವಕ್ಕೆ ಬರುತ್ತದೆಂಬುದಕ್ಕೆ ಇತಿಹಾಸ ಸಾ ವಹಿಸುತ್ತದೆ. ಇಸ್ಲಾಮಿ ಆಡಳಿತದ ಪ್ರಥಮ ನಾಲ್ಕು ಶತಮಾನಗಳಲ್ಲಿ ಕಳ್ಳತನಕ್ಕಾಗಿ ಕೈ ಕಡಿ ಲ್ಪಟ್ಟವರ ಸಂಖ್ಯೆ ಕೇವಲ ಆರು ಆಗಿತ್ತು ಎಂಬುದು ಒಂದು ಐತಿಹಾಸಿಕ ಸತ್ಯ. ದ್ವಿತೀ ಖಲೀಫ ಹ. ಉಮರ್‌ರವರ(ರ) ಕಾಲದಲ್ಲಿ ಒಮ್ಮೆ ಅರೇಬಿಯಾದಲ್ಲಿ ತೀವ್ರ ಬರಗ ಬಂದಿತ್ತು. ಕದ್ದವನ ಕೈ ಕಡಿಯುವ ಶಿಕ್ಷೆಯನ್ನು ಆಗ ಹ. ಉಮರ್(ರ) ಜಾರಿಗೊಳಿಸ ರಲಿಲ್ಲ. ಕಳ್ಳತನಕ್ಕೆ ಹಸಿವು ಪ್ರೇರಕವಾಗಿರಬಹುದೆಂಬ ಸಂದೇಹವೇ ಅದಕ್ಕೆ ಕಾರಣವಾಗಿತ

ಹ. ಉಮರ್ ಬಿನ್ ಅಬ್ದುಲ್ ಅಝೀಝ್‌ರವರ(ರ) ಆಡಳಿತ ಕಾಲದ ಇಸ್ಲಾಮಿನ ನ್ಯಾಯಬದ್ಧ ಆರ್ಥಿಕ ವ್ಯವಸ್ಥೆಯಿಂದಾಗಿ ಬಡತನವು ಸಮಾಜದಿಂದ ಸಂಪೂ ನಿರ್ಮೂಲನವಾಗಿತ್ತು. ನಿರುದ್ಯೋಗವೆಂಬ ಸಮಸ್ಯೆಯೇ ಅಲ್ಲಿರಲಿಲ್ಲ. ಯಾವುದೇ ಉದ್ಯೋ ಮಾಡುವ ಸಾಮರ್ಥ್ಯವಿಲ್ಲದವರಿಗೆ ಸರಕಾರಿ ಬೊಕ್ಕಸದಿಂದ ಅವರ ಜೀವನಾವಶ್ಯಕ

ರ್ಯಾಪ್ತವಾದ ನೆರವು ನೀಡಲಾಗುತ್ತಿತ್ತು.

ಆ ಸಮಗ್ರ ಜೀವನ ವ್ಯವಸ್ಥೆಯ ಕೆಲವು ಕಾನೂನುಗಳು ಮಾತ್ರ ಜಾರಿಯಲ್ಲಿರುವ ಸೌದಿ ೀಬಿಯಾ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಜಗತ್ತಿನಲ್ಲೇ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪರಾಧ ಕೃತ್ಯಗಳು ನಡೆಯುತ್ತಿವೆಯೆಂಬುದು ನಮ್ಮ ಕಣ್ಣ ಮುಂದಿರುವ ಉದಾಹರಣೆ ಾಗಿದೆ. ಇಸ್ಲಾಮ್ ತನ್ನ ಪರಿಪೂರ್ಣ ಮತ್ತು ಮೂಲ ರೂಪದಲ್ಲಿ ಸಂಪೂರ್ಣ ಜೀವನ ವಸ್ಥೆಯಾಗಿ ಮಾರ್ಪಟ್ಟಾಗ ಅದೆಷ್ಟು ಸುಂದರ ಸಮಾಜ ಅಸ್ತಿತ್ವಕ್ಕೆ ಬಂದೀತು ಎಂಬುದನ್ನು ರಿಂದ ಪ್ರತಿಯೊಬ್ಬ ವಿಚಾರವಂತನೂ ಗ್ರಹಿಸಬಹುದು.

❖ ❖ ❖ ❖

ಅಧ್ಯಾಯ: ಹತ್ತೊಂಬತ್ತು

ಕುಫ್ರ್, ಕಾಫಿರ್ ಮತ್ತು ಜಿಹಾ

ಇವು ಅತ್ಯಧಿಕ ಅಪಾರ್ಥಕ್ಕೆ ಗುರಿಯಾದ ಪದಗಳಾಗಿವೆ. ಕಾಫಿರ್ ಎಂಬ ಪ ಕುಫ್ರ್ ಎಂಬ ಮೂಲ ಪದದಿಂದ ಹುಟ್ಟಿದೆ. 'ಕುಫ್ರ್' ಎಂಬ ಪದಕ್ಕೆ ಅನೇಕ ಅರ್ಥಗ ನಿಘಂಟಿನ ಪ್ರಕಾರ ಆ ಅರಬಿ ಪದದ ಅರ್ಥ 'ಬಚ್ಚಿಡುವುದು' ಎಂದಾಗಿದೆ. ರಾತ್ರಿಂ 'ಕಾಫಿರ್' ಎನ್ನುತ್ತಾರೆ. ಏಕೆಂದರೆ ಅದು ಎಲ್ಲವನ್ನೂ ಮರೆಸುತ್ತದೆ. ದಟ್ಟ ಮೋಡ 'ಕಾಫಿರ್' ಎನ್ನಲಾಗುತ್ತದೆ. ರೈತನು ಬೀಜವನ್ನು ನೆಲದಲ್ಲಿ ಬಚ್ಚಿಡುವುದರಿಂದ ಅವ 'ಕಾಫಿರ್' ಎನ್ನಲಾಗುತ್ತದೆ. 'ಕುಫ್ರ್'ನ ಇನ್ನೊಂದು ಅರ್ಥ ಕೃತಘ್ನತೆಯಾಗಿದೆ. ಏಕೆ ಕೃತಘ್ನನಾದವನು ದೇವನ ಅನುಗ್ರಹಗಳನ್ನು ಮರೆಸುತ್ತಾನೆ.

ಕಾಫಿರ್ ಮತ್ತು ಕುಫ್ರ್ ಎಂಬ ಪದಗಳಿಗೆ ಯಾವುದೇ ಕೆಟ್ಟ ಅರ್ಥವಿಲ್ಲ. ಮಾನಹಾನಿಕರವಾಗಲಿ ಶಾಪವಾಗಲಿ ಅಲ್ಲ. 'ಕಾಫಿರ್' ಎಂಬುದು ಮುಸ್ಲಿಮೇತ ಎಂಬುದಕ್ಕೆ ಪರ್ಯಾಯ ಪದವಲ್ಲ. ಮುಸ್ಲಿಮರಲ್ಲದವರೆಲ್ಲ 'ಕಾಫಿರ್'ಗಳಲ್ಲ. 'ಕಾ ಎಂದರೆ ನಿರಾಕರಿಸುವವನು, ನಿಷೇಧಿಸುವವನು ಮತ್ತು ಅಲ್ಲಗಳೆಯುವವನು. ಆ ಅರ್ಥ ನಮ್ಮಲ್ಲಿ ಪ್ರತಿಯೊಬ್ಬನು ಇನ್ನೊಬ್ಬನ ಧರ್ಮದ ಕಾಫಿರ್ ಆಗುತ್ತಾನೆ. ಸಮತಾವಾದಿ ಮತ್ತು ಬಂಡವಾಳಶಾಹಿಗಳಂತೆ ಅವರು ಪರಸ್ಪರರ ಪಾಲಿಗೆ 'ಕಾಫಿರ್' ಆಗಿದ 'ತಾಗೂತ'ನ್ನು ನಿರಾಕರಿಸುವವನು (ಅರ್ಥಾತ್ ಎಲ್ಲ ಮಿಥ್ಯ ಆರಾಧ್ಯರನ್ನು ಅಲ್ಲಗಳ ವವನು) ಮತ್ತು ಅಲ್ಲಾಹನನ್ನು ದೃಢವಾಗಿ ನಂಬುವವನೇ ಸತ್ಯವಿಶ್ವಾಸಿಯಾಗಿದ್ದಾ

(ಪವಿತ್ರ ಕುರ್‌ಆನ್: 2:

ಒಬ್ಬ ಮುಸ್ಲಿಮನು ಉಚ್ಚರಿಸುವ ಮೂಲ ಮಂತ್ರವೇ 'ಲಾ ಇಲಾಹ ಇಲ್ಲಲ್ಲಾ (ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ). ಇದು ಎರಡು ಅಂಶಗಳನ್ನು ಒಳಗೊಂ ನಿಷೇಧಾತ್ಮಕವಾಗಿ ಎಲ್ಲ ದೇವರುಗಳನ್ನೂ ನಿರಾಕರಿಸುವುದು ಮತ್ತು ಸಕಾರಾತ್ಮಕ ಏಕದೇವನಾದ ಅಲ್ಲಾಹನಲ್ಲಿ ವಿಶ್ವಾಸವಿರಿಸುವುದು.

ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದ, ಮಳೆಯನ್ನು ಸುರಿಸುವ, ಹ ಗದ್ದೆಗಳನ್ನೂ ತೋಟಗಳನ್ನೂ ಬೆಳೆಸುವ, ನದಿಗಳನ್ನು ಹರಿಸುವ, ಪರ್ವತಗಳನ್ನು ನಾಟ

ೊಂದ ಜನರ ಕೂಗನ್ನು ಆಲಿಸುವ, ಅವರ ನೋವನ್ನು ನೀಗಿಸುವ, ನಿಮಗೆ ನೆಲ-ಜಲಗಳ ಂಧಕಾರದಲ್ಲಿ ಮಾರ್ಗದರ್ಶನ ಮಾಡುವ, ಜೀವವನ್ನು ಸೃಷ್ಟಿಸುವ ಮತ್ತು ಅದನ್ನು ಪುನರುಜ್ಜೀವನಗೊಳಿಸುವ ಆ ಏಕೈಕ ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ಪವಿತ್ರ ಕುರ್‌ಆನ್ ಹೇಳುತ್ತದೆ (ಪವಿತ್ರ ಕುರ್‌ಆನ್: 27: 59-64)

ಅವನೇ ಎಲ್ಲ ಕಾಲ, ಎಲ್ಲ ದೇಶ ಮತ್ತು ಎಲ್ಲ ಜನಾಂಗಗಳಲ್ಲಿ ಪ್ರವಾದಿಗಳನ್ನು ಕಳುಹಿಸಿದವನು. ಆ ಪ್ರವಾದಿಗಳ ಪೈಕಿ ಕೊನೆಯವರು ಪ್ರವಾದಿ ಮುಹಮ್ಮದ್‌ರವರಾಗಿದ್ದಾರೆ. ಅವರಿಗೆ(ಸ) ಅಲ್ಲಾಹನು ತನ್ನ ಅಂತಿಮ ಗ್ರಂಥವಾದ ಕುರ್‌ಆನನ್ನು ಅವತರಿಸಿದನು. ಇದು ಇಡೀ ಮಾನವಕುಲವನ್ನು ಸನ್ಮಾರ್ಗದಲ್ಲಿ ಸಾಗಿಸಲಿಕ್ಕಾಗಿ ಬಂದಿದೆ. ಒಂದು ದಿನ ಎಲ್ಲ ಮಾನವರು ತಮ್ಮ ಸೃಷ್ಟಿಕರ್ತ-ಪ್ರಭುವಾದ ಅಲ್ಲಾಹನ ಬಳಿಗೆ ಮರಳುವರು. ಅಂದು ಅವರು ತಮ್ಮೆಲ್ಲ ವಿಶ್ವಾಸ ಕರ್ಮಗಳ ಬಗ್ಗೆ ವಿಚಾರಣೆಯನ್ನು ಎದುರಿಸುವರು. ಅವರ ಆಚಾರ -ವಿಚಾರಗಳಿಗೆ ಅನುಗುಣವಾಗಿ ಅವರಿಗೆ ಪುರಸ್ಕಾರ ಅಥವಾ ಶಿಕ್ಷೆ ಲಭಿಸುವುದು. ಯಾರು ಈ ಮೂಲಭೂತ ಸಿದ್ಧಾಂತಗಳ ಮೇಲೆ ವಿಶ್ವಾಸವಿರಿಸಿ ಅದರಂತೆ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೋ ಅವರು ಸತ್ಯವಿಶ್ವಾಸಿಗಳೆನಿಸಿ ಕೊಳ್ಳುತ್ತಾರೆ. ಯಾರು ಇವುಗಳನ್ನು ಅಥವಾ ಇವುಗಳ ಪೈಕಿ ಯಾವುದನ್ನಾದರೂ ನಿರಾಕರಿಸುತ್ತಾರೋ ಅವರು ಅವಿಶ್ವಾಸಿಗಳೆನಿಸಿಕೊಳ್ಳುತ್ತಾರೆ. ಅತ್ಯಂತ ಉದಾರಿಯಾದ ಅಲ್ಲಾಹನು ತನ್ನ ದಾಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾನೆ. ಅವರು ಅವನ ಈ ಮಾರ್ಗದರ್ಶನವನ್ನು ಸ್ವೀಕರಿಸಲೂಬಹುದು, ನಿರಾಕರಿಸಲೂಬಹುದು. ಪವಿತ್ರ ಕುರ್‌ಆನ್ ಅದನ್ನು ಬಹಳ ಸ್ಪಷ್ಟವಾಗಿ ಸಾರಿ ಹೇಳಿದೆ: ಹೇಳಿರಿ, "ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯ. ಇಷ್ಟವಿದ್ದವರು ಇದನ್ನು ಸ್ವೀಕರಿಸಿಕೊಳ್ಳಲಿ. ಇಷ್ಟವಿದ್ದವರು ಇದನ್ನು ನಿರಾಕರಿಸಲಿ."*

(ಪವಿತ್ರ ಕುರ್‌ಆನ್: 18: 29)

ಈ ಆಯ್ಕೆಯ ಸ್ವಾತಂತ್ರ್ಯದಲ್ಲಿ ಹೊಣೆಗಾರಿಕೆಯು ಸಂಪೂರ್ಣವಾಗಿ ನಮ್ಮ ಮೇಲಿರುವುದು. ಪವಿತ್ರ ಕುರ್‌ಆನಿನ ಈ ವಚನಗಳಿಂದ ಸೃಷ್ಟಿಕರ್ತನಾದ ಅಲ್ಲಾಹನು ತನ್ನ ಸೃಷ್ಟಿಯಾದ ಮನುಷ್ಯನ ಬಗ್ಗೆ ಇಟ್ಟುಕೊಂಡಿರುವ ಯೋಜನೆಯು ಯಾವುದೇ ಸಂಶಯಕ್ಕೆ ಎಡೆಯಿಲ್ಲದಂತೆ ಸ್ಪಷ್ಟವಾಗುತ್ತದೆ. ಎಲ್ಲ ಮನುಷ್ಯರೂ ಸ್ವತಂತ್ರವಾಗಿ ಹುಟ್ಟಿದ್ದಾರೆ. ಅವರಿಗೆ ತಮ್ಮಿಷ್ಟದ ಮಾರ್ಗವನ್ನು ಆರಿಸುವ ಸ್ವಾತಂತ್ರ್ಯವಿದೆ. ಅವರು ತಮ್ಮ ಪರಮ ದಯಾಮಯನಾದ ದೇವನು ತೋರಿಸಿಕೊಟ್ಟ ಮಾರ್ಗವನ್ನು ಅನುಸರಿಸಬಹುದು ಅಥವಾ ತಮಗಿಷ್ಟ ಬಂದ ಬೇರಾವುದೇ ಮಾರ್ಗವನ್ನು ಆರಿಸಿಕೊಳ್ಳಬಹುದು. ಈ ವಿಷಯದಲ್ಲಿ ಯಾವುದೇ ರೀತಿಯ ಒತ್ತಾಯ ಅಥವಾ ಬಲಾತ್ಕಾರವಿಲ್ಲ. ಧರ್ಮವು ದೃಢನಂಬಿಕೆ ಮತ್ತು ಸ್ವತಂತ್ರ ಆಯ್ಕೆಯನ್ನು ಅವಲಂಬಿಸಿದೆ. ಧರ್ಮ ಸ್ವೀಕಾರಕ್ಕೆ ಯಾರನ್ನಾದರೂ ಬಲಾತ್ಕಾರ ಮಾಡಿದರೆ ಇವು ಅರ್ಥಹೀನವೆನಿಸುತ್ತವೆ. ಇನ್ನು ಸತ್ಯಧರ್ಮವನ್ನು ನಿರಾಕರಿಸುವವನ

* ಮೂಲದಲ್ಲಿ 'ಕುಫ್ರ್' ಮತ್ತು 'ಕಾಫಿರ್' ಎಂಬ ಪದಗಳನ್ನೇ ಪ್ರಯೋಗಿಸಲಾಗಿದೆ.

ವಿಷಯ. ಅವನ ನೈಜ ಶಿಕ್ಷೆ ಶಾಶ್ವತ ಪರಲೋಕದಲ್ಲಿದೆ. ಈ ತಾತ್ಕಾಲಿಕ ಪರಿ
ಲೋಕದಲ್ಲಲ್ಲ. ಕುರ್‌ಆನ್ ಹೇಳುತ್ತದೆ: ಯಾರು ಸತ್ಯವನ್ನು ನಿರಾಕರಿಸುವನೋ,* ಅ
ನಿರಾಕರಣೆಯ ಅಪರಾಧ ಅವನ ಮೇಲೆಯೇ ಇದೆ. ಸತ್ಕರ್ಮ ಎಸಗಿದವರು ತಮಗಾಗಿ
(ಯಶಸ್ಸಿನ ಮಾರ್ಗವನ್ನು) ಸುಗಮಗೊಳಿಸುತ್ತಿದ್ದಾರೆ. (ಪವಿತ್ರ ಕುರ್‌ಆನ್: 30: 44)

ಪರಮ ದಯಾಮಯನಾದ ಸೃಷ್ಟಿಕರ್ತ ಪ್ರಭುವು ತನ್ನ ಅಂತಿಮ ಪ್ರವಾದಿಯ
ಮುಹಮ್ಮದ್‌ರನ್ನು(ಸ) ಇಡೀ ಮಾನವಕುಲಕ್ಕೆ ಅನುಗ್ರಹವಾಗಿ ಕಳುಹಿಸಿಕೊಟ್ಟಿದ್ದಾನೆ. ಅ
ಮೂಲಕ ತಮ್ಮ ಅಂತಿಮ ಸಂದೇಶವಾದ ಪವಿತ್ರ ಕುರ್‌ಆನನ್ನೂ ಸಮಸ್ತ ಮಾನವಕು
ಮಾರ್ಗದರ್ಶನವಾಗಿ ರವಾನಿಸಿದ್ದಾನೆ.

ಈ ದೈವಿಕ ಮಾರ್ಗದರ್ಶನದ ಬಗ್ಗೆ ಅಜ್ಞಾನದಲ್ಲಿರುವ ಜನರಿರಬಹುದು. ಅವ
ಸತ್ಯದ ಸಂದೇಶವನ್ನು ಮುಟ್ಟಿಸಬೇಕೆಂದು ಪವಿತ್ರ ಕುರ್‌ಆನ್ ತನ್ನನ್ನು ನಂಬಿದವ
ಆದೇಶಿಸಿದೆ. ಆ ವ್ಯಕ್ತಿ ಯುದ್ಧನಿರತ ರಾಷ್ಟ್ರಕ್ಕೆ ಸೇರಿದವನಾಗಿದ್ದರೂ ಸರಿಯೆ.

ಇನ್ನು ಜಿಹಾದ್‌ನ ವಿಷಯಕ್ಕೆ ಬರೋಣ. ಜಿಹಾದ್ ಅಂದರೆ ಧರ್ಮಯು
ಜಿಹಾದ್ ಅಂದರೆ ತನ್ನ ಚಿತ್ತವನ್ನು ದೈವಿಕ ನಿಯಮಕ್ಕೆ ಅಧೀನಗೊಳಿಸಲು ನಡೆಸುವಂತ
ಸಂಘರ್ಷ. ಜಿಹಾದ್ ಅಂದರೆ ಮನುಷ್ಯ ನ್ಯಾಯಕ್ಕಾಗಿ ಮಾಡುವ ಹೋರಾಟ. ಈ ಕಾಲದ
ಸಶಸ್ತ್ರ ಹೋರಾಟ ಮಾಡುವ ಅಗತ್ಯ ಬಹಳ ಕಡಿಮೆ. ಇದು ಪ್ರಜಾಸತ್ತೆಯ ಯುಗ.
ಯುಗದಲ್ಲಿ ಮಾತ್ರವಲ್ಲ. ಪ್ರವಾದಿವರ್ಯರ(ಸ) ಕಾಲದಲ್ಲಿ ಕೂಡಾ ಎಲ್ಲಿಯ ತ
ಶಾಂತಿಯುತವಾದ ರೀತಿಯಲ್ಲಿ ಈ ಹೋರಾಟವನ್ನು ನಡೆಸಲು ಸಾಧ್ಯವಿತ್ತೋ ಅಲ್ಲಿ
ತನಕ ಅದಕ್ಕಾಗಿ ಶಸ್ತ್ರ ಎತ್ತುವ ಅನುಮತಿಯಿರಲಿಲ್ಲ. ಜಿಹಾದ್ ಅಂದರೆ ನಿರಪರಾಧಿ
ಕೊಲೆಯಲ್ಲ. ಜಿಹಾದ್ ಅಂದರೆ ಅನ್ಯಾಯವಲ್ಲ. ಅದು ಎಲ್ಲ ರೀತಿಯ ಅನ್ಯಾಯಗಳಿ
ದುರ್ಬಲರ, ದೀನ-ದಲಿತರ ಮತ್ತು ಶೋಷಿತರ ರಕ್ಷಣೆಗಾಗಿ ಮಾಡುವ ಹೋರಾಟವಾಗಿ
ಪ್ರವಾದಿಯವರು(ಸ) ತಮ್ಮ ಕಾಲದಲ್ಲಿ ಅದನ್ನು ಮಾಡಿದ್ದಾರೆ. ಇಂದಿನ ಕಾಲದಲ್ಲೂ ಅದ
ಮಾಡಬೇಕು. ಪ್ರವಾದಿ ಮುಹಮ್ಮದ್‌ರಿಗೆ(ಸ) ಪವಿತ್ರ ಕುರ್‌ಆನ್ ಈ ರೀತಿ ಆದೇಶಿಸುತ್ತ
"ಈ ಕುರ್‌ಆನನ್ನು ತೆಗೆದುಕೊಂಡು ಅವರ ವಿರುದ್ಧ ಉಗ್ರ ಹೋರಾಟ ನಡೆಸಿರಿ." (25: 5
ಮೂಲದಲ್ಲಿ ಉಗ್ರ ಹೋರಾಟಕ್ಕೆ ದೊಡ್ಡ ಜಿಹಾದ್ ಎಂಬ ಪದವನ್ನು ಬಳಸಲಾಗಿ
ದೊಡ್ಡ ಜಿಹಾದ್ ಎಂದರೆ ಈ ಕುರ್‌ಆನಿನ ಮೂಲಕ ವೈಚಾರಿಕ ಹೋರಾಟ ನಡೆ
ವುದಾಗಿದೆ. ಅದು ಪ್ರತಿಪಾದಿಸುವ ತತ್ವ ಸಿದ್ಧಾಂತಗಳನ್ನು ಇತರ ಮಾನವ ನಿರ್ಮಿ
ಸಿದ್ಧಾಂತಗಳ ವಿರುದ್ಧ ಜಗತ್ತಿನ ಮುಂದಿರಿಸುವುದಾಗಿದೆ. ಪ್ರವಾದಿ ಮುಹಮ್ಮದ್ ರವರ(
ಒಂದು ವಚನದ ಪ್ರಕಾರ ದುಷ್ಟ ಮತ್ತು ಅನ್ಯಾಯಗಾರ ಆಡಳಿತಗಾರನ ಮುಂದೆ ಸ
ಮತ್ತು ನ್ಯಾಯವನ್ನು ಪ್ರತಿಪಾದಿಸುವುದು ದೊಡ್ಡ ಜಿಹಾದ್ ಆಗಿದೆ.

ಇನ್ನು ಧರ್ಮಯುದ್ಧವೆಂಬ ಅರ್ಥದಲ್ಲಿ ಜಿಹಾದ್‌ನ ಕುರಿತು ಕೆಲವು ಮಾತ

ವಾದಿ ಮುಹಮ್ಮದ್‌ರವರು(ಸ) ಮಕ್ಕಾದಲ್ಲಿ 13 ವರ್ಷ ಕಾಲ ಜೀವಿಸಿದ್ದರು. ಆ 13 ರ್ಷಗಳಲ್ಲಿ ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳು ಅನುಭವಿಸಿದ ಂಸೆ, ದೌರ್ಜನ್ಯಗಳಿಗೆ ಲೆಕ್ಕಮಿತಿಯಿರಲಿಲ್ಲ. ಆ ಸಂದರ್ಭಗಳಲ್ಲಿ ಅಲ್ಲಾಹನ ಆಜ್ಞೆ, ಮ್ಮ ಕೈಗಳನ್ನು ತಡೆದಿರಿಸಿರಿ" ಎಂದಾಗಿತ್ತು. ಯುದ್ಧ ಮಾಡುವ ಅನುಮತಿ ಅವರಿಗೆ ಲ್ಲಿ ಇರಲಿಲ್ಲ. ಎಲ್ಲ ರೀತಿಯ ಹಿಂಸೆ-ದೌರ್ಜನ್ಯಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳ ಕೆಂದೂ ಯಾವುದಕ್ಕೂ ಪ್ರತೀಕಾರವೆಸಗಬಾರದೆಂದೂ ಅವರಿಗೆ ಆದೇಶಿಸಲಾಗಿತ್ತು. ಸ್ಲಾಮಿನ ಕೇಂದ್ರ ಆರಾಧನಾಲಯವಾದ ಕಅಬಾ ಭವನದಲ್ಲಿ 360 ವಿಗ್ರಹಗಳನ್ನು ಸಲಾಗಿತ್ತು. ಆ ಕಅಬಾದ ಒಂದು ಭಾಗದಲ್ಲಿ ಪ್ರವಾದಿಯವರು(ಸ) ನಮಾಝ್ ಾಡುತ್ತಿದ್ದರು. ಅಲ್ಲಿಯೂ ಹಲವೊಮ್ಮೆ ಜನರು ಅವರನ್ನು ತಡೆಯುತ್ತಿದ್ದರು. ಕೆಲವೊಮ್ಮೆ ಮಾಝ್ ಮಾಡುವಾಗ ಪ್ರವಾದಿಯವರ(ಸ) ಕೊರಳಿಗೆ ಒಂಟೆಯ ಕರುಳಿನ ಮಾಲೆ ಕುತ್ತಿದ್ದರು. ಪ್ರವಾದಿ ಸಂಗಾತಿಗಳ ಮೇಲೆ ಹಿಂಸೆ-ದೌರ್ಜನ್ಯಗಳು ಮಿತಿಮೀರಿದಾಗ, ಾವು ಇನ್ನೇನು ಮಾಡಬೇಕು' ಎಂದು ಅವರು ಪ್ರವಾದಿವರ್ಯರಲ್ಲಿ(ಸ) ವಿಚಾರಿಸುತ್ತಿದ್ದ ದು ಕುರ್‌ಆನಿನಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕೆ ಪ್ರವಾದಿಯವರ(ಸ) ಉತ್ತರ, "ಸಹನೆ ಸಿರಿ" ಎಂದಾಗಿತ್ತು. ಕಟ್ಟ ಕಡೆಗೆ ಮಕ್ಕಾದಲ್ಲಿ ಪ್ರವಾದಿಯವರ(ಸ) ಕೊಲೆಯ ಸಂಚು ಾಡಿದ ನಂತರ ಪ್ರವಾದಿ(ಸ) ಮತ್ತು ಅವರ ಅನುಯಾಯಿಗಳು ಅಲ್ಲಿಂದ ಮದೀನಾಕ್ಕೆ ಲಸೆ ಹೋದರು. ಅಲ್ಲಿ ಹೋದ ನಂತರವೂ ತಮ್ಮ ಮನೆ-ಮಠಗಳಿಂದಲೂ ದೇಶದಿಂದಲೂ ಾರಹಾಕಲ್ಪಟ್ಟ ಜನರು ತಾವಾಗಿ ಯುದ್ಧಕ್ಕೆ ಮುಂದಾಗಿರಲಿಲ್ಲ. ಅದರ ಬಗ್ಗೆ ಕುರ್‌ಆನ್ ಗೆ ಹೇಳುತ್ತದೆ, "ಯಾರ ವಿರುದ್ಧ ಯುದ್ಧ ನಡೆಸಲಾಗುತ್ತಿದೆಯೋ ಅವರಿಗೆ ಅನುಮತಿ ಡಲಾಗಿದೆ. ಏಕೆಂದರೆ ಅವರು ಶೋಷಿತರಾಗಿದ್ದಾರೆ." **(22:39)** ಯುದ್ಧದ ಕುರಿತು ಬಂದ ಪ್ರಥಮ ಆದೇಶವಿದು. ಅತ್ಯಂತ ಯುದ್ಧಪ್ರಿಯರಾಗಿದ್ದ ಅರಬರು ಇಸ್ಲಾಮಿನ ಶಿಕ್ಷಣದ ರಣ ಎಷ್ಟು ಶಾಂತಿಪ್ರಿಯರಾದರೆಂದರೆ ಪ್ರವಾದಿಯವರ(ಸ) ಅನುಯಾಯಿ ಗಳಿಗೆ ುದ್ಧದ ಬಗ್ಗೆ ವೈರಾಗ್ಯ ಮೂಡಿತ್ತು. ಆದ್ದರಿಂದ ಅಲ್ಲಾಹನು ಕುರ್‌ಆನಿನಲ್ಲಿ ಹೀಗೆ ಳಿದನು, "ಯುದ್ಧವು ನಿಮ್ಮ ಮೇಲೆ ಕಡ್ಡಾಯಗೊಂಡಿದೆ. ಆದರೆ ಅದು ನಿಮಗೆ ರೋಚಕವಾಗಿದೆ." ಹೀಗೆ ಯುದ್ಧಕ್ಕೆ ಅನುಮತಿ ನೀಡಿದುದಕ್ಕೆ ಕುರ್‌ಆನ್ ಎರಡು ರಣಗಳನ್ನು ಕೊಡುತ್ತದೆ: 1) ಯಾವುದೇ ಆರಾಧನಾಲಯದ ಧ್ವಂಸವನ್ನು ತಡೆಯುವುದು ಸ್ಲಾಮೀ ಜಿಹಾದ್‌ನ ಉದ್ದೇಶವಾಗಿದೆ. 2) ಹೀಗೆ ಅಲ್ಲಾಹನು ಮಾನವರ ಒಂದು ಾಗವನ್ನು ಇನ್ನೊಂದು ವಿಭಾಗದ ಮೂಲಕ ನೀಗಿಸಿ ಬಿಡದಿರುತ್ತಿದ್ದರೆ ಭೂಮಿಯ ವಸ್ಥೆಯು ಕೆಟ್ಟು ಹೋಗುತ್ತಿತ್ತು. **(2:251)** ಒಂದು ವರ್ಗದ ಜನರು ಭೂಮಿಯಲ್ಲಿ ಾಜಕತೆಯನ್ನುಂಟು ಮಾಡಲು ಹೊರಟರೆ ಅವರ ವಿರುದ್ಧ ಯುದ್ಧಕ್ಕೆ ಅನುಮತಿಯಿದೆ. ರೀತಿ ಇಸ್ಲಾಮ್ ಅತ್ಯಂತ ಅನಿವಾರ್ಯ ಪರಿಸ್ಥಿತಿಯಲ್ಲಿ ಒಂದು ಇಸ್ಲಾಮೀ ರಾಷ್ಟ್ರಕ್ಕೆ ರ್ಮಯುದ್ಧದ ಅನುಮತಿ ನೀಡುತ್ತದೆ.

ಇಸ್ಲಾಮಿನ ಆದೇಶ ಪ್ರಕಾರ ನಡೆದಂತಹ ಯುದ್ಧದ ವೇಳೆಯಲ್ಲಿಯೂ ಸೇನೆ ಜನಸಾಮಾನ್ಯರನ್ನು, ವೃದ್ಧರನ್ನು, ಮಹಿಳೆಯರನ್ನು ಮತ್ತು ಮಕ್ಕಳನ್ನು ಸಂರಕ್ಷಿಸುವಂ ಹಾಗೂ ಆಕ್ರಮಿತ ಪ್ರದೇಶದ ಪೈರು, ತೋಟ, ಸಾರ್ವಜನಿಕ ಸೊತ್ತು-ವಿತ್ತಗಳನ ಸಂರಕ್ಷಿಸುವಂತೆ ಆಜ್ಞಾಪಿಸಲಾಗುತ್ತಿತ್ತು. ಇಸ್ಲಾಮಿನ ಇತಿಹಾಸದಲ್ಲಿ ಯಾವುದೇ ನಿರಪರಾ ಜನರನ್ನು ಕೊಂದ ಬಗ್ಗೆ ಅಥವಾ ಭಿನ್ನ ಧಾರ್ಮಿಕ ಚಿಂತನೆಗಳನ್ನು ಹೊಂದಿದ ಕಾರಣಕ್ಕಾ ಶೋಷಣೆಗೆ ಒಳಪಡಿಸಿದ ಒಂದು ಘಟನೆಯೂ ಜರಗದಿರುವುದು ಇಸ್ಲಾಮಿನ ನ್ಯಾಯಪ ಶಾಂತಿಯುತ, ಸೌಹಾರ್ದಮಯ ಬೋಧನೆಗಳಿಗೆ ಹಿಡಿದ ಕನ್ನಡಿಯಾಗಿದೆ.

ಜಿಹಾದ್ ಅಥವಾ ಇಸ್ಲಾಮೀ ಯುದ್ಧಗಳನ್ನು ಜಗತ್ತಿನ ಇತರ ಯುದ್ಧಗಳೊಂದಿ ತಳಕು ಹಾಕುವುದೇ ಒಂದು ಆಭಾಸವಾಗಿದೆ. ಜಿಹಾದ್‌ನ ದೃಷ್ಟಿಕೋನ, ಧ್ಯೇಯೋದ್ದೇಶ ಜಿಹಾದ್‌ಗೆ ಕಾರಣಗಳು, ಅದಕ್ಕೆ ಪ್ರೇರಣೆಗಳು ಜಗತ್ತಿನ ಇತರ ಯುದ್ಧಗಳಿಗಿಂತ ತೀ ಭಿನ್ನವಾಗಿದೆ. ಈ ಯುದ್ಧಗಳಲ್ಲಿ ಹೋರಾಡುವವರು ಹೋರಾಡಿ, ತಮ್ಮ ಶತ್ರುಗಳನ ಸೃಷ್ಟಿಸಲಿಲ್ಲ. ಏಕೆಂದರೆ ಅವರು ತಮ್ಮ ವೈಯಕ್ತಿಕ ದ್ವೇಷ, ಅಸೂಯೆ, ಹಗೆತ ಸಾಧಿಸಲಿಕ್ಕಾಗಿ ಹೋರಾಡಿರಲಿಲ್ಲ. ಅಲ್ಲಿ ತಂದೆ ಮಕ್ಕಳೊಂದಿಗೆ, ಸಹೋದ ಸಹೋದರರೊಂದಿಗೆ, ಮಿತ್ರರು ಮಿತ್ರರೊಂದಿಗೆ ಹೋರಾಡಿದ್ದರು. ಇದರಿಂದ ಹೋರಾಟ ಕಾರಣ ಬೇರೆಯೇ ಇತ್ತೆಂದು ವ್ಯಕ್ತವಾಗುತ್ತದೆ. ಮುಸ್ಲಿಮರ ವಿರುದ್ಧ ಹೋರಾಡಿದವರಿ ಯುದ್ಧದ ನೈಜತೆಯ ಅರಿವಾದಾಗ ಅವರು ತಮ್ಮ 'ಶತ್ರು'ಗಳನ್ನು ಆಲಂಗಿಸಿಕೊಂಡರು

ಜಿಹಾದ್‌ನ ಉದ್ದೇಶ ಸಂಪತ್ತಿನ ಗಳಿಕೆ, ಸಾಮ್ರಾಜ್ಯ ವಿಸ್ತರಣೆಯ ಹೆಬ್ಬಯಕೆ ದುರ್ಬಲ ರಾಷ್ಟ್ರಗಳ ಮೇಲೆ ಶಕ್ತಿ ಪ್ರದರ್ಶನ ಮಾಡುವುದಲ್ಲ. ಜಿಹಾದ್‌ನ ಮೂ ಉದ್ದೇಶ, ಸಮಾಜದಲ್ಲಿ ಕ್ಷೋಭೆಯನ್ನು ಕೊನೆಗಾಣಿಸುವುದಾಗಿದೆ. ಸಮಾಜದಲ್ಲಿ ಎಲ್ಲರಿಗೂ ಗೌರವದಿಂದ, ಸ್ವಾಭಿಮಾನದಿಂದ ಬಾಳುವ ಹಕ್ಕಿದೆ. ತಮಗೆ ಸರಿ ಕಂಡ, ತಾವ ಉತ್ತಮವೆಂದು ಸ್ವೀಕರಿಸಿದ ಧಾರ್ಮಿಕ ಚಿಂತನೆಯಂತೆ ಬಾಳುವ ಹಕ್ಕಿದೆ. ಯಾರಿಗೂ ಹಕ್ಕನ್ನು ಕಸಿಯುವ, ಆ ಹಕ್ಕಿನಿಂದ ವಂಚಿತರನ್ನಾಗಿ ಮಾಡುವ ಅಧಿಕಾರವಿಲ್ಲ. ವಿಶೇಷವಾ ಸೃಷ್ಟಿಕರ್ತನ ಸಂದೇಶ ಇಡಿಯ ಮಾನವ ಕುಲಕ್ಕಾಗಿದ್ದು, ಇದರಿಂದ ಭೂಲೋಕದಲ್ಲಿ ಶಾಂತಿ, ಕ್ಷೇಮ, ಸುಭಿಕ್ಷೆ ನೆಲೆಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಜಿಹಾದ್‌ನ ಬಗ್ಗೆ ಇಸ್ಲಾಮಿನ ಬೋಧನೆ ಇದಾಗಿದೆ. ಮಾರಣ ಹೋಮ ಇಸ್ಲಾಮಿ ಬೋಧನೆಯಾಗಿರುತ್ತಿದ್ದರೆ ಯುದ್ಧಪ್ರಿಯರಾಗಿದ್ದ ಅರಬರಿಂದ ಲಕ್ಷಗಟ್ಟಲೆ ಪ್ರಾ ಹರಣವಾಗಬೇಕಿತ್ತು. ಪ್ರವಾದಿ ಮುಹಮ್ಮದ್‌ರವರ(ಸ) ನೇತೃತ್ವದಲ್ಲಿ ನಡೆದ ಯುದ್ಧಗಳಲ್ಲಿ ಇತ್ತಂಡಗಳಲ್ಲಿ ಮಡಿದವರ ಸಂಖ್ಯೆ ಕೇವಲ 384 ಆಗಿತ್ತು. ಜಿಹಾದ್‌ನ ಈ ಸ್ಫೂರ್ತಿ ಯಿಂದಾಗಿಯೇ ಇದಕ್ಕೆ ಆರಾಧನೆಯ ಸ್ಥಾನವನ್ನು ನೀಡಲಾಯಿತು. ಒಳಿತಿನ ಕಾರ್ಯಗಳಲ್ಲಿ ಶ್ರೇಷ್ಠ ಕಾರ್ಯ ಜಿಹಾದ್ ಎಂದು ಸಾರಲಾಯಿತು.

❖ ❖ ❖ ❖